# DAMAGE BOOK

UNIVERSAL LIBRARY
OU_198027
UNIVERSAL LIBRARY

॥ ಶ್ರೀ ॥

" न हि ज्ञानेन सदृशं पवित्रमिह विद्यते " ಭಗವದ್ಗೀತಾ

# ಶ್ರೀ ಸರಸ್ವತೀ ಭಾರತ ಗ್ರಂಥಮಾಲೆಯ

## ವಿಜ್ಞಾಪನಾ ಪತ್ರಿಕೆಯು.

**ಈ ಮಾಲೆಯ ಉದ್ದೇಶವು:**—(೧) ಸುಪ್ರಸಿದ ಸಾಧುಸತ್ಪುರುಷ ಹಾಗೂ ರಾಷ್ಟ್ರಭಕ್ತರ ಚರಿತ್ರೆಗಳನ್ನು ಹೃದಯಂಗಮವೂ, ಸ್ಫೂರ್ತಿದಾಯಕವೂ ಆಗುವಂತೆ ರಚಿಸಿ, ತನ್ಮೂಲಕ ಜನತೆಯಲ್ಲಿ ಸ್ವಧರ್ಮ, ಸ್ವಾಭಿಮಾನಾದಿ ಗುಣಗಳು ಅಭಿವೃದ್ಧಿಯಾಗುವಂತೆ ಪ್ರಯತ್ನಿಸುವದು.

(೨) ಸ್ವತಂತ್ರ ವಿಚಾರಗಳಿಂದ ಪೂರಿತವಾದ ಪುಟ್ಟ ಪ್ರಬಂಧಗಳನ್ನು ಪ್ರಕಟಗೊಳಿಸಿ ಕನ್ನಡ ವಾಙ್ಮಯೋಪವನಶ್ರೀಯನ್ನು ಯಥಾಮತಿ ಹೆಚ್ಚಿಸುವದು.

**ನಿಯಮಾವಲಿಗಳು:**—(೧) ಈ ಮಾಲೆಯ ವರ್ಷಾರಂಭವು ಜ್ಯಾನ್ಯುವರಿ ೧೯೩೨. (೨) ಪ್ರತಿ ಷಣ್ಮಾಸಕ್ಕೊಮ್ಮೆ ೫ ಅಥವಾ ೬ ಪುಟ್ಟ ಪ್ರಬಂಧಗಳಂತೆ ವರ್ಷಕ್ಕೆ ಎರಡು ಸಾರೆ ಪುಸ್ತಕಗಳನ್ನು ಪ್ರಸಿದ್ಧಗೊಳಿಸುವದು. (೩) ಪುಸ್ತಕವು ಪ್ರಸಿದ್ಧಿಸಲ್ಪಡತಕ್ಕ ಮಾಸಗಳು, ಜ್ಯಾನ್ಯುವರಿ ಮತ್ತು ಜುಲೈ. (೪) ಪ್ರತಿ ಪ್ರಬಂಧದ ಬೆಲೆಯು ನಾಲ್ಕು ಆಣೆಗಿಂತ ಹೆಚ್ಚಿಗಿರದು. (೫) ಪ್ರತಿ ಷಣ್ಮಾಸದಲ್ಲಿ ಗ್ರಂಥಗಳು ಪ್ರಚುರಗೊಂಡನಂತರ ಎಲ್ಲಾ ಪುಸ್ತಕಗಳನ್ನು ಒಮ್ಮೆಲೆ, ಸಮಕ್ಷಮ ಅಥವಾ ವ್ಹಿ. ಪೀ. ಯಿಂದ ಗ್ರಾಹಕರಿಗೆ ಮುಟ್ಟಿಸುವ ವ್ಯವಸ್ಥೆ ಮಾಡುವದು. (೬) ಒಮ್ಮೆ ಗ್ರಾಹಕರಾದ ಮಹನೀಯರನ್ನು ಶಾಶ್ವತ ಆಶ್ರಯದಾತೃಗಳಂತೆ ಭಾವಿಸಿ ಅವರಿಗೆ ಪ್ರತಿ ಆರು ತಿಂಗಳಿಗೆ ನಮ್ಮ ಮಾಲೆಯ ಎಲ್ಲ ಗ್ರಂಥಗಳನ್ನು ಕಳಿಸುತ್ತ ಹೋಗುವದು. (ಆದರೆ ಎರಡನೇ ಸಾರೆ ಗ್ರಾಹಕರಾಗಲಿಚ್ಛಿಸದವರು ಮೊದಲೇ ನಮಗೆ ತಿಳಿಸತಕ್ಕದ್ದು.) (೭) ಈ ಪ್ರಯತ್ನಕ್ಕೆ ಪೂರ್ಣಾಶ್ರಯವು ದೊರೆತರೆ ಮುಂದೆ ಪ್ರತಿಮಾಸಕ್ಕೆ ಒಂದರಂತೆ ಹೊರಡಿಸುವದು. (೮) ಈ ಮಾಲೆಯಲ್ಲಿ ಸುಪ್ರಸಿದ್ಧ ವಿದ್ವಾಂಸರಿಂದ ಗ್ರಂಥಗಳು ರಚಿಸಲ್ಪಡುವವು. (೯) ಈ ಮಾಲೆಯಲ್ಲಿ ಹೊಸದಾಗಿ ಲೇಖನಕಾರ್ಯವನ್ನು ಕೈಕೊಳ್ಳಲಿಚ್ಛಿಸುವ ಕೇವಲ ಸಂಸ್ಥೆಯ ಆಶ್ರಯದಾತೃಗಳು ತಮ್ಮ ಪ್ರಬಂಧಗಳನ್ನು ಸಂಪಾದಕರ ಕಡೆಗೆ ಕಳುಹಿಸಬಹುದು. ಅವುಗಳು ನಮ್ಮ ಮಂಡಲಕ್ಕೆ ಸಮ್ಮತವಾದಲ್ಲಿ ಮುದ್ರಿಸಲ್ಪಡುವವು. ಇದಾಗದ ಪಕ್ಷದಲ್ಲಿ ರಜಿಸ್ಟರಕ್ಕೆ ತಗಲುಹುದಾದ ಹಣಕ್ಕೆ ತಿರುಗಿ ಗ್ರಂಥಕಾರರಿಗೆ ವ್ಹಿ. ಪಿ. ಮಾಡಲಾದೀತು. (೧೦) ಈ ನವ ಲೇಖಕರು ನಮ್ಮ ಮಾಲೆಗೆ ಕನಿಷ್ಠ ಪಕ್ಷಕ್ಕೆ ೨೫ ಆಶ್ರಯದಾತೃಗಳನ್ನು ಮಾಡಿಕೊಡಬೇಕು.

## ದಿ ಇಂಡಿಯನ್ ಡಾಯಿಂಗ ಎಂಡ ವೀವ್ಹಿಂಗ ಕಂಪನಿ ಧಾರವಾಡ.

# ಸ್ವದೇಶೀ ಕುಬಸಗಳ ಜಾಹೀರಾತ.

ಧಾರವಾಡದ ಪಕ್ಕಾ ರೇಶ್ಮೆ ಅಂಚಿನ ಕುಬಸದ ಖಣಗಳು. ನೂರಾರು ನಮೂನೆಯು ತರದವು. ಬೇರೆ ಬೇರೆ ಬಣ್ಣದವು. ಈಗಿನ ಪದ್ಧತಿಯಂತೆ ಫ್ಯಾಶನೆಬಲ್ ಖಣಗಳು ನಮ್ಮ ಕಾರಖಾನೆಯಲ್ಲಿ ತಯಾರಾಗುತ್ತವೆ. ಇವುಗಳ ಅಂಚು ಸಣ್ಣವೂ ದೊಡ್ಡವೂ ಆಗಿದ್ದು ೧। ರೂಪಾಯಿಯಿಂದ ೩ ರೂಪಾಯಿಗಳ ವರೆಗೆ ಬೆಲೆಯುಳ್ಳವು ಉಂಟು. ಇಂಥ ಒಂದು ಖಣದ ಉದ್ದಳತಿಯು ೩೦ ಇಂಚಾಗಿರುವದು. ಇದಕ್ಕೂ ಹೆಚ್ಚು ಉದ್ದವಾದ ಖಣವು ಬೇಕಾದರೆ ಅಂಥದೂ ನಮ್ಮಲ್ಲಿ ದೊರೆಯುವದು. ವ್ಯಾಪಾರಸ್ಥರು ಒಂದಾವರ್ತಿ ನಮ್ಮ ಮಾಲನ್ನು ತರಿಸಿಕೊಂಡು ಖಾತ್ರಿಮಾಡಿಕೊಳ್ಳಬಹುದು. ಮಾಲನ್ನು ವ್ಹೀ. ಪೀ. ಪೀ. ಯಿಂದ ನಾವು ಕಳಿಸುವೆವು.

ಕಾಮನಕಟ್ಟೀಗಲ್ಲಿ,<br>ಜಿಲ್ಹಾ, ಧಾರವಾಡ.

ಚನಬಸಪ್ಪಾ ಸಂಗನಬಸಪ್ಪಾ ಮಿಣಜಗಿ.<br>ಕಾಮನಕಟ್ಟೀಗಲ್ಲಿ, ಧಾರವಾಡ.

---

## THE ANKALIGI BANK Ltd. DHARWAR.

ದಿ ಅಂಕಲಗಿ ಬ್ಯಾಂಕ ಲಿಮಿಟೆಡ್, ಧಾರವಾಡ.

೧೯೧೩ ಇಸ್ವಿಯು

ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಠೇವು, ಸೆವ್ಹಿಂಗ್ಸದ ಡಿಪಾಜಿಟ, ಸಾಲ, ವತ್ತಿ, ಹುಂಡಿ ಮುಂತಾದ ಯಾವತ್ತು ವ್ಯವಹಾರಗಳು ನಡಿಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿಮಾಡುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦-೩೦. ಸಾಯಂಕಾಲ ೩ ರಿಂದ ೬ ರವರೆಗೆ ನಡಿಯುವದು.

K. B. Ankaligi,<br>ಮ್ಯಾನೇಜಿಂಗ ಡಾಯರೆಕ್ಟರ.

# ಪ್ರತಿಯೊಬ್ಬರಿಂದ ಸಂಗ್ರಹಣೀಯ ಪುಸ್ತಕಗಳು.

| | | ರೂ. ಆ. ಪೈ. |
|---|---|---|
| ೧. | ಜ್ಞಾನಸಿಂಧು ವಚನರೂಪ (ಲೇ. ಗುಂಡಪ್ಪ ಶಾಸ್ತ್ರಿ ಕವಿ.) | ೩-೮-೦ |
| ೨. | ಶ್ರೀ ಸಿದ್ಧಾರೂಢಸ್ವಾಮಿ ಚರಿತ್ರೆ | ೧-೦-೦ |
| ೩. | ಹಾತಿಮತಾಯಿ (ಮನೋಹರವಾದ ಕಥೆಗಳಿಂದ ಯುಕ್ತವು) | ೧-೧೨-೦ |
| ೪. | ಸಂತಶಿವ ದೀಪಿಕಾ | ೧-೦-೦ |
| ೫. | ಅಡವಿಯ ಹುಡುಗೆ | ೦-೧೩-೦ |
| ೬. | ಪ್ರಬುದ್ಧ ಪದ್ಮನಯನೆ | ೧-೦-೦ |
| ೭. | ದಮಯಂತೀ ಕಲ್ಯಾಣ | ೦-೧೨-೦ |
| ೮. | ಖಿಲಾಪತವೂ, ಇಂಗ್ಲಂಡವೂ | ೧-೪-೦ |
| ೯. | ಧಾತುರಂಜಿತ ವೈದ್ಯರತ್ನ | ೧-೮-೦ |
| ೧೦. | ಆರೋಗ್ಯ ಜೀವನ (ಹರಡೇಕರ) | ೦-೮-೦ |
| ೧೧. | ಗರ್ಭಿಣಿ ಶಿಶುರಕ್ಷಕ | ೧-೩-೦ |
| ೧೨ | ಪ್ರಭುಲಿಂಗಲೀಲೆ ವಚನ (ಬಿಳೇ ಅಂಗಡಿಕೃತ) | ೧-೦-೦ |
| ೧೩. | ವೀರಶೈವರ ಜೋಗಳಪದ | ೦-೪-೦ |
| ೧೪. | ಸ್ತ್ರೀ ಧರ್ಮನೀತಿ | ೦-೧೨-೦ |
| ೧೫. | ದೇವೀ ಪುರಾಣ ವಾಲಿಗಳು | ೪-೦-೦ |
| ೧೬. | ಪುರಂದರದಾಸರ ಪದಗಳು ೩ ಭಾಗಗಳು ಕೂಡಿ (ಬೇರೆ ಬೇರೆ) | ೧-೧೪-೦ |
| ೧೭ | ಭೋಜಪ್ರಬಂಧ ನಾಟಕ | ೧-೪-೦ |
| ೧೮. | ಕಬೀರದಾಸರ. ನಾಟಕ | ೧-೦-೦ |
| ೧೯. | ಪಶ್ಚಾತ್ತಾಪ | ೧-೦-೦ |
| ೨೦. | ಸಂಗೀತ ಸ್ವರಬೋಧಿನಿ | ೦-೧೨-೦ |
| ೨೧. | ಇಂಡಿಯನ್ ಪೀನಲ್‌ಕೋಡು | ೩-೮-೦ |
| ೨೨. | ಕನ್ನಡ ಇಂಗ್ಲೀಷ ಸ್ವಯಂಸೇವಕ ಟೀಚರ | ೧-೮-೦ |

ನಮ್ಮ ಡಿಪೋದಲ್ಲಿ ಎಲ್ಲ ತರದ ಪುಸ್ತಕಗಳು ಸಿಗುತ್ತವೆ. ವ್ಹೀ. ಪೀ. ಯಿಂದ ತರಿಸಿಕೊಳ್ಳಿರಿ.

ಎ. ಆರ್. ಶಿವನಾಗಪ್ಪಾ, ವಾಗ್ವಿಲಾಸ ಬುಕ್‌ಡಿಪೋ,

ಪಬ್ಲಿಶರ, ಹುಬ್ಬಳ್ಳಿ.

" ಶ್ರೀ ಕೃಷ್ಣ ಸಂದೇಶ "

ಎಂಬ

## ಮಧ್ವಸಿಂದ್ಧಾಂತ ಪ್ರತಿಪಾದಕ ಮಾಸಿಕವು.

ಸಂಪಾದಕ:— ಶ್ರೀ. ಶ್ರೀನಿವಾಸಾಚಾರ್ಯ ಬುರ್ಲಿ, ಬಾಗಲಕೋಟೆ.

ಜಾಹೀರಾತಿನ ಸಲುವಾಗಿ ಪತ್ರವ್ಯವಹಾರವನ್ನು ಮಾಡಬಹುದು.

ವಾರ್ಷಿಕ ಚಂದಾ, (ಅಂಚೇವೆಚ್ಚ ಸೇರಿ) ೩ ರೂ. ೬ ಅ.

ವ್ಯವಸ್ಥಾಪಕ—ಶ್ರೀಕೃಷ್ಣ ಸಂದೇಶ, ಬಾಗಲಕೋಟ.

---

## ಕರ್ನಾಟಕದಲ್ಲಿಯ ದೊಡ್ಡ ಕೊರತೆಯು ದೂರಾಯಿತು.

ಈ ಸೀಮೆಯಲ್ಲಿ ಕೆಮಿಸ್ಟರ (ರಸಾಯನ ಶಾಸ್ತ್ರಜ್ಞರ) ಅಂಗಡಿಯು ಬಹು ದಿವಸದಿಂದ ಇದ್ದಿದ್ದಿಲ್ಲ. ಆದ್ದರಿಂದ ಇಂಥದೊಂದು ಅಂಗಡಿಯನ್ನು ಹೊರಡಿಸಿ ಕರ್ನಾಟಕಕ್ಕೆ ಒದಗಿದ ಒಂದು ದೊಡ್ಡ ಕೊರತೆಯನ್ನು ನಾವು ಹೋಗಲಾಡಿಸಿರುವೆವು. ವೀರಿಯಲ್, ಅಂಬ್ರೋಸಿಯಾ, ಸುವರ್ಣರಾಜವಂಗ, ಆಲ್ಕಲಾಯಿಡಲ್ ಮತ್ತು ಅಲೆಂಬಿಕ್ ಕಂಪನಿಯ ಔಷಧಗಳೂ, ಅಮೇರಿಕನ್-ಜರ್ಮನ್-ಇಂಗ್ಲೀಶ್ ಮುಂತಾದ ಪೇಟಂಟ ಔಷಧಗಳೂ ನಮ್ಮಲ್ಲಿ ಯೋಗ್ಯ ಕ್ರಯಕ್ಕೆ ದೊರೆಯುವವು.

ನಮ್ಮ ವಿಳಾಸ:— ದಿ ಕನಕಾದಿತ್ಯ ಮೆಡಿಕಲ್ ಸ್ಟೋರ್ಸ್,
ಕೆಮಿಸ್ಟ ಯ್ಯಾಂಡ ಡ್ರಗಿಸ್ಟ,
ಸ್ಟೇಶನ್ ರೋಡ, ಹುಬ್ಬಳ್ಳಿ.


---

# ರಾಜಹಂಸ.

ಇವರಲ್ಲಿ ಶೈಕ್ಷಣಿಕ, ನೈತಿಕ, ಸಾಮಾಜಿಕ, ಔದ್ಯೋಗಿಕ, ಮತ್ತು ರಾಜಕೀಯ ವಿಷಯಗಳಿಗೆ ಸಂಬಂಧಿಸಿದ ಸರಸಲೇಖಗಳೂ, ವ್ಯಾಪಾರಿ ಸುದ್ದಿಗಳೂ, ಬರುವವು; ಇದಲ್ಲದೆ ಪತ್ರವ್ಯವಹಾರಗಳು ಕಾಯದೇಸೇರಿದ್ದಲ್ಲಿ ಸ್ಥಳದ ಅನುಕೂಲತೆಯ ಪ್ರಕಾರ ಹಾಕಲ್ಪಡುವವು.

## ವರ್ಗಣೀ ದರಗಳು.

| ದೈನಿಕ ರಾಜಹಂಸ | ವಾರಪತ್ರಿಕೆ |
|---|---|
| ೧ ವರ್ಷಕ್ಕೆ ೧೨ ರು. | ೧ ವರ್ಷಕ್ಕೆ ೩ ರೂ. |
| ೬ ತಿಂಗಳಿಗೆ ೭ ರು. | ೬ ತಿಂಗಳಿಗೆ ೧ರೂ ೧೨ಆ. |
| ೩ ತಿಂಗಳಿಗೆ ೪ ರು. | ೩ ತಿಂಗಳಿಗೆ ೧ ರೂ. |
| ೧ ತಿಂಗಳಿಗೆ ೧॥ ರು. | ೧ ತಿಂಗಳಿಗೆ ೬ ಆಣೆ |
| ಬಿಡಿ ಪತ್ರ ೧ಕ್ಕೆ ೬ ಪೈ | ಬಿಡಿ ಪತ್ರ ೧ಆಣೆ |

ಇದರಲ್ಲಿ ಟಪಾಲು ಖರ್ಚು ಸಹ ಸೇರಿರುತ್ತದೆ.

## ನೋಟೀಸಿನ ದರಗಳು

೧ ರಾಜಹಂಸದ ಸಿಂಗಲ್ ಕಾಲಮಿನ ಪ್ರತಿ ಕನ್ನಡ ಹತ್ತುವಳಿಗಳಿಗೆ ೧ ರೂ. ೨ ಮರಾಠಿ ಸಿಂಗಲ್ ಕಾಲಮ್ಮಿನ ಪ್ರತಿ ಒಂದುಸಾಲಿಗೆ ೩ ಆಣೆಯಂತೆ. ೩ ಇಂಗ್ಲಿಷ ಸಿಂಗಲ್ ಕಾಲಮಿನ ಪ್ರತಿ ಒಂದು ಸಾಲಿಗೆ ೫ ಆಣೆಯಂತೆ. ೪ ನೋಟೀಸನ್ನು ಎರಡಾವರ್ತಿ ಛಾಪಿಸುವದಾದರೆ ಮೊದಲಿನ ಸಾರೆಗಿಂತ ಕಡಿಮೆ ದರ, ೪।೫ ಸಾರೆ ಛಾಪಿಸುವದಾದರೆ ಮೊದಲನೇ ಸಾರೆಯ ಅರ್ಧ ದರ ಬೀಳುವದು. ಕಾಯಮ ಜಾಹೀರಾತ ಇಡುವವರು ಸಮಕ್ಷಮ ಅಥವಾ ಟಪಾಲ ದ್ವಾರದಿಂದ ತಿಳುಕೊಳ್ಳಬಹುದು.

॥ ಹರಿ ಓಂ ॥

" ಸಿರಿಗನ್ನಡಂ ಗೆಲ್ಗೆ "

ಶ್ರೀ ಸರಸ್ವತೀ ಭಾರತ ಭಕ್ತ ಗ್ರಂಥಮಾಲಾ.

( ಷಣ್ಮಾಸಿಕ. )

ಹುಬ್ಬಳ್ಳಿ.

( ತ್ರಯೋದಶ ಕುಸುಮ )

# ಸರ ಜಗದೀಶ ಚಂದ್ರ ಬೋಸ.

ಲೇಖಕ ಮತ್ತು ಸಂಪಾದಕ.

ಕೃಷ್ಣ ಗುರು ಸಂಗಮ.

ತಾ॥ ೧ ೬-೨೭ ವರ್ಷ. ೨. ಬೆಲೆ. ೦-೪-೦

ವಾರ್ಷಿಕ ಚಂದ ೨॥ ರೂ. ಮಾತ್ರ; ಅಂಚೇ ವೆಚ್ಚ ಬೇರೆ.

Printed by **M. K. Joshi,**

at the Karnatak Printing works, Dharwar.

and published by

**Krishna Guru Sangam,** the editor,

at the office of

Shree Saraswati Bharat Bhakta Granthamala.

**HUBLI.**

# ಅನುಕ್ರಮಣಿಕೆಯು


| ದಲಗಳು. | ಪುಟಗಳು |
|---|---|
| ಮುನ್ನುಡಿ. | |
| ೧. ಜಗದೀಶ ಚಂದ್ರ ವಂಗವು | ೧ ರಿಂದ ೫ ರ ವರೆಗೆ. |
| ೨. ಶಾಸ್ತ್ರೀಯ ಪರಿಶ್ರಮವು. | ೫ " ೮ " |
| ೩. ವಿವಿಧ ಶೋಧಗಳು. | ೯ " ೧೧ " |
| ೪. ದಿಗ್ವಿಜಯವು. | ೧೧ " ೧೪ " |
| ೫. ಬೋಸ ಸಂಶೋಧನ ಮಂಡಲ. | ೧೫ " ೨೦ " |
| ೬. ಜೀವಿತ ರಹಸ್ಯವು. | ೨೧ " ೨೩ " |
| ೭. ಭಾಷಣಗಳ ಅವತರಣಿಕೆಗಳು. | ೨೩ " ೩೬ " |
| ೮. Researches and Discoveries. | ೩೬ " ೪೦ " |
| ಹೆಚ್ಚೋಲೆ. (Appendix) | ೪೧ " ೪೪ " |

# ಮುನ್ನುಡಿ.

ಸಾಂಪ್ರತ ಕಾಲದಲ್ಲಿ ಎತ್ತ ನೋಡಿದತ್ತ ರಾಜಕೀಯ ಸ್ವಾತಂತ್ರ್ಯವನ್ನು ಪಡೆಯಲು ಜನತೆಯು ಹಾತೊರೆಯುತ್ತಿರುವದು ಸಕಲರ ದೃಷ್ಟಿಗೂ ಗೋಚರವಾಗುವಂತಿದೆ. ಇದೇ ಒಂದು ಮನುಷ್ಯನು ಮಾಡತಕ್ಕ ಕರ್ತವ್ಯವು; ಇದರಿಂದಲೇ ಅವನ ಸ್ವದೇಶಾಭಿಮಾನವು ವ್ಯಕ್ತವಾಗುತ್ತದೆ; ಈ ರಾಜಕಾರಣವನ್ನು ಬಿಟ್ಟು ಇನ್ನಿತರ ದೇಶಸೇವೆಯ ಮಾರ್ಗವಿಲ್ಲವಂತೆ; ಇವೇ ಮೊದಲಾದ ಭ್ರಾಮಕ ಕಲ್ಪನೆಗಳು ನಮ್ಮಲ್ಲಿ ಈಗ ತಾನೇ ತಲೆದೋರಹತ್ತಿವೆ. ಇದೆಲ್ಲ ಮನಸ್ಸಿನ ದೌರ್ಬಲ್ಯತೆಯೇ ಸರಿ. ಅಂತಿಮ ಧ್ಯೇಯವನ್ನು ಸಾಧಿಸಲು ಅನೇಕ ಮಾರ್ಗಗಳುಂಟು. ಕೆಲವರು ಒಂದು ಮಾರ್ಗವನ್ನೂ, ಇತರರು ಮತ್ತೊಂದು ಮಾರ್ಗವನ್ನೂ ತಮ್ಮ ಪ್ರಕೃತಿ ಗುಣಧರ್ಮಕ್ಕನುಗುಣವಾಗಿ ಅನುಸರಿಸುವರು. ಇದರಲ್ಲಿ ಮಾರ್ಗಗಳ ಭಿನ್ನತ್ವವುಂಟೇ ಹೊರತು ಸಾಧ್ಯ ವಸ್ತುವಿನಲ್ಲಿ ವ್ಯತ್ಯಯವಿರಲಾರದು. ಮಾರ್ಗಗಳ ಭಿನ್ನತೆಯ ಗೋಸ್ಕರ ಧ್ಯೇಯವನ್ನು ವಿಪರೀತವಾದ ರೀತಿಯಲ್ಲಿ ಭಾವಿಸುವದೆಂದರೆ ಕೇವಲ ಭ್ರಮೆಯೇ ಸರಿ. ಮೇಲಿನ ವಿಧಾನದ ಯಥಾರ್ಥತೆಗಾಗಿ ನಾವು ಜಗದೀಶ ಚಂದ್ರರ ಜೀವನದ ಕಡೆಗೆ ಕೊಂಚ ಲಕ್ಷ್ಯಕೊಡುವಾ. ಈ ಮಹನೀಯರು ತಮ್ಮ ಅಸಾಧಾರಣವಾದ ಬುದ್ಧಿಮತ್ತೆಯಿಂದ ಅನೇಕ ಶಾಸ್ತ್ರೀಯ ಚಮತ್ಕೃತಿಗಳ ಶೋಧಹಚ್ಚಿ, ಜಗತ್ತಿಗೆಲ್ಲ ಅಪರಿಮಿತವಾದ ಲಾಭವನ್ನುಂಟುಮಾಡಿರುವರು. ಇವುಗಳಿಂದ ಧನಧಾನ್ಯಗಳು ಹೆಚ್ಚಿ, ಜನತೆಗೆ ಸುಖಸಾಧನೆಗಳು ಹೆಚ್ಚಲು ಸಂಭವವುಂಟೆಂದು ಅನೇಕ ವಿದ್ವಾಂಸರು ಎದೆತಟ್ಟಿ ಹೇಳುವರು. ಇದರಿಂದ ಮಾತೃಭೂಮಿಗೆ ಕಲ್ಯಾಣವಾಗುವದಲ್ಲದೆ ಇಡೀ ಮಾನವೀ ಕುಟುಂಬಕ್ಕೆ ನೆರವಾದದ್ದರ ಶ್ರೇಯಸ್ಸು ಪ್ರಾಪ್ತವಾಗುವದು. ಇದೆಲ್ಲವು ಪ್ರಾಪಂಚಿಕ ದೃಷ್ಟಿಯಿಂದ ಮಹತ್ವವು. ಆದರೆ ನಿಜವಾಗಿ ಇದೆಲ್ಲ ನಶ್ವರವು. ಈ ಹೊಸ ತತ್ವಗಳನ್ನು ಶೋಧಿಸಿದ್ದರಿಂದ, ನಮ್ಮ ಭಾರತವರ್ಷದ ಗೌರವವು ಜಗತ್ತಿನಲ್ಲಿ ಹೆಚ್ಚಿದೆ. ಪೂರ್ವದಂತೆ ಜನತೆಯು ನಮ್ಮಲ್ಲಿಯೇ ವಿದ್ಯೆಯನ್ನು ದೊರಕಿಸಲು ಭಾರತೀದೇವಿಯ ಅಡಿದಾವರೆಗಳಿಗೆ ಶರಣು ಹೋಗಬೇಕಾಗಿದೆ. ಈ ಮೇರೆಗೆ ಭರತಖಂಡದ ಗತವೈಭವವನ್ನು ಅಗತವಾಗಿ ಮಾಡಿ, ಸ್ವದೇಶಕ್ಕೆ ನಿರಂತರವಾದ ಕೀರ್ತಿರಾಶಿಯನ್ನು ತಂದು ಕೊಟ್ಟದ್ದು ಸ್ವದೇಶಸೇವೆಯಲ್ಲವೇ! ರಾಜಕಾರಣದ ಹೊರತು ಇತರ ಮಾರ್ಗದಿಂದಾದರೂ ರಾಷ್ಟ್ರಸೇವೆಯು ಸಾಧ್ಯವು ಎಂಬ ಮಾತಿಗೆ ಪ್ರತ್ಯವಾಯವಿಲ್ಲ.

—ಸಂಪಾದಕ.



ಜಗದೀಶ ಚಂದ್ರ ಬೋಸ.

# ಸರ್ ಜಗದೀಶಚಂದ್ರ ಬೋಸ

ಇವರ

## ಸಂಕ್ಷಿಪ್ತ ಚರಿತ್ರೆಯು.

## ಪ್ರಥಮ ದಲವು

### ೧.

### ಜಗದೀಶ ಚಂದ್ರ ಮಗುವು

ಹಿಂದು ದೇಶವು ಅತಿ ಪ್ರಾಚೀನ ಕಾಲದಿಂದಲೂ ಸದ್ವೀಜಗಳ ಖನಿಯೆಂದು ಬಹು ಪ್ರಖ್ಯಾತಗೊಂಡಿರುವದಲ್ಲವೇ? ಕಶ್ಯಪಾದಿ ಸಪ್ತರ್ಷಿಗಳಿಗೆ ಜನ್ಮಕೊಟ್ಟು ಬ್ರಹ್ಮಜ್ಞಾನದಿಂದ ಉಕ್ಕುವ ದೈವಿಕ ತೇಜಸ್ಸಿನಿಂದ ತನ್ನ ಕೀರ್ತಿಯನ್ನು ನಿರಂತರವಾಗಿ ಧವಲಿತವಾಗಿ ಮಾಡಿಟ್ಟಿರುವಳಲ್ಲವೇ? ವೇದವ್ಯಾಸಾದಿ ಕವಿಕುಲ ರತ್ನಗಳಾದರೂ ಇವಳಲ್ಲಿಯೇ ಉದಯಿಸಿ ಇವಳ ಗುಣ ಗಾನವನ್ನು ಮಾಡಲಿಲ್ಲವೇ? ಹರಿಚಂದ್ರ ನಳಾದಿ ಸತ್ಯಸಂಧರಿಂದ ಇವಳು ಸತ್ಯವತಿಯಾಗಿ ಶೋಭಿಸುವಳಲ್ಲವೇ? ಧ್ರುವ—ಪ್ರಲ್ಹಾದ ಮೊದಲಾದ ಪರಮ ಭಗವದ್ಭಕ್ತರಿಂದ ಪರಮಾತ್ಮನ ಪ್ರೀತಿಗೆ ಪಾತ್ರಳಾಗಿರುವಳಲ್ಲವೇ? ಅಶೋಕ-ಚಂದ್ರಗುಪ್ತ ಮೊದಲಾದ ವೀರಪುತ್ರರಿಂದ ಭೂಷಿತೆಯಾಗಿ ವಿಜಯಧ್ವಜವನ್ನು ಪಂಚಖಂಡಗಳಲ್ಲಿಯೂ ಹಿಡಿಸಲಿಲ್ಲವೇ? ಅರ್ವಾಚೀನಕಾಲದಲ್ಲಿ ಪ್ರತಾಪಶಿಂಹ, ಶಿವಾಜಿ ಮೊದಲಾದ ರಾಷ್ಟ್ರಕೇಸರಿಗಳು ಸ್ವಪರಾಕ್ರಮದಿಂದ ಮಾತೆಯ ಸೇವೆಯಾಗಿ ಟೊಂಕ ಕಟ್ಟಲಿಲ್ಲವೇ ? ಆಹಹಾ! ಮಾತೆಯ ಸೌಭಾಗ್ಯವನ್ನು ಆರು ಬಣ್ಣಿಸಲು ಸಮರ್ಥರು?

ಈ ಮೇರೆಗೆ ಬಹುರತ್ನೆಯಾದ ಭರತಭೂಮಿಯಲ್ಲಿ ಬಂಗಾಲವೆಂಬದೊಂದು ಭಾಗವಿದೆಯಷ್ಟೇ? ಇಲ್ಲಿ ಇತ್ತೀಚೆಗೆ ಅನೇಕ ಪುರುಷಶ್ರೇಷ್ಠರು ಜನಿಸಿ,

ಮಾತೆಯ ಪೂರ್ವದ ಗೌರವವನ್ನು ಇದುವರೆಗೂ ಕಾದಿರುವರು, ರಾಮಕೃಷ್ಣರ ಪರಮ ಶಿಷ್ಯರಾದ ವಿವೇಕಾನಂದ ಸ್ವಾಮಿಗಳು ಜಗತ್ತಿಗೆಲ್ಲಾ ಹಿಂದುಧರ್ಮವನ್ನು ಉಪದೇಶಿಸಿ, ನಮ್ಮ ಪೂರ್ವದ ಆರ್ಯಸಂಸ್ಕೃತಿಯನ್ನು ಪುನಃ ಪ್ರಸ್ಥಾಪಿಸ ಲಿಲ್ಲವೇ? ಇವರು ತಮ್ಮ ಗುರುವರ್ಯರೊಂದಿಗೆ ಈ ವಂಗದೇಶದಲ್ಲಿಯೇ ಜನ್ಮ ವೆತ್ತಲಿಲ್ಲವೇ? ಜಗತ್ತಿನ ಕವಿ-ಕುಲಾವತಂಸರಾದ ರವೀಂದ್ರನಾಥ ಠಾಕೂರರವರು ಇಲ್ಲಿಯೇ ಹುಟ್ಟಿ ಬೆಳೆಯಲಿಲ್ಲವೇ? ಚಿತ್ತರಂಜನದಾಸರಂಥ ಕೊಡಗೈ ಧೊರೆಗಳಿ ಗಾವರೂ ಇವಳೇ ಹೆತ್ತ ತಾಯಿಯಲ್ಲವೇ? ಈ ಮೇರೆಗೆ ಜಗದ್ವಿಖ್ಯಾತ ವಿದ್ವನ್ಮಣಿ ಗಳಿಗೆ ತವರಮನೆಯಂತಿರುವ ವಂಗದೇಶವೇ ನಮ್ಮ ಸಾಂಪ್ರತ ಚರಿತ್ರನಾಯಕರ ಹುಟ್ಟುಮನೆಯು. ಇವರಾದರೂ ತಮ್ಮ ಅದ್ವಿತೀಯ ಶಾಸ್ತ್ರೀಯ ಶೋಧಗಳಿಂದ ತಮ್ಮ ಜೇಷ್ಠ ಬಂಧುಗಳಂತೆ ಮಾತೆಯ ಮಹತಿಯನ್ನು ಹೆಚ್ಚಿಸಿ, ಮಹತ್ಕೀರ್ತಿ ಯನ್ನು ಪಡೆದಿರುವರು. ಇವರ ಜೀವಿತರಹಸ್ಯವನ್ನು ವಾಚಕವರ್ಗಕ್ಕೆ ಅರಿಕೆ ಮಾಡಿಕೊಡುವದೇ ನಮ್ಮ ಪ್ರಸ್ತುತ ಕಾರ್ಯವು.

ಬಿಕ್ರಾಮಪುರವೆಂಬದು ಬಂಗಾಲದಲ್ಲಿ ಒಂದು ಗ್ರಾಮವು. ಈ ಹಳ್ಳಿಯಲ್ಲಿ ಬಹು ವರ್ಷದಿಂದ ಒಂದು ಮನೆತನವು ಬಹು ಪ್ರಸಿದ್ಧಗೊಂಡಿತ್ತು. ಅದು ಬೋಸ ರವರದೇ ಸರಿ. ಚರಿತ್ರನಾಯಕರ ತಾದೆಯವರಾದ ಕೈ॥ ಭಗವಾನ್ ಚಂದ್ರರು ಈ ಮನೆತನಕ್ಕೇ ಸೇರಿದವರು. ಇವರು ಸ್ವಭಾವತ: ಸುಶೀಲರೂ ಕುಶಾಗ್ರಬುದ್ಧಿ ಯವರೂ ಆಗಿದ್ದರು. ಇವರು ಫರಿದಪುರದಲ್ಲಿ ಇದ್ದು, ಸರಕಾರದ ದೊಡ್ಡ ಕಾರ್ಯ ವನ್ನು ಜರುಗಿಸುತ್ತಿದ್ದರು. ಇವರ ಪತ್ನಿಯವರಾದರೂ ಒಳ್ಳೇ ಧರ್ಮನಿರತರೂ ಪತಿಭಕ್ತಿಪರಾಯಣರೂ ಆಗಿದ್ದರು. ಹೆರವರ ಮಕ್ಕಳನ್ನು ತಮ್ಮ ಹೊಟ್ಟೆಯ ಮಕ್ಕಳಂತೆ ಇವರು ಆಗಾಗ್ಗೆ ಪಾಲ್ಬೆಣ್ಣೆಗಳಿಂ ಪೋಷಿಸಿ, ತಮ್ಮ ವಾತ್ಸಲ್ಯವನ್ನು ಪ್ರಕಟಗೊಳಿಸುವರು. ಇಂಥ ಜನನೀಜನಕರು ತಮ್ಮ ಪೂರ್ವಜನ್ಮದ ಸುಕೃತದ ಫಲದಿಂದ ಈ ಜನ್ಮದಲ್ಲಿ ಜಗದೀಶನಂಥ ವಿದ್ವನ್ಮಣಿಯನ್ನು ಹೆರುವದು ಸರ್ವ ಸಾಧಾರಣವೇ? ಇದು ಜಗದೀಶನ ಅನುಗ್ರಹವೇ ಸರಿ. ಬಾಬು ಭಗವಾನರು ತಮ್ಮ ಮಗುವಿನ ವಿದ್ಯಾಭ್ಯಾಸದ ವಿಷಯಕ್ಕೆ ಬಲು ಜಾಗರೂಕರಾಗಿದ್ದರು. ಅದೇ ಸಮಯಕ್ಕೆ ಪಾಶ್ಚಾತ್ಯಶಿಕ್ಷಣದ ಪ್ರವಾಹವು ನಮ್ಮ ದೇಶದಲ್ಲಿ ಉಗಮವಾಗ ತೊಡಗಿತು. ಅಂದಿನಿಂದ ನಮ್ಮ ದೇಶದ ಪಾಠಶಾಲೆಗಳು ಅಳಿಯತೊಡಗಿದವು. ಪರರಾಷ್ಟ್ರೀಯ ಶಾಲೆಗೆ ಕಳುಹಬೇಕೋ, ರಾಷ್ಟ್ರೀಯ ಶಾಲೆಗೆ ತಮ್ಮ ಮಕ್ಕಳನ್ನು

ವಿದ್ಯಾರ್ಜನೆಗಾಗಿ ಕಳುಹಬೇಕೋ, ಎಂಬದನ್ನರಿಯದೆ ಜನತೆಯು ಮುಂದು ಗಾಣದೆ ವಿಚಾರಿಸುತ್ತಿತ್ತು. ಆದರೆ ಬಾಬು ಭಗವಾನರು ಮಾತ್ರ ಈ ಸಂದರ್ಭ ದಲ್ಲಿ ದೋಲಾಯಮಾನಮತಿಯುಳ್ಳವರಾಗಿರಲಿಲ್ಲ. ಇವರ ಮಿತ್ರರಲ್ಲನೇಕರ ತಮ್ಮ ಮಕ್ಕಳನ್ನು ಪರರಾಷ್ಟ್ರೀಯ ಶಾಲೆಗಳಿಗೆ ಕಳುಹಿದ್ದರೂ ಸಹ ಇವರು ರಾಷ್ಟ್ರೀಯ ಶಿಕ್ಷಣದ ಮಹತ್ವವನ್ನರಿತು, ತಮ್ಮ ಮುದ್ದು ಮಗುವನ್ನು ರಾಷ್ಟ್ರೀಯ ಶಾಲೆಗೆ ಹಾಕಿದರು. ಈ ಶಾಲೆಯಲ್ಲಿ ಕೂಡುವಕ್ಕಲಿಗರ ಮಕ್ಕಳೂ, ಹೊಲೆ ಮಾದಿಗರೂ ನಮ್ಮ ಜಗದೀಶನ ಸಹಾಧ್ಯಾಯಿಗಳಾಗಿದ್ದರು. ಇವರ ಸಂಗಡ ಹೋಗಿ ಗಿಡಬಳ್ಳಿಗಳನ್ನು ನೋಡಿ, ಈ ಚಿಕ್ಕ ಬಾಲಕನು ಆನಂದಪಡುವನು. ಮೀನಗಾರರ ಮಕ್ಕಳೊಂದಿಗೆ ಹೋಗಿ, ನದಿ ಹಳ್ಳಗಳಲ್ಲಿ ಅಡ್ಡಾಡಿ ಸೃಷ್ಟಿಸೌಂದ ರ್ಯವನ್ನು ಕಂಡು ಮನದಲ್ಲಿ ಬೆರಗಾಗುವನು. ಪ್ರತಿಯೊಂದು ವಸ್ತುವನ್ನು ಇವನು ಒಳ್ಳೇ ಚಿಕಿತ್ಸಕ ಬುದ್ಧಿಯಿಂದ ನೋಡುವನು. ಈ ಇವನ ಶೋಧಕ ಬುದ್ಧಿಯನ್ನು ಬಾಬು ಭಗವಾನರು ಕಂಡು ಅದಕ್ಕೆ ಆಗಾಗ್ಗೆ ನೀರೆರೆದು ಪೋಷಿಸಿ ದರು. ಇದೇ ಸಮಯದಲ್ಲಿ ಇವರು ಔದ್ಯೋಗಿಕ ಕಲಾಭುವನಗಳನ್ನು ಸ್ಥಾಪಿಸಿ ದರು. ಇದರಿಂದಂತೂ ಜಗದೀಶನ ಶೋಧಕ ಬುದ್ಧಿಯು ಅಂಕುರವು ಬಹು ಬೇಗ ಚಿಗರು ಒಡೆಯಲಾರಂಭಿಸಿತು. ಇವನು ತನ್ನ ಪಾಠಶಾಲೆಯಲ್ಲಿ ಮಾತೃ ಭಾಷೆಯಲ್ಲಿಯೇ ಆರ್ಯ-ಸಂಸ್ಕೃತಿಯ ಪಾಠಗಳನ್ನು ಕಲಿಯಲಾರಂಭಿಸಿದನು. ಇದರಿಂದ ಇವನ ವಿಚಾರಶಕ್ತಿಗೆ ಒಳ್ಳೇ ಚಲನವು ದೊರೆತಂತಾಯಿತು. ಸರ್ವ ಸಾಧಾರಣ ವಿದ್ಯಾರ್ಥಿವರ್ಗದೊಡನೆ ಇವನು ಬೆಳೆದದ್ದರಿಂದ 'ತಾನು ದೊಡ್ಡವನು' ಎಂಬ ದುರಹಂಕಾರಕ್ಕೆ ಇವನು ಒಳಗಾಗಲಿಲ್ಲ. ಇದರಿಂದ 'ತನ್ನವರು—ತಾನು' ಎಂಬ ಏಕೀಕರಣದ ಭಾವನೆಯೇ ಇವನಲ್ಲಿ ನೆಲೆಗೊಂಡಿತ್ತು.

ಈ ಮಗುವಿನ ಬಾಲ್ಯದಲ್ಲಿ ಇನ್ನೊಂದು ವಿಚಿತ್ರಸಂಗತಿಯೇನಂದರೆ, ಒಂದು ಸಮಯದಲ್ಲಿ ಇವನ ತಂದೆಯು ಒಂದು ದರವಡೇಖೋರರ ಗುಂಪನ್ನು ಅನಾಯಾಸ ವಾಗಿ ಹಿಡಿದನು. ಇವರ ದೋಷವಿಚಾರಣೆಯಾಗಿ ಇವರಿಗೆ ಬಹು ದೀರ್ಘಕಾಲದ ವರೆಗೆ ಶಿಕ್ಷೆಯು ವಿಧಿಸಲ್ಪಟ್ಟಿತು. ಶಿಕ್ಷೆಯನ್ನು ಅನುಭೋಗಿಸಿ, ಈ ಚೋರರ ಗುಂಪಿನ ಹಿರಿಯನು ಬಾಬು ಭಗವಾನರನ್ನು ಕಂಡು, ಒಂದು ಉದ್ಯೋಗವನ್ನು ಕಂಡುಕೊಂಡನು. ಇವನು ಸರಕಾರದ ಕಟ್ಟಳೆಗಳನ್ನು ಮುರಿದರೂ ಕೂಡ, ನೈತಿಕ ಕಾನೂನುಗಳನ್ನು ಎಂದಿಗೂ ಉಲ್ಲಂಘಿಸನು. ಇವನ ಕೈಯಲ್ಲಿಯೇ ತಮ

ಮುದ್ದುಮಗುವನ್ನು ಸಂಗೋಪನಾರ್ಥವಾಗಿ ಬಾಬು ಭಗವಾನರು ಕೊಟ್ಟುಬಿಟ್ಟರು. ಇವನೇ ನಾಲ್ಕುವರ್ಷದ ಜಗದೀಶನನ್ನು ತನ್ನ ಹೆಗಲಮೇಲೆ ಕುಳ್ಳಿರಿಸಿಕೊಂಡು ಪಾಠಶಾಲೆಗೆ ಕರೆದೊಯ್ಯುತ್ತಿದ್ದನು. ಇವನು ಪೂರ್ವದಲ್ಲಿ ಕ್ರೂರಕರ್ಮಿಯಾದರೂ ಒಳ್ಳೇ ಅಕ್ಕರತೆಯಿಂದ ಈ ಶಿಶುವನ್ನು ಜೋಕೆಮಾಡುತ್ತಿದ್ದನು. ತಾನು ಪೂರ್ವದಲ್ಲಿ ಮಾಡಿದ ಪರಾಕ್ರಮಗಳನ್ನೂ, ದೀರ್ಘಸಾಹಸಗಳನ್ನೂ ಮಗುವಿನ ಮನಸ್ಸಿನ ಮೇಲೆ ಚನ್ನಾಗಿ ಬಿಂಬಿಸುವ ಹಾಗೆ ಆಗಾಗ್ಗೆ ಹೇಳುವನು. ಇದರಿಂದಲೇ ಜನಿತವಾದ ಅನೇಕ ಸದ್ಗುಣಗಳು ಈಗ್ಯೂ ನಮ್ಮ ಚರಿತ್ರನಾಯಕರಲ್ಲಿ ತಲೆದೋರುತ್ತವೆ.

ಕ್ರಮೇಣ ಜಗದೀಶಚಂದ್ರರು ತಮ್ಮ ಪ್ರಾಥಮಿಕ ಶಿಕ್ಷಣಕ್ರಮವನ್ನು ಪೂರ್ತಿಗೊಳಿಸಿ, ಮಾಧ್ಯಮಿಕ ಶಾಲೆಯನ್ನು ಹೊಕ್ಕು ಅಲ್ಲಿಯೂ ಜಯಶೀಲರಾದರು. ಮುಂದೆ ಕಲಕತ್ತೆಯ ಸೇಂಟ ಝೇವಿಯರ್ ಕಾಲೇಜದಲ್ಲಿ ಬಿ. ಎ. ಪದವಿಯನ್ನು ತೀವ್ರದಲ್ಲಿಯೇ ಪಡೆದು, ಆಂಗ್ಲಭೂಮಿಗೆ ಹೋಗಿ ಆಯ್. ಸೀ. ಎಸ್. ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಲು ಬಯಸಿದರು. ಈ ಮೇರೆಗೆ ತಮ್ಮ ಮಗುವು ಪರರ ಸೇವೆಯನ್ನು ವಹಿಸಿ ಧನದ ಸಂಪಾದನೆಯನ್ನು ಮಾಡುವದ್ದು, ಬಾಬು ಭಗವಾನರ ಮನಕ್ಕೆ ತಿಲಾಂಶವಾದರೂ ಬರಲಿಲ್ಲ. ತಮ್ಮ ಪುತ್ರನ ಭಾವೀ ಯಶೋಸಾಮ್ರಾಜ್ಯವನ್ನು ಮುಂಜಾಗ್ರತೆಯಲ್ಲಿಯೇ ಕಂಡುಹಿಡಿದು, ಅವರು ಅವನ ಮತಕ್ಕೆ ಒಪ್ಪಲಿಲ್ಲ. ತಮ್ಮ ಮಗನು ಬಹು ದೊಡ್ಡ ವಿದ್ವಾಂಸನಾಗಬೇಕೇ ಹೊರ್ತು ಸರಕಾರದ ನೌಕರನಾಗಿರುವದು ಅವರ ಮನಸ್ಸಿಗೆ ಬರಲೇ ಇಲ್ಲ. ತಂದೆಯ ಹೇಳಿಕೆಯ ಪ್ರಕಾರ ವೈದ್ಯಕಿಯನ್ನಾಗಲಿ, ಶಾಸ್ತ್ರೀಯ ವಿಷಯವನ್ನಾಗಲಿ ಕಲಿಯಲು ಜಗದೀಶಚಂದ್ರರು ಆಂಗ್ಲಭೂಮಿಗೆ ಪಯಣವನ್ನು ಬೆಳಿಸಿದರು.

ಲಂಡನ ಪಟ್ಟಣದಲ್ಲಿ ಬರಲು, ಪ್ರಥಮತಃ ವೈದ್ಯಕೀವಿಷಯದಲ್ಲಿ ಇವರು ಮನಸ್ಸುಹಾಕಿದರು. ಪದಾರ್ಥವಿಜ್ಞಾನಶಾಸ್ತ್ರ, ರಸಾಯನಶಾಸ್ತ್ರ, ಪ್ರಾಣಿವಿದ್ಯೆ ಮೊದಲಾದ ಕಲೆಗಳನ್ನು ಒಳ್ಳೇ ಮನಸ್ಸುಗೊಟ್ಟು ಕಲಿಯಲಾರಂಭಿಸಿದರು. ಆದರೆ ಅಕಸ್ಮಾತ್ತಾಗಿ ಇವರಿಗೆ ಜ್ವರವು ಬರಲು ಆರಂಭಿಸಿತು. ಪ್ರಾಣಿಗಳನ್ನು ಕೊಯ್ದು ಪರೀಕ್ಷೆಮಾಡುವದರಿಂದಂತೂ ಇವರಿಗೆ ಜ್ವರದ ಬಾಧೆಯು ಹೆಚ್ಚಾಗಹತ್ತಿತು. ಇದನ್ನು ಕಂಡು ಇವರ ಅಧ್ಯಾಪಕರೂ, ಇವರ ರೋಗಚಿಕಿತ್ಸಕ ವೈದ್ಯರೂ ಈ ವಿದ್ಯೆಯನ್ನು ಬಿಟ್ಟುಕೊಡಲು ಆಗ್ರಹ ತೊಟ್ಟರು. ಆದ್ದರಿಂದ ನಿರುಪಾಯರಾಗಿ ಜಗದೀಶಚಂದ್ರರು ಕೆಂಬ್ರಿಜ್ಜಕ್ಕೆ ಹೋಗಿ ಶಾಸ್ತ್ರೀಯ ವಿಷಯವನ್ನು ಕಲಿಯಲೇ

ಬೇಕಾಯಿತು. ೧೮೮೪ರಲ್ಲಿ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿ, ಛಾತ್ರ ವೃತ್ತಿಯನ್ನು ಸಂಪಾದಿಸಿದರು. ಮರುವರ್ಷವೇ 'ಶಾಸ್ತ್ರೀಯ ವಿಷಯವಿಶಾರದ' (B. Sc.) ಎಂಬ ಪದವಿಯನ್ನು ದೊರಕಿಸಿದರು. ಈ ವಿಷಯದಲ್ಲಿ ಇವರು ಅನೇಕ ಚಮತ್ಕೃತಿಗಳನ್ನು ಕಂಡು ಆಶ್ಚರ್ಯಚಕಿತರಾದರು. ತಾವಾದರೂ ಈ ವಿಷಯದಲ್ಲಿ ಅದ್ಭುತ ಶೋಧಗಳನ್ನು ಮಾಡಬೇಕೆಂಬ ಮನೀಷೆಯು ಇವರಲ್ಲಿ ಈಗ ತಾನೇ ಉತ್ಪನ್ನವಾಯಿತು. ಈಗ ಇವರ ವಯಸ್ಸು ೨೫ ಮಾತ್ರ ಇತ್ತು.

---

## ದ್ವಿತೀಯ ದಲವು.

### ೨.

### ಶಾಸ್ತ್ರೀಯ ಪರಿಶ್ರಮವು.

ಆಂಗ್ಲ ಭೂಮಿಯಿಂದ ಜಗದೀಶಚಂದ್ರರು ಮಾತೃಭೂಮಿಗೆ ಮರುಳಿ ಬಂದಮೇಲೆ ಬಹು ಪ್ರಯಾಸದಿಂದ ಕಲಕತ್ತೆಯ ಒಂದು ಮಹಾವಿದ್ಯಾನಿಲಯದಲ್ಲಿ ಪದಾರ್ಥವಿಜ್ಞಾನಶಾಸ್ತ್ರ ವಿವರಣೆಗೋಸ್ಕರ ಮುಖ್ಯಾಧ್ಯಾಪಕರಾಗಿ ನಿಯಮಿಸಲ್ಪಟ್ಟರು. ಇಲ್ಲಿ ಇವರು ತಮ್ಮ ವಿದ್ವತ್ತೆಯಿಂದ ಆಂಗ್ಲ ಶಿಕ್ಷಕರನ್ನು ಮುಂದರಿದರೂ ಸಹ ಸರಕಾರದವರು ಇವರಿಗೆ ಅವರಕ್ಕಿಂತಲೂ ತೀರ ಕಡಿಮೆತರದ ವೇತನವನ್ನು ಕೊಡುತ್ತಿದ್ದರು. ಈ ತರದ ವೈಷಮ್ಯವು ಸ್ವಾಭಿಮಾನಿಯಾದ ಹಿಂದುಪುತ್ರನಿಗೆ ಅಪಮಾನಕಾರಕವೇ ಸರಿ. ಆದ್ದರಿಂದ ಜಗದೀಶಚಂದ್ರರು ಸ್ವದೇಶಾಭಿಮಾನದಿಂದ ಪ್ರೇರಿತರಾಗಿ ಈ ತರದ ಸರಕಾರದವರ ಹೀನನಡತೆಯನ್ನು ನಿಷೇಧಿಸಿದರು. ಆದರೆ ಆಳರಸರು ಇದಕ್ಕೆ ಸೊಪ್ಪು ಹಾಕುವವರೇ? ಇದಕ್ಕೆ ಪ್ರತಿಯಾಗಿ ಇವರು ಮೂರು ವರ್ಷಗಳ ವರೆಗೆ ತಮ್ಮ ವೇತನವನ್ನೇ ಸ್ವೀಕರಿಸಲಿಲ್ಲ. ಈ ಸಮಯದಲ್ಲಿ ಇವರ ವೀರಪತ್ನಿಯವರು ಮುಂದರಿದು ಸಂಸಾರದ ಕುಂದುಕೊರತೆಗಳನ್ನು ಬೈಲಿಗೆ ತಾರದೆ ಪತಿಯ ಸುಖಕ್ಕಾಗಿ ಯಾನಾಗಲೂ ಹೆಣಗಿದರು. ಇದರಿಂದ ಇವರ ಉತ್ಸಾಹವು ಇಮ್ಮಡಿಸಿ, ಅಂಗೀಕೃತ ಕಾರ್ಯವನ್ನು ಸಾಧಿಸಲು ಇವರಿಗೆ ಒಳ್ಳೇ ಅನುಕೂಲವಾಯಿತು. ಈ ಇವರ ಧೈರ್ಯ-ಸ್ಥೈರ್ಯಾದಿ ಗುಣಗಳಿಗೆ ಮನ ಸೋತು ಸರಕಾರದವರು ಇವರ ಕೆಲಸವನ್ನು ಚಿರಸ್ಥಾಯಿಯಾಗಿ ಮಾಡಿದ್ದಲ್ಲದೆ

ಹಿಂದುಳಿದ ಮೂರು ವರ್ಷದ ವೇತನವನ್ನು ಒಟ್ಟಾಗಿ ಇವರಿಗೆ ಕೊಟ್ಟು ಶರಣು ಹೊಡೆಯಬೇಕಾಯಿತು.

ಈ ವಿದ್ಯಾನಿಲಯದಲ್ಲಿ ಮಾತ್ರ ಜಗದೀಶಚಂದ್ರರಿಗೆ ಶಾಸ್ತ್ರೀಯ ವಿಷಯದ ಮಂದಿರವನ್ನು ಪ್ರವೇಶಿಸಿ ಅಂತಸ್ಥ ಚಮತ್ಕೃತಿಗಳನ್ನು ಬಯಲಿಗಿಡಲು ಹೆಚ್ಚಾಗಿ ಅವಕಾಶವು ದೊರೆಯಲಿಲ್ಲ. ಬಂಗಾಲದಲ್ಲಿ ಅಷ್ಟೊಂದು ಹೆಸರಾದ ರಸಾಯನ ಶಾಲೆಯು ಇಲ್ಲದ್ದರಿಂದ ಸ್ವತಃ ತಮ್ಮ ಕೈಖರ್ಚಿನಿಂದ ಅಂಥದೊಂದು ಶಾಲೆಯನ್ನು (laboratory) ಇಟ್ಟುಕೊಂಡು ಅಲ್ಲಿ ಶೋಧಗಳನ್ನು ಗೊತ್ತುಹಚ್ಚಲು ಉಪಕ್ರಮಿಸಿದರು. "ಸ್ಥಿರಪ್ರಯತ್ನವೂ, ತಾಳ್ಮೆಯೂ ಕಾರ್ಯಸಿದ್ಧಿಗೆ ಬಲವಾದ ಸಾಧನಗಳು," ಎಂಬ ಮಹತ್ತರವಾದ ಉಕ್ತಿಯಂತೆ ಇವರು ತಮ್ಮ ಕೆಲಸದಲ್ಲಿ ದೀರ್ಘಸಾಹಸವನ್ನು ಮಾಡಲಾರಂಭಿಸಿದರು. ಮುಂದೆ ಹತ್ತು ವರ್ಷಗಳ ಮೇಲೆ ಮತ್ತೊಂದು ಸರ್ವಸಾಧಾರಣವಾದ ಶಾಲೆಯು ಇವರ ಸಲುವಾಗಿ ರಚಿಸಲ್ಪಟ್ಟಿತು. ಇದೇ ಅಲ್ಲವೇ ? ಮೇಲ್ಕಾಣಿಸಿದ ವಾಕ್ಯದ ಸತ್ಯತೆಗಾಗಿ ಪರಿಣಮಿಸಿದ ಫಲವು?

ಮುಂದೆ ಬರಬರುತ್ತ ಇವರು ೧೮೯೫ ರಲ್ಲಿ ವಿದ್ಯುಲ್ಲತೆಯ ಮೇಲೆ ಅನೇಕ ಲೇಖಗಳನ್ನು ಬರೆಯತೊಡಗಿದರು. ಇವುಗಳಲ್ಲಿ ಒಂದು ಮಾತ್ರ ಒಂದು ನವೀನ ಶೋಧವನ್ನು ಒಳಕೊಂಡಿತ್ತು. ಇದನ್ನು ಓದಿಕೊಂಡು ಆಂಗ್ಲ ಶಾಸ್ತ್ರೀಯ ಮಂಡಲದವರು ಬಹು ಆಲ್ಹಾದಿತರಾಗಿ ತಮ್ಮ ಪತ್ರಿಕೆಯಲ್ಲಿ ಪ್ರಚುರಗೊಳಿಸಿದರು. ಇದೇನು ಸಾಮಾನ್ಯ ಗೌರವವೇ ? ಇದಲ್ಲದೆ ಶಾಸ್ತ್ರೀಯ ಶೋಧಗಳನ್ನು ಗೊತ್ತುಪಡಿಸುವದಕ್ಕಾಗಿ ಪಾರ್ಲಿಮೆಂಟಿನವರು ಕೊಟ್ಟ ಹಣದ ಕೆಲವು ಭಾಗವನ್ನು ಇವರಿಗೆ ಸಮರ್ಪಿಸಿದರು. ಇದನ್ನು ನೋಡಿ ಎರಡು ವರ್ಷಗಳ ಮೇಲೆ ಬಂಗಾಲದ ಸರಕಾರದವರು ಇವರು ಕೈಕೊಂಡ ಕಾರ್ಯದಲ್ಲಿ ಪ್ರೋತ್ಸಾಹಿಸಲು ಮುಂದು ಬಂದರು. ಆಂಗ್ಲ ಶಾಸ್ತ್ರೀಯ ಸಂಶೋಧಕ ಮಂಡಲದವರು ಈ ಮೇರೆಗೆ ಇವರನ್ನು ಸಂಭಾವಿಸದಿದ್ದರೆ ನಮ್ಮ ಪರಮ ದಯಾಳುಗಳಾದ ಸರಕಾರದವರು ಇವರನ್ನು ಪ್ರೋತ್ಸಾಹಿಸಲು ಮುಂದರಿಯುತ್ತಿದ್ದರೋ ಇಲ್ಲೋ ಎಂಬ ಸಂದೇಹವು ಎಮಗೆ ಈಗ ತಾನೆ ಉಂಟಾಗಿರುವದು.

ಈ ಮೇರೆಗೆ ತಮ್ಮ ಕಾರ್ಯಕ್ಕಾಗಿ ಮನ್ನಿಸಲ್ಪಟ್ಟ ಜಗದೀಶರು ತಮ್ಮ ಕೆಲಸವನ್ನು–ಸಣ್ಣ ಪ್ರಮಾಣದಲ್ಲಿಯೇ ಯಾಕಾಗಲೊಲ್ಲದು–ಒಳ್ಳೇ ಆಸ್ಥೆಯಿಂದ ಮಾಡ

ತೊಡಗಿದರು. ಇವರು ಫಲದ ಆಶೆಯನ್ನು ಎಂದಿಗೂ ಹಿಡಿಯುತ್ತಿರಲಿಲ್ಲ. ಮುಂದೆ ೧೮೯೬ ರಲ್ಲಿ ಇವರು ತಮಗೆ ಧನಸಹಾಯಮಾಡಿ ನೆರವಾದ ಆಂಗ್ಲ ಶಾಸ್ತ್ರೀಯ ಸಂಶೋಧಕ ಮಂಡಲದವರಿಗೆ ಪುನಃ ಮತ್ತೊಂದು ಶೋಧಪೂರ್ವಕ ಲೇಖವನ್ನು ಬರೆದು ಕಳುಹಿದರು. ಇದರಿಂದಂತೂ ಲಂಡನ್ನದ ವಿಶ್ವವಿದ್ಯಾಪೀಠದವರು ಅತ್ಯಂತ ಪ್ರೀತರಾಗಿ ಡಾಕ್ಟರ ಆಫ್ ಸಾಯನ್ಸ (Doctor of Science) ಎಂಬ ಗೌರವಯುಕ್ತ ಬಿರುದನ್ನು ಇವರಿಗೆ ದಯಪಾಲಿಸಿದರು. ಮುಂದೆ ೧೮೯೭ ರಲ್ಲಿ ಆ ಮಂಡಳದವರ ಮುಂದೆ ಪ್ರತ್ಯಕ್ಷ ಪ್ರಮಾಣಪೂರ್ವಕವಾಗಿ ತಮ್ಮ ಶೋಧಗಳನ್ನು ಇವರು ತೋರಿಸಬೇಕಾಯಿತು. ಈ ಸಮಯದಲ್ಲಿ ಇವರು ತೋರಿದ ಅಲೌಕಿಕವಾದ ವಾಕ್ಚಾತುರ್ಯವನ್ನು ಕಂಡು ಆ ಮಂಡಲದ ಜ್ಞಾನವೃದ್ಧ ಸಭಾಸದರು ಬೊಟ್ಟುಕಚ್ಚಿದರು. ಪ್ರಾಣಿಗುಣಧರ್ಮಶಾಸ್ತ್ರಕೋವಿದರಲ್ಲಿ ಅಗ್ರಗಣ್ಯರಾದ ಸರ್ ಮೈಕಲ್ ಫೋಸ್ಟರರಂಥವರೂ ಕೂಡಾ ಇವರ ಅಗಾಧವಾದ ಬುದ್ಧಿಬಲಕ್ಕೆ ತಲೆದೂಗಬೇಕಾಯಿತು. ಪುನಃ ಇವರು ೧೯೦೧ ರಲ್ಲಿ ಇದೇ ಮಂಡಲದವರ ಸಮಕ್ಷಮವಾಗಿ ಪ್ರಾಣಿ–ವನಸ್ಪತಿಗಳ ಪ್ರತಿಕ್ರಿಯೆಯಲ್ಲಿರುವ ತಾದಾತ್ಮ್ಯವನ್ನು ಅತ್ಯಂತ ಸೂಕ್ಷ್ಮರೀತಿಯಿಂದ ವಿವರಿಸಿ ಹೇಳಿದರು ಈ ಇವರ ಅಪೂರ್ವ ಶೋಧಗಳನ್ನು ಜನತೆಯು ಗಣನೆಗೆ ತರಲಾರಂಭಿಸಿತು. ಇದೊಂದು ಶಾಸ್ತ್ರೀಯ ಹೊಸ ಯುಗವೆಂದೇ ಅವರು ಭಾವಿಸಹತ್ತಿದರು.

ಈ ಇವರ ಶೋಧಗಳನ್ನು ಈ ಮಂಡಲದವರು ಅನೇಕ ತದ್ವಿಷಯ ವಿದ್ವನ್ಮಣಿಗಳ ಪ್ರಚಂಡವಾದ ಸಭೆಗಲಿಸಿ ಅದರ ಮುಂದಿರಿಸಿದರು. ಈ ಪಂಡಿತರಲ್ಲಿ ಸರ್ ಜೋನ್ ಬರ್ಡನ್ ಸ್ಯಾಂಡರ್ಸ್ಟನ್ನರು ಆಕ್ಸ್ಫೋರ್ಡದಿಂದ ಇಲ್ಲಿಯವರೆಗೆ ದಯಮಾಡಿಸಿದ್ದರು. ಇವರು ತಮ್ಮ ಸಂಪೂರ್ಣವಾದ ಆಯುಷ್ಯವನ್ನು ಪ್ರಾಣಿಗಳ ಮತ್ತು ಪದಾರ್ಥಗಳ ಗುಣಧರ್ಮಶಾಸ್ತ್ರದಲ್ಲಿ ವ್ಯಯಮಾಡಿ ಮುಪ್ಪಾಗಿದ್ದರು. ಇವರೇ ಮಹಾಪಂಡಿತರೆಂದು ಎಲ್ಲರೂ ಭಾವಿಸಿದ್ದರು. ಇವರಿಗೂ ಜಗದೀಶಚಂದ್ರರಿಗೂ ವಾಗ್ವಾದವು ಉಂಟಾಗುವದೆಂದು ಸರ್ವರ ಪ್ರಬಲವಾದ ಕಲ್ಪನೆಯು. ಮೊದಮೊದಲು ಜಗದೀಶಚಂದ್ರರ ಪೂರ್ವದ ಪದಾರ್ಥವಿಜ್ಞಾನದ ಶೋಧನೆಗಳ ಬಗೆ ಅವರನ್ನು ಅಭಿನಂದಿಸಿದರು. ಈ ಕ್ಷೇತ್ರವನ್ನು ಬಿಟ್ಟು ಪ್ರಾಣಿಗುಣಧರ್ಮಶಾಸ್ತ್ರಕ್ಕೆ ಅವರು ಅತಿಕ್ರಮಿಸುವದು ತಮ್ಮ ಮನಸ್ಸಿಗೆ ಬರಲಿಲ್ಲವೆಂದು ಪಂಡಿತರು ಕನಿಕರವನ್ನು ವ್ಯಕ್ತಗೊಳಿಸಿದರು. "ನಾನು ಅನೇಕ ವರ್ಷಗಳ

ವರೆಗೆ ಈ ಕಾರ್ಯದಲ್ಲಿ ವ್ಯಾಪೃತನಾಗಿರುವೆನು. ನನಗೆ ಕೂಡ ಹೊಸ ಶೋಧಗಳನ್ನು ಕಂಡು ಹಿಡಿಯುವದೆಂದರೆ ದುಸ್ಸಾಧ್ಯವೇ ಸರಿ. ತಮ್ಮಂಥವರ ಪಾಡೇನು?" ಎಂದು ಉಪಹಾಸಂಗೈದರು. ಇದರಂತೆಯೇ ಇನ್ನುಳಿದ ಕೆಲವು ಪಂಡಿತರು ಅಭಿಪ್ರಾಯಪಟ್ಟರು. "ವಿದ್ಯೆ ಎಂಬ ಸಾಗರಕ್ಕೆ ಅಂತವೂ ಇಲ್ಲ; ಆದಿಯೂ ಇಲ್ಲ; ಇಂತಿಷ್ಟೇ ಇರಬೇಕೆಂದು ಯಾರೂ ಇದನ್ನು ಪ್ರತಿಬಂಧಿಸರು. ಶಾಸ್ತ್ರೀಯ ರೀತಿಯಲ್ಲಿ ಇವು ಅಸಮಂಜಸವಾದವುಗಳೆಂದು ತಾವು ಸಿದ್ಧಗೊಳಿಸಿದರೆ ಒಳಿತಾಗುವದು. ನೋಡುವಾ, ಬನ್ನಿರಿ, ಹಾಗಾದರೆ," ಎಂದು ಜಗದೀಶಚಂದ್ರರು ಪ್ರತ್ಯುತ್ತರವನ್ನು ಕೊಟ್ಟರು. ಇದರಿಂದ ಅವರು ಒಳ್ಳೇ ರೇಗಿಗೆದ್ದರು. ಕೂಡಲೇ 'ಜಗದೀಶಚಂದ್ರರ ಶೋಧಗಳನ್ನು ಮಂಡಲದವರು ಮನ್ನಿಸಲಿಲ್ಲವೆಂಬ' ಟೊಳ್ಳು ಸುದ್ದಿಯನು ಅವರ ಅನುಯಾಯಿಗಳು ಹರಡಲು ತಿಲಾಂಶವಾದರೂ ಹಿಂಜರಿಯಲಿಲ್ಲ.

ಇತ್ತ ಸರ್ ಜಗದೀಶಚಂದ್ರರು ಮರಳಿ ಹಿಂದು ಭೂಮಿಗೆ ಬರಬೇಕಾಯಿತು. ಪುನಃ ಆಂಗ್ಲಭೂಮಿಗೆ ಪಯಣ ಬೆಳೆಸಿ ಅವರ ವಿಧಾನವನ್ನು ಖಂಡಿಸಬೇಕೆಂದು ಹಾತೊರೆಯುಹತ್ತಿದರು. ಈ ಇವರ ಪ್ರಯತ್ನದಿಂದ ಪ್ರೇರಿತರಾದ ಸೆಕ್ರೆಟರಿ ಆಫ್ ಸ್ಟೇಟರು ಪುನಃ ಅಲ್ಲಿಗೆ ಹೋಗಲು ಇವರಿಗೆ ಧನಸಹಾಯವನ್ನು ಮಾಡಿದರು. ಅಲ್ಲಿಗೆ ಹೋಗಿ ಇವರು ತಮ್ಮ ಕಾರ್ಯವನ್ನು ಕೈಕೊಂಡರು. ಪ್ರಸಿದ್ಧ ವನಸ್ಪತಿ ಶಾಸ್ತ್ರಜ್ಞರಾದ ಪ್ರೊಫೇಸರ ವೈನ್ಸರೂ, ಹೊರೇಸ್ ಬ್ರೌನ್, ಹಾಸ ಮೊದಲಾದ ಆ ವಿಷಯದಲ್ಲಿ ಚನ್ನಾಗಿ ನುರಿತ ಜಾಣರೂ ಇವರ ಪ್ರಯೋಗವನ್ನು ನೋಡಲು ಅಲ್ಲಿಗೆ ಬಹು ದೂರದಿಂದ ಬಂದರು. ಇವರ ಸಮಕ್ಷಮವಾಗಿ ಸರ್ ಜಗದೀಶಚಂದ್ರರು ಗಿಡಗಳ ಮೇಲೆ ಮಾದಕ ಪದಾರ್ಥಗಳನ್ನು ಪ್ರಯೋಗಿಸಲು, ಅವುಗಳು ಒಳ್ಳೇ ಸೂಕ್ಷ್ಮ ರೀತಿಯಿಂದ ತಮಗಾದ ಚೇತನೆಯನ್ನು ವ್ಯಕ್ತಗೊಳಿಸಿದವು. ಈ ಮೇರೆಗೆ ಆ ಗಿಡಗಳು ಮುದುಡಿಕೊಳ್ಳುವದನ್ನು ನೋಡಲು, ಆ ತ್ರಿಮೂರ್ತಿಗಳು ಆನಂದತಾಂಡವವನ್ನು ಮಾಡಲಾರಂಭಿಸತೊಡಗಿದರು. ಇವರು ಪುನಃ ಅವರ ಪ್ರತಿಸ್ಪರ್ಧಿಗಳ ಸಭೆಗಲಿಸಲು ಎಲ್ಲರೂ ಅವುಗಳ ಅಪೂರ್ವತೆಗೆ ತಲೆದೂಗಿ, ಆ ಯಶೋವರ್ಮನಾದ ಹಿಂದುಪುತ್ರನ ಧನ್ಯವಾದಂಗೈಯ್ದರು. ಇದೇ ವಿಷಯದ ಮೇಲೆ ಪುನಃ ಆಕ್ಸಫೋರ್ಡ, ಕೆಂಬ್ರಿಜ್ಜ ಮೊದಲಾದ ಸ್ಥಳಗಳಲ್ಲಿ ಅನೇಕ ಪ್ರಯೋಗಗಳನ್ನು ಮಾಡಿ, ಮಾತೃಭೂಮಿಗೆ ಲಲಾಮಭೂತರಾಗಿ ಸಂಭವಿಸಿದ್ದು ಜಗದೀಶನ ಅಪೂರ್ವವಾದ ಅದೃಷ್ಟವಲ್ಲವೇ ?

# ತೃತೀಯ ದಲವು.

## ೩.

## ವಿವಿಧ ಶೋಧಗಳು.

ಈ ಅದ್ಭುತ ಶೋಧವು ಗೊತ್ತಾಗುವದಕ್ಕಿಂತ ಮೊದಲು, ಪ್ರಾಣಿಗಳಲ್ಲಿ ಕಂಡು ಬರುವಂಥ ಒಂದು ತರದ ಚೇತನಾಶಕ್ತಿಯು ಗಿಡಗಂಟಿಗಳಲ್ಲಿರುವದಕ್ಕಿಂತ ಕೀರವಿಷ ರೀತವಾದದ್ದೆಂದು ಅನೇಕ ಶಾಸ್ತ್ರಜ್ಞರ ಮತವು. ಇದು ಪ್ಲಘರ, ಹಬರಬಲ್ಯಾಂಡ್ಸ್ಟ ಮೊದಲಾದ ಜರ್ಮನ್ ಪಂಡಿತರಿಂದ ಸಿದ್ಧವಾದದ್ದು. ಈ ಇವರಿಬ್ಬರ ಶೋಧದ ಪರಿಣಾಮವು ಪಾಶ್ಚಿಮಾತ್ಯರ ಮೇಲೆ ಹದಿನಾಲ್ಕು ವರ್ಷಗಳ ವರೆಗೆ ಸಂಪೂರ್ಣವಾಗಿ ಅಸ್ಖಲಿತವಿತ್ತು. ಆದರೆ ಇತ್ತಲಾಗಿ ಸರ್ ಜಗದೀಶರು ಪ್ರಾಣಿ ಮತ್ತು ವನಸ್ಪತಿಗಳ ಪ್ರತಿಕ್ರಿಯೆಯಲ್ಲಿರುವ ತಾದಾತ್ಮ್ಯವನ್ನು ಶೋಧಿಸಿದ ಮೇಲೆ ಅವರ ಮತವು ರೂಪಾಂತರವನ್ನು ಹೊಂದಲಾರಂಭಿಸಿತು. ಇದೊಂದು ಯುಗಾದಿಯೇ ಸರಿ.

ಇಂಥ ಅಚಿಂತ್ಯವಾದ ಶೋಧಕ್ಕೆ ಸಾಧನೀಭೂತವಾದ ಉಪಕರಣವಾದರೂ ಎಷ್ಟು ಆಶ್ಚರ್ಯಜನಕವಿರಬಹುದು ? ಇದು ಒಂದು ಧ್ವನಿಯ ತತ್ವದ ಮೇಲೆ ರಚಿಸಲ್ಪಟ್ಟಿದೆ. ಇದರ ಹೆಸರು ರೀಜೊನಂಟ ರಿಕೋರ್ಡರ. (Resonant Recorder) ನಮ್ಮ ಎದೆಯು ಹಾರಲು ಬೇಕಾಗುವ ವೇಳೆಯ ಒಂದು ಸಾವಿರದ ಅಂಶವನ್ನು ಈ .ಯಂತ್ರದಿಂದ ಗೊತ್ತುಪಡಿಸಲು ಸಾಧ್ಯವು. ಆಹಹಾ ! ಇವರ ವಿಲಕ್ಷಣವಾದ ಸೂಕ್ಷ್ಮತೆಯನ್ನು ಬಣ್ಣಿಸುವದೆಂತು ? ಇದನ್ನಾದರೂ ಇವರು ನಮ್ಮಲ್ಲಿಯೇ ನಮ್ಮ ಶಿಲ್ಪಗಾರರ ಕೈಯಿಂದಲೇ ತಾವು ಸ್ವತಃ ಮೇಲೆ ನಿಂತು ಮಾಡಿಸಿರುವರಷ್ಟೇ ! ಹಿಂದುದೇಶದಲ್ಲಿ ನಿರ್ಮಿಸಲ್ಪಟ್ಟ ಈದೃಶ ಉಪಕರಣಗಳನ್ನು ಪರದೇಶದ ಶಾಸ್ತ್ರಜ್ಞರು ಅನೇಕಶಃ ಕೊಂಡುಕೊಳ್ಳುತ್ತಿರುವರು.

ಗಿಡಗಳಿಗೆ ನಾವು ಗುದ್ದಿದರೆ, ಅದನ್ನು ಅವುಗಳು ಅನುಭವಿಸಿ ಪ್ರತಿಯೋಗಿಸುವದಕ್ಕೆ ಅವುಗಳಿಗೆ ಒಂದು ಸೆಕಂದಿನ ಆರನೂರನೇ ಭಾಗದಷ್ಟು ವೇಳೆಯು ಬೇಕಾಗುವದಂತೆ ! ಗಿಡಗಳಿಗೆ ವಿಷದ್ರವ್ಯಗಳನ್ನು ಎರದರೆ ಪ್ರಾಣಿಗಳಂತೆಯೇ

ಅವುಗಳ ಮೇಲಾದರೂ ಪರಿಣಾಮವಾಗುವದಂತೆ ! ಗಿಡಬಳ್ಳಿಗಳು ರಾತ್ರಿ ಹನೆರಡು ಘಂಟೆಗೆ ಮಲಗಲು ಪ್ರಾರಂಭಿಸಿ, ಬೆಳಿಗ್ಗೆ ಎಂಟು ಘಂಟೆಗೆ ಏಳುವವಂತೆ ಇವೇ ಮೊದಲಾದ ಅಪೂರ್ವವಾದ ಶೋಧಗಳಿಂದ ಪ್ರಾಣಿಗುಣಧರ್ಮ--ಔಷಧ-ಬೇಸಾಯ ಮೊದಲಾದ ಶಾಸ್ತ್ರಗಳಲ್ಲಿ ತೀವ್ರವಾಗಿ ಪ್ರಗತಿಯಾಗುವದರೆಂಬಲ್ಲಿ ಸಂದೇಹವಿರಲಾರದು. ಇದರಿಂದ ಸರ್ವ ಯುಗಾಂತರಗಳಲ್ಲಿಯೂ ಜಗದೀಶ ಚಂದ್ರರ ಕೀರ್ತಿಯು ಆಚಂದ್ರಾರ್ಕವಾಗಿ ಚಿರಸ್ಥಾಯಿಯಾಗಿರುವದೆಂಬಲ್ಲಿ ಪ್ರತ್ಯವಾಯವಿರಲಾರದು. ಇವರು ಬರೆದ "Plant Response" ಮತ್ತು "Comparative Electro-physiology" "Responsive Reactions of plants" ಎಂಬ ಉದ್ಗ್ರಂಥಗಳು ಬಹು ಹೆಸರುಗೊಂಡಿವೆ.

ತಂತಿಯಿಲ್ಲದೆ ಬಹು ದೂರದವರೆಗೆ ಸುದ್ದಿಯನ್ನು ಕಳುಹಲು ವಿದ್ಯುಲ್ಲತೆಯ ಒಂದು ಯಂತ್ರವನ್ನು ಮೊದಲು ಹುಡುಕಿದವರು ಇವರೇ ಅಲ್ಲವೇ ? ೧೮೯೫ರಲ್ಲಿ ಬಂಗಾಲದ ಗವರ್ನರರ ಸಮಕ್ಷಮವಾಗಿ ಕಲಕತ್ತೆಯ ಟೌನಹಾಲಿನಲ್ಲಿ ಇವರ ಪ್ರಯೋಗವನ್ನು ಮಾಡಲು, ಎಲ್ಲರು ಆಶ್ಚರ್ಯಚಕಿತರಾದರು. ಅಮೇರಿಕೆಯ ಪ್ರೊಫೇಸರ ಮಾರ್ಕನಿಯವರು ಇದರ ಶೋಧಹಚ್ಚಬೇಕೆಂದು ಬಹು ಪ್ರಯಾಸಬಟ್ಟರೂ ಅವರಿಗೆ ಇದು ಸಾಧ್ಯವಾಗಿರಲಿಲ್ಲ.

ಇವರು "High Magnification Crescograph" ಎಂಬ ಬಹು ಬಲವಾದ ಸೂಕ್ಷ್ಮದರ್ಶಕ ಯಂತ್ರವನ್ನು ರಚಿಸಿರುವರು. ಸಾಂಪ್ರತಕಾಲದ ಇಂಥ ಯಂತ್ರವು ಈ ಹೊಸ ಶೋಧದ ಮುಂದೆ ಅನೇಕ ಸಹಸ್ರಗಳ ಪಟ್ಟು ಬಲಹೀನವಾಗಿರುವದು. ಪ್ರತಿನಿಮಿಷದಲ್ಲಿ ಗಿಡವು ಎಷ್ಟರಮಟ್ಟಿಗೆ ಬೆಳೆಯುತ್ತದೆಂಬದನ್ನು ಇದರಿಂದ ಅನಾಯಾಸವಾಗಿ ನೋಡಬಹುದು.

ಕೆಲವು ಪುಷ್ಪಗಳು ಹಗಲಿನಲ್ಲಿಯೂ, ಕೆಲವು ರಾತ್ರಿಯ ಸಮಯದಲ್ಲಿಯೂ ಯಾಕೆ ಅರಳುತ್ತವೆ, ಎಂಬ ತತ್ವವನ್ನಾದರೂ ಇವರು ಶೋಧಿಸಿರುವರು.

'Morograph' ಎಂಬ ಯಂತ್ರವು ಗಿಡಗಳ ನಿಧನಕಾಲವನ್ನು ಗೊತ್ತು ಹಚ್ಚುತ್ತದೆ.

'Conductivity Balance' ಎಂಬ ತಕ್ಕಡಿಯಿಂದ ಪದಾರ್ಥಗಳ ಗುಣದೋಷಗಳ ನಿಯಮಿತ ಪರಿಣಾಮವು ಗೊತ್ತುಮಾಡಲ್ಪಡುತ್ತದೆ.

ಇದೇ ಪ್ರಕಾರ ಇವರು ಕಳೆದ ಹದಿನೈದು ವರ್ಷಗಳಲ್ಲಿ (ಅಂದರೆ ೧೮೯೫-೧೯೧೦) ಎಂಬತ್ತು ಅತ್ಯಂತ ಮಹತ್ವದ ಶೋಧಗಳನ್ನು ಗೊತ್ತುಹಚಿರುವರು. ಇದುವರೆಗೆ ಇವರು ಗೊತ್ತುಹಚ್ಚಿದ ಶೋಧಗಳನ್ನೆಲ್ಲ ಲೊಂಗಮನ್ಸ ಕಂಪನಿಯವರು ೧೯೧೩ರಲ್ಲಿ "Researches on Irritability of plants" ಎಂಬ ಪುಸ್ತಕದಲ್ಲಿ ಸಾಗ್ರವಾಗಿ ಸಂಗ್ರಹಿಸಿರುವರು. ಇದಕ್ಕೂ ಹೆಚ್ಚಿಗೆ ವೃತ್ತಾಂತವು ಬೇಕಾದಲ್ಲಿ ೧೯೧೮-೧೯ರಲ್ಲಿ ಪ್ರಕಟವಾದ "Life movements in Plants Vols. I and II" ಎಂಬ ಎರಡು ಗ್ರಂಥಗಳನ್ನು ತಮ್ಮ ಅವಲೋಕನಾರ್ಥವಾಗಿ ಇಲ್ಲಿ ಉದಹರಿಸಿರುವೆವು.

ಈದೃಶ ಶಾಸ್ತ್ರೀಯ ಚಮತ್ಕೃತಿಗಳ ಶೋಧಕ್ಕೆ ಸಾಧನೆಗಳಾಗಿ ಅತ್ಯಂತ ಸೂಕ್ಷ್ಮವಾದ ಉಪಕರಣಗಳು ಬೇಕೆಂಬದು ಸರ್ವಸಮ್ಮತವಷ್ಟೇ? ಇಂಥ ಉಪಕರಣಗಳು ಮಾತ್ರ ಅಮೇರಿಕೆಯಂಥ ರಾಷ್ಟ್ರದಲ್ಲಿ ಉದ್ಭವಿಸುತ್ತವೆಯೇ ಹೊರ್ತು ಮತ್ತಿತರ ರಾಷ್ಟ್ರದಲ್ಲಿ ಇಲ್ಲವೇಇಲ್ಲ, ಎಂಬದೊಂದು ಪೂರ್ವದ ಭ್ರಾಮಕ ಕಲ್ಪನೆಯು. ಆದ್ದರಿಂದ ಏನಾದರೂ ನವೀನ ಶೋಧಗಳಾಗತಕ್ಕದ್ದು ಎಂದರೆ ಅಮೇರಿಕೆಯೇ ಇದಕ್ಕೆ ಭೂಮಿಕೆಯು. ಆದರೆ ಇತರ ದೇಶಗಳು ವಂಧ್ಯಸ್ತ್ರೀಯರಂತೆಯಂತೆ! ಈದೃಶ ಭ್ರಮೆಯನ್ನು ಹೋಗಲಾಡಿಸಲೋಸುಗ, ಹಿಂದುಭೂಮಿಯಲ್ಲಿಯೇ ನವೀನ ಉಪಕರಣಗಳನ್ನು ಸಿದ್ಧಗೊಳಿಸಿ ಹೊಸ ಹೊಸ ಶೋಧಗಳನ್ನು ಗೊತ್ತುಹಚ್ಚಿಸಿ, ವಿದ್ಯೆಗೆ ದೇಶಮರ್ಯಾದೆಯು ಇಲ್ಲವೆಂಬ ತತ್ವವನ್ನು ಪುನಃ ಜಗದೀಶನು ಜಗದೀಶಚಂದ್ರರ ಮುಖಾಂತರವಾಗಿ ನಮಗೆ ತೋರಿಸಿಕೊಟ್ಟನಲ್ಲವೇ?

---

## ಚತುರ್ಥ ದಲವು.

## ೪

## ದಿಗ್ವಿಜಯವು.

ಮನೋಹರವಾದ ಪ್ಯಾರಿಸ ಪಟ್ಟಣದಲ್ಲಿ ೧೯೦೦ ರಲ್ಲಿ ಶಾಸ್ತ್ರೀಯ ವಿಷಯಕ ಒಂದು ಸಮ್ಮೇಲನವು ಕಲೆತಿತ್ತು. ಅದಕ್ಕೆ ಹಿಂದುದೇಶದ ಪ್ರತಿನಿಧಿಯಾಗಿ ಸರ್ ಜಗದೀಶಚಂದ್ರ ಬೋಸರನ್ನೇ ಆರಿಸಿ, ಆಗಿನ ಬಂಗಾಲದ ಗವರ್ನರರಾದ

ಸರ್ ಜಾನ್ ವುಡ್‌ಬರ್ನ್‌ರು ಪ್ಯಾರೀಸಕ್ಕೆ ಕಳುಹಿಕೊಟ್ಟರು. ಅಲ್ಲಿ ಇವರು ತಮ್ಮ ನವೀನ ಶೋಧಗಳ ಬಗ್ಗೆ ವಿಚಾರಪರಿಪೂರ್ಣವಾದ ಭಾಷಣೆಗಳಿಂದ ಸಭಾಸದರನ್ನು ತಲ್ಲೀನರನ್ನಾಗಿ ಮಾಡಿಬಿಟ್ಟರು. ಇದರಿಂದ ಅವರು ಸಂತುಷ್ಟರಾಗಿ ಇವರನ್ನು ಬಹುಪರಿಯಾಗಿ ಕೊಂಡಾಡಿದರು. ಇದೊಂದು ರಾಷ್ಟ್ರದ ಅಪೂರ್ವವಾದ ಗೌರವವೇ ಸರಿ. ಮುಂದೆ ಇವರು ಪ್ಯಾರಿಸದಲ್ಲಿಯ ಅನೇಕ ಸಂಸ್ಥೆಗಳ ಪರವಾಗಿ ವಿವಿಧ ಉಪನ್ಯಾಸಗಳನ್ನು ಕೊಟ್ಟು, ಜನತೆಯಲ್ಲಿ ನವಜೀವನವನ್ನು ಹರಡಿದರು. ೧೯೦೨ ರಲ್ಲಿ ಅಲ್ಲಿಯ ಒಂದು ಶಾಸ್ತ್ರೀಯ ಸಂಘದ ಗೌರವದ ಸಭಾಸದರನ್ನಾಗಿ ಇವರನ್ನು ಆರಿಸಿದರು. ಮುಂದೆ ಇವರಿಗೆ ಆಕ್ಸಫೋರ್ಡದಿಂದ ಆಮಂತ್ರಣವು ಬಂದಿತು. ಇದನ್ನು ಮಾನ್ಯಮಾಡಿ ಇವರು ಫ್ರಾನ್ಸದಿಂದ ಇಂಗ್ಲಂಡಿಗೆ ಬಂದರು. ಆಕ್ಸಫೋರ್ಡಿನ ದೊಡ್ಡ ದೊಡ್ಡ ವಿದ್ವಾಂಸರು ಈ ಇವರ ಶೋಧಗಳ ಪ್ರಯೋಗಗಳನ್ನು ನೋಡಿ, ದಂಗುಬಡಿದು ಹೋದರು. ಯಾರಾದರೂ ಇವರಿಗೆ 'ನಿಮಗೆ ಈ ಉಪಕರಣಗಳು ಎಲ್ಲಿ ದೊರೆತವು?' ಎಂದು ಪ್ರಶ್ನೆ ಮಾಡಿದರೆ 'ಭರತಭೂಮಿಯಲ್ಲಿ' ಎಂದು ಅಭಿಮಾನಪೂರ್ವಕವಾಗಿ ಇವರು ಹೇಳುವರು. ಮುಂದೆ ಇವರು ಕೆಂಬ್ರಿಜ್ಜಕ್ಕೆ ಹೋಗಲು ಪ್ರೊಫೇಸರ ಸೂವರ್ಡ, ಸರ್ ಫ್ರ್ಯಾನ್ಸಿಸ್ ಡಾರ್ವಿನ್ ಮೊದಲಾದವರು ಇವರ ಅಸಾಧಾರಣ ಬುದ್ಧಿಮತ್ತೆಯನ್ನು ಬಹುಪರಿಯಾಗಿ ಹೊಗಳಿದರು. ಇವರು ಒಳ್ಳೇ ಆಸ್ಥೆಯಿಂದ ಹಿಂದುಸ್ಥಾನದಿಂದ ಸಹ ಇವರ ಗಿಡಪ್ರಯೋಗಗಳಿಗೆ ಮಣ್ಣನ್ನು ಒದಗಿಸಿಕೊಟ್ಟು ಇವರ ಶೋಧಗಳ ರಹಸ್ಯವನ್ನು ಅರಿತುಕೊಳ್ಳಲು ಸಾಹಸಬಟ್ಟರು. ಪ್ರೊಫೇಸರ್ಸ ಸ್ಟ್ಯಾರ್ಡಿಂಗ, ಆಲಿವ್ಹರ, ಕ್ಯಾರಿಥ ರೀಡ ಮೊದಲಾದ ಪ್ರಭೃತಿಗಳೂ ಕೂಡ ಆನಂದಭರಿತರಾದರು. ಮಿ. ಬ್ಯಾಲ್ಫರರು ಸಹ ಇವರ ಶಾಸ್ತ್ರೀಯ ಕಾರಖಾನೆಗೆ ಬಂದು ಬಹಳ ದಿವಸಗಳವರೆಗೆ ಇದ್ದು ನೋಡಿಕೊಂಡು ಹೋದರು. ಮುಂದೆ ಆಸ್ಟ್ರಿಯಾ ಹಂಗರಿಯ ರಾಜಧಾನಿಯಾದ ವ್ಹಿಯನ್ನಾಕ್ಕೆ ಹೋದರು. ಅಲ್ಲಿ ಇವರ ಸುರಸವಾದ ಅನೇಕ ವ್ಯಾಖ್ಯಾನಗಳು ವಿಶ್ವವಿದ್ಯಾಪೀಠದ ಮುಂದೆ ಜರುಗಿದವು. ಕಡೆಗೆ ಆಭಾರವನ್ನು ಮನ್ನಿಸುವ ಸಮಯಕ್ಕೆ ಆ ವಿದ್ಯಾಪೀಠಕ್ಕೆ ಕುಲಗುರುಗಳಂತಿದ್ದ ಪ್ರೊಫೇಸರ ಮ್ಯಾಲಿಚ್ಚರು ಉಪನ್ಯಾಸಗಳನ್ನು ಉಪಸಂಹರಿಸುವ ಕಾಲಕ್ಕೆ ಅಂದದ್ದೇನೆಂದರೆ— "ಯುರೋಪಖಂಡವು ಹಿಂದು ಭೂಮಿಗೆ ಈ ಅಪೂರ್ವ ಶೋಧಗಳ ಬಗ್ಗೆ ತುಂಬಾ ಋಣಿಯಾಗಿರುವದು." ಕೆಲವರು ಕಲಕತ್ತೆಗೆ ಬಂದು ಎಲ್ಲವನ್ನು ಕಲಿತುಕೊಂಡು ಹೋಗ

ಬೇಕೆಂದು ನಿಶ್ಚಯಿಸಿದರು. ಇವರು ಬರ್ಲಿನಕ್ಕೂ ಹೋಗಿ ಹೊಸ ವಾತಾವರಣ ವನ್ನು ಉಂಟುಮಾಡಿದರು. ಮುಂದೆ ಅಮೇರಿಕೆಗೆ ಹೋದರು. ಮೇನ ಪಟ್ಟಣದಿಂದ ಕ್ಯಾಲಿಫೋರ್ನಿಯಾದ ವರೆಗೆ ಇವರಿಗೆ ಆಮಂತ್ರಣದ ಅತಿವೃಷ್ಟಿಯಾಯಿತೆಂದರೂ ಸಲ್ಲುವದು. ನ್ಯೂಯಾರ್ಕ ಮ್ಯಾಕೇಡಮಿ ಆಫ್ ಸಾಯಿನ್ಸ, ಬ್ರುಕ್ಲಿನ್ ಇನ್‌ಸ್ಟಿಟ್ಯೂಟ ಆಫ್ ಆರ್ಟ್ಸ ಆ್ಯಂಡ ಸಾಯಿನ್ಸ, ಹಾರ್ವರ್ಡ, ಕೋಲಂಬಿಯಾ, ಚಿಕ್ಯಾಗೊ ಮೊದಲಾದ ವಿದ್ಯಾಪೀಠಗಳು ಇವರಿಗೆ ಮಾನಪತ್ರಗಳನ್ನು ಸಲ್ಲಿಸಿದವು. ಶಾಸ್ತ್ರೀಯ ಪ್ರಾಗತಿಕ ಸಂಸ್ಥೆಯ ವಾರ್ಷಿಕ ಮಹೋತ್ಸವದ ಕಾಲಕ್ಕೆ ಇವರು ತಮ್ಮ ಉಪನ್ಯಾಸವನ್ನು ಕೊಟ್ಟರು. ನ್ಯೂಯಾರ್ಕ ಬೊಟ್ಯಾನಿಕಲ್ ಸೊಸಾಯಿಟಿ, ಬೋಸ್ಟನ್ನದ ವೈದ್ಯಕೀಯ ಸಂಘ, ಚಿಕ್ಯಾಗೋದ ಸೊಸಾಯಿಟಿ ಆಫ್ ಇಲೆಕ್ಟ್ರಿಕ್ ಎಂಜನೀರ್ಸ, ಇಲಿನೋಯಿಸ್-ಆನ್ ಆರ್ಬರ-ವಿಸ್ಕೋನ್ಸಿನ್ ಮೊದಲಾದ ವಿಶ್ವವಿದ್ಯಾಪೀಠಗಳ ಮುಂದೆ ಅನೇಕ ವ್ಯಾಖ್ಯಾನಗಳು ಜರುಗಿದವು. ಮುಂದೆ ಜಪಾನಕ್ಕೆ ಹೋಗಿ ಎಲ್ಲರ ಆದರಕ್ಕೂ ಪಾತ್ರರಾಗಿ, ಒಳ್ಳೇ ಗೌರವಶಾಲಿಯಾಗಿ ಮರಳಿ ಮಾತೃಭೂಮಿಗೆ ೧೯೨೦ ರಲ್ಲಿ ಜಗದೀಶಚಂದ್ರರು ಬಂದುಬಿಟ್ಟರು. ಇಲ್ಲಿ ಬಂದಮೇಲೆ ಸರ್ವತ್ರದಲ್ಲಿಯೂ ಮಾನಪತ್ರಗಳ ಸುರಿಮಳೆಯಾಯಿತು. ಎಲ್ಲಿ ನೋಡಿದಲ್ಲಿ ಜಗದೀಶಚಂದ್ರರ ಧನ್ಯವಾದವೇ ಧನ್ಯವಾದವು. ಕಲಕತ್ತೆಯ ವಿಶ್ವವಿದ್ಯಾನಿಲಯದವರು ಇವರಿಗೆ ಡಾಕ್ಟರ ಆಫ್ ಸಾಯಿನ್ಸ ಎಂಬ ಬಿರುದನ್ನು ಬಹುಮಾನಪೂರ್ವಕವಾಗಿ ಅರ್ಪಿಸಿದರು. ಇದಲ್ಲದೆ ಪಂಜಾಬ ವಿಶ್ವವಿದ್ಯಾಪೀಠದವರಾದರೂ ಇವರನ್ನು ತಮ್ಮಲ್ಲಿಗೆ ಬರಮಾಡಿಕೊಂಡು ಇವರ ವ್ಯಾಖ್ಯಾನಗಳನ್ನು ಕೇಳಿ ತೃಪ್ತರಾದರು. ಆ ಮೇಲೆ ವಿದ್ಯಾಪೀಠದವರು ೧೫೦೦ ರೂಪಕಗಳನ್ನು ಇವರಿಗೆ ಕಾಣಿಕೆಯಾಗಿ ಅರ್ಪಿಸಿದರು. ಈ ತರದ ಗೌರವವನ್ನು ಪಂಜಾಬಿಗಳು ಬಂಗಾಳಿಗಳಿಗೆ ಮಾಡಿದ್ದು ಇದು ಮೊದಲನೇದೇ ಸರಿ. ಆದರೆ ಜಗದೀಶಚಂದ್ರರು ಆ ಹಣವನ್ನು ಅಲ್ಲಿಯೇ ಛಾತ್ರವೃತ್ತಿಯಾಗಿ ಯಾವನಾದರೊಬ್ಬ ಸಂಶೋಧಕ ವಿದ್ಯಾರ್ಥಿಗೆ ಪ್ರತಿಮಾಸಕ್ಕೆ ೧೦೦ ರೂಪಕಗಳಂತೆ ಕೊಡಹೇಳಿ ತಮ್ಮ ಉದಾರಬುದ್ಧಿಯನ್ನು ವ್ಯಕ್ತಗೊಳಿಸಿದರು.

ಇತ್ತ ಹಿಂದುಸ್ಥಾನದ ಸರಕಾರದವರು ಮೊದಮೊದಲು ಜಗದೀಶಚಂದ್ರರ ವಿದ್ವತ್ತೆಯನ್ನು ಗಣನೆಗೆ ತರುತ್ತಿರಲಿಲ್ಲ. ಯಾವ ಕಾಲಕ್ಕೆ ಆಂಗ್ಲ ಶಾಸ್ತ್ರೀಯ ಸಂಶೋಧನ ಮಂಡಲದವರು ಇವರಿಗೆ ಮಹತ್ವವನ್ನು ಕೊಡಲಾರಂಭಿಸಿದರೋ

ಅಂದಿನಿಂದ ಇಲ್ಲಿಯು ಸರಕಾರದವರು ಅಲ್ಪಮಟ್ಟಿಗೆ ಸಹಾಯವನ್ನು ಮಾಡಲು ಆರಂಭಿಸಿದರು. ೧೯೦೦ರಲ್ಲಿ ಪ್ಯಾರಿಸದಲ್ಲಿ ನೆರೆದ ಶಾಸ್ತ್ರೀಯ ಸಮ್ಮೇಲನಕ್ಕೆ ಸರಕಾರದವರು ಇವರನ್ನು ಕಳುಹಿದ್ದು ನಮ್ಮ ವಾಚಕವರ್ಗದವರ ಸ್ಮರಣೆಯಲ್ಲಿರಬಹುದು. ಮುಂದೆ ೧೯೦೩ರಲ್ಲಿ ಸೀ. ಆಯ್. ಈ. ಎಂಬ ಪದವಿಯನ್ನೂ, ೧೯೧೧ರಲ್ಲಿ ರಾಜಪಟ್ಟಾಭಿಷೇಕದ ಸಮಯದಲ್ಲಿ ಸೀ. ಎಸ್. ಆಯ್. ಎಂಬ ಪದವಿಯನ್ನೂ ಕೊಟ್ಟು ಸರಕಾರದವರು ಇವರನ್ನು ಅಭಿನಂದಿಸಿದರು. ೧೯೧೬ರಲ್ಲಿ ಇವರು ಅಮೇರಿಕೆಯಿಂದ ಬರಲು, ಬಂಗಾಲ ಇಲಾಖೆಯ ಸರಕಾರದವರು ಇವರನ್ನು ಸಾರ್ವಜನಿಕ ಸಭೆಯಲ್ಲಿ ಬಹುಪರಿಯಾಗಿ ಮನ್ನಿಸಿದರು. ೧೯೧೭ರಲ್ಲಿ ಇವರಿಗೆ ಸರದಾರ ಪದವಿಯಾದರೂ ಕೊಡಲ್ಪಟ್ಟಿತು. ಆ ಮೇಲೆ ಡಾ. ಪೀ. ಸೀ. ರೇ ಯವರು ಇವರ ಬಗ್ಗೆ ಅಭಿನಂದನಪರವಾಗಿ ಅಂದದ್ದೇನಂದರೆ:—"ಇವರು ಶಾಸ್ತ್ರೀಯ ಕ್ಷೇತ್ರಗಳಲ್ಲಿ ಹೊಸ ಹೊಸ ಅಗಿಗಳನ್ನು ಹೂಳಿರುವರು. ಇವು ಬೆಳೆದು ದೊಡ್ಡವಾಗಿ ಜನಗಳಿಗೆ ಫಲದ್ರೂಪವಾಗುವವು. ಆದದರಿಂದಲೇ ಇವರಿಗೆ ನಾವೆಲ್ಲರು ನವಯುಗಪ್ರವರ್ತಕರೆಂದರೂ ಸಲ್ಲುವದು. ತಾವು ಮಾಡಿದ ಅನೇಕ ಶೋಧಗಳ ಬಾಧ್ಯತೆಯನ್ನು ತಮ್ಮ ಕಡೆಗೆನೇ ಇಟ್ಟುಕೊಂಡಿದ್ದರೆ ಇವರು ಅಪರಿಮಿತ ಧನಸಂಚಯವನ್ನು ಮಾಡಬಹುದಾಗಿತ್ತು. ಆದರೆ ಆ ತರದ ಯಾವ ಕೃತಿಯನ್ನೂ ಮಾಡದೆ ಸರ್ವರಿಗೂ ಪುಕ್ಕಟೆಯಾಗಿ ವಿದ್ಯೆಪ್ರದಾನವನ್ನು ಮಾಡಿರುವದು ಇವರ ಉದಾರತರದ ಪರಮಾವಧಿಯು. ಆದದರಿಂದಲೇ ಇವರ ಅಲೌಕಿಕವಾದ ಸ್ವಾರ್ಥತ್ಯಾಗವು ಕಣ್ಣುಗಳಿಗೆ ಗೋಚರವಾಗದಿರದು.

ಸರ್ ಜಗದೀಶಚಂದ್ರರು ಕಲಕತ್ತೆಯ ಪ್ರೆಸಿಡೆನ್ಸಿ ಕಾಲೇಜದ ಸೇವೆಯಿಂದ ೧೯೧೩ರಲ್ಲಿ ಮುಕ್ತರಾಗಬಹುದಾಗಿತ್ತು. ಯಾಕಂದರೆ ಅವರ ವಯಸ್ಸು ಆ ಕಾಲಕ್ಕೆ ಐವತ್ತೈದು ಆಗಿತ್ತವು. ಆದರೆ ವಿದ್ಯಾರ್ಥಿಗಳ ಬಗ್ಗೆ ಇದ್ದ ಇವರ ಪ್ರೇಮದ ಮೂಲಕ ಇವರಿಗೆ ಇನ್ನೆರಡು ವರ್ಷಗಳ ವರೆಗೆ ಕೆಲಸ ಮಾಡಲು ಸರಕಾರದವರು ಆಸ್ಪದವನ್ನು ಕೊಟ್ಟರು. ಮುಂದೆ ಇವರು ೧೯೧೫ರ ನವ್ಹೆಂಬರ ತಿಂಗಳದಲ್ಲಿ ತಮ್ಮ ಕೆಲಸದಿಂದ ಮುಕ್ತರಾದರು. ಆಮೇಲೆ ಸರಕಾರದವರು ಇವರಿಗೆ ಇವರ ಪಗಾರದ ಅರ್ಧ ಹಣವನ್ನು ಪೆನ್ಸನ್ನಾಗಿ ಕೊಡದೆ ಸಂಪೂರ್ಣವಾದ ವೇತನವನ್ನು ಈಗ್ಯೂ ಸಲ್ಲಿಸುತ್ತಿರುವರು. ಇದೇನು ಸರ್ವಸಾಧಾರಣ ಗೌರವವೇ ?

# ಪಂಚಮ ದಲವು.

೫

## ಬೋಸ ಸಂಶೋಧನ ಮಂಡಲ.

ಸಾಂಪ್ರತ ಕಾಲದಲ್ಲಿ ನಮ್ಮ ದೇಶದಲ್ಲಿ ಅಲ್ಲಲ್ಲಿಗೆ ಒಂದೊಂದು ವಿಶ್ವವಿದ್ಯಾಪೀಠವು ಉಂಟು. ಇವುಗಳಲ್ಲಿ ಪರಂಪರಾಗತ ವಿದ್ಯೆಯು ಮಾತ್ರ ವಿದ್ಯಾರ್ಥಿಗಳಗೆ ದೊರಕುತ್ತದೆ. ಆದರೆ ಹೊಸಹೊಸ ಶೋಧಗಳನ್ನು ಕಂಡುಹಿಡಿದು ಆ ತರದ ನಿಜವಾದ ವಿದ್ಯೆಯು ಇವುಗಳಲ್ಲಿ ದೊರಕಲಾರದು. ಇವುಗಳಲ್ಲಿ ಕಲೆತು ನಮ್ಮ ವಿದ್ಯಾರ್ಥಿಗಳು ಉಚ್ಚಶಿಕ್ಷಣಕ್ಕಾಗಿ ಪರದೇಶಗಳಿಗೆ ಹೋಗುವ ಪ್ರಸಂಗವು ಬರುವದು. ಆದರೆ ಪರದೇಶಗಳಿಂದ ನಮ್ಮ ವಿದ್ಯಾಪೀಠಗಳಿಗೆ ಯಾವ ಪರರಾಷ್ಟ್ರೀಯ ವಿದ್ಯಾರ್ಥಿಯು ಬರಲಾರನು. ನಮ್ಮ ದೇಶದ ವಿದ್ಯಾಪೀಠಗಳಲ್ಲಿ ಪರರ ಅನುಕರಣ ಮಾಡಲು ನಾವು ಕಲಿತುಕೊಳ್ಳುತ್ತೇವೆ. ಇದೆಲ್ಲವೂ ನಿಜವಾದ ಜ್ಞಾನದ ಅವಹೇಲನವೇ ಸರಿ- ಹೊಸ ಹೊಸ ಶೋಧಗಳಿಂದ ಜ್ಞಾನವನ್ನು ಹೆಚ್ಚುಪಡಿಸದ ಹೊರ್ತು ನಮ್ಮ ವಿದ್ಯೆಯು ಸಫಲವಾಗಲಾರದು. ನಿಜವಾದ ವಿಶ್ವವಿದ್ಯಾಪೀಠದ ಲಕ್ಷಣಗಳೆಂದರೆ, ಹೊಸದಾಗಿ ಸಂಶೋಧನದ ಕಾರ್ಯಜಾಗ್ರತಿಯು ಪ್ರಗತಿಯು ಎಲ್ಲಿಯುವರೆಗೆ ಸಾಧಿಸಿರುವದು? ಸಂಶೋಧಕರಿಗೆ ಎಷ್ಟು ನೆರವಾಗಿರುವಿರಿ? ಪರರಾಷ್ಟ್ರಗಳಿಗೆ ನಿಮ್ಮ ವಿದ್ಯಾರ್ಥಿಗಳನ್ನು ಕಳುಹುವವಲ್ಲದೆ, ನಿಮ್ಮಲ್ಲಿಯ ವಿದ್ಯೆಗೆ ಮೋಹಿಸಿ ಪರರಾಷ್ಟ್ರೀಯ ವಿದ್ಯಾರ್ಥಿಗಳು ನಿಮ್ಮಲ್ಲಿಗೆ ಎಷ್ಟು ಜನರು ಬಂದಿರುವರು? ಇವೇ ಮೊದಲಾದ ಪ್ರಶ್ನೆಗಳ ಯಥಾರ್ಥ ಉತ್ತರವೇ ನಿಜವಾಗಿ ವಿಶ್ವವಿದ್ಯಾಪೀಠವ ಅಡಿಗಲ್ಲು. ಇದೇನು ಅಸಾಧ್ಯವಾದ ವಸ್ತುವೇ? ಪೂರ್ವಕಾಲದಲ್ಲಿ ನಮ್ಮಲ್ಲಿಯು ನಲಂದ, ತಕ್ಷಶಿಲಾ ಮೊದಲಾದ ವಿಶ್ವವಿದ್ಯಾಪೀಠಗಳಿಗೆ ಪರದೇಶಗಳಿಂದ ಅನೇಕ ವಿದ್ಯಾರ್ಥಿಗಳು ಕಷ್ಟಪರಂಪರೆಗಳನ್ನು ಸಹಿಸಿ ಇಲ್ಲಿಯು ವರೆಗೆ ಬಂದು ಯಥಾರ್ಥವಿದ್ಯೆಯುನ್ನು ಹೊಂದುತ್ತಿರಲಿಲ್ಲವೇ ?

ಇತ್ತೀಚೆಗಂತೂ ನಮ್ಮಲ್ಲಿ ಸಂಶೋಧಕ ಬುದ್ಧಿಯು ಹೆಚ್ಚುತ್ತಲಿದೆ. ಇದೇನು ಯಾವ ವರ್ಗಗಳಲ್ಲಿಯೂ ಶಿಕ್ಷಕರು ಕಲಿಸತಕ್ಕ ವಿಷಯುವಲ್ಲ- ಈಗ ತಾನೇ ಪೃಥ್ವಿ

ಯಲ್ಲಿ ೧೦೦೦೦ ಜನರು ಈ ಕಾರ್ಯದಲ್ಲಿ ಮಗ್ನರಾಗಿರುವರು. ಆದರೆ ಯಶಸ್ಸು ದೊರಕಿದ್ದು ತೀರ ಅಪರೂಪವು. ಯಾಕಂದರೆ ಕೇವಲ ವರ್ಗಗಳನ್ನು ಕಲ್ಪಿಸಿದರೆ ಈ ತರದ ವಿಜಯವು ದೊರೆಯುವದಿಲ್ಲ ಎಂಬ ಸಂಗತಿಯು ಅನುಭವಸಿದ್ಧವು. ಈ ಮಾರ್ಗದಲ್ಲಿ ನಮಗೆ ನಿಜವಾಗಿ ಸಿದ್ಧಿಯು ದೊರೆಯುಬೇಕಾದರೆ ಸಿದ್ಧನಾದ ಒಬ್ಬ ಗುರುವು ಬೇಕಾಗುವನು; ಇವನು ವಿದ್ಯೆಯನ್ನು ಸ್ವತಃ ಅನೇಕ ಎಡರುಗಳನ್ನು ಅನುಭವಿಸಿ ದೊರಕಿಸಿರಬೇಕು; ಅಂದರೆ ತನ್ನ ಶಿಷ್ಯರಿಗೆ ಈ ಕಂಟಕಮಯವಾದ ಮಾರ್ಗವನ್ನು ಸುಗಮವಾಗಿ ಮಾಡಿಡಲು ಅವನಿಗೆ ಸಾಧ್ಯವಾಗುವದು. ಸತ್ಯಾನ್ವೇಷಣೆಯಲ್ಲಿ ಜನರ ಮನಸ್ಸನ್ನು ಇವನು ತೊಡಕಿಸಲು ಬೇಕು; ಇವನೇ ನಿಜವಾದ ಗುರುವು. ದೀಪದಿಂದ ದೀಪವು ಹೊತ್ತುತ್ತದೆಯೇ ಹೊರ್ತು ಮತ್ತೊಂದರಿಂದ ಅದು ಸಾಧ್ಯವಿಲ್ಲ. ಅದರಂತೆಯೇ ಜ್ಞಾನಮಯ ತೇಜಯುತನಾದ ಗುರುವಿನಿಂದಲೇ ತೇಜವು ದೊರೆಯಲು ಸಾಧ್ಯವು; ಅಲ್ಲದೆ ಜ್ಞಾನಾಗ್ನಿವಿರಹಿತನಾದ ನರನಿಂದ ವಿದ್ಯೆಯನ್ನು ಪಡೆಯುವದೆಂತು? ಇಂಥ ಗುರುಗಳನ್ನು ಒಳ್ಳೇ ಜಾಗ್ರತೆಯಿಂದ ಪರೀಕ್ಷಿಸಿ, ವಿದ್ಯೆಯನ್ನು ಪಡೆಯುಬೇಕು. ಗುರುವಿಗೆ ತನ್ನ ಸರ್ವಸ್ವವನ್ನೂ ಅರ್ಪಿಸಿ, ಧನ-ಕೀರ್ತಿ ಮೊದಲಾದ ಆಶೆಗಳಿಂದ ವಿರಹಿತನಾಗಿ ವಿದ್ಯೆವಂತನಾಗಬೇಕು. ಅಂತಿಮ ಧ್ಯೇಯವನ್ನು ಯಾವಾಗಲೂ ಕಣ್ಣುಮುಂದೆ ಇಟ್ಟುಕೊಂಡು ದೃಢನಿಶ್ಚಯದಿಂದಲೂ, ವಿಶ್ವಾಸಯುತಪ್ರೇಮದಿಂದಲೂ ಅದನ್ನು ಸಾಧಿಸಲು ಹಗಲಿರುಳು ಚಿಂತಿಸಬೇಕು. ಈ ಬಗೆಯಾಗಿ ಸಾಧಿಸಲು ಹೊರಟ ಸಾಧಕರಲ್ಲಿ ಕೆಲವರು ಮಾತ್ರ ಸಿದ್ಧರಾಗಬಹುದು.

ನಿಜವಾದ ಗುರುವು ದೊರೆತ ಮೇಲೆ ಯೋಗ್ಯವಾದ ಸ್ಥಾನವು ನಮಗೆ ಬೇಕಾಗುವದು. ಈ ಸಂಶೋಧನದ ಕಾರ್ಯಕ್ಕೆ ಹಿಂದುದೇಶವು ಬಲು ಸೌಕರ್ಯವು. ಯಾಕಂದರೆ, ಇಲ್ಲಿಯ ಹವಾಮಾನಕ್ಕನುಗುಣವಾಗಿ ನಮಗೆ ಅನೇಕ ಪ್ರಾಣಿಗಳೂ ವನಸ್ಪತಿಗಳೂ ದೊರಕುತ್ತವೆ. ಈ ತರದ ಸೌಕರ್ಯವು ಉತ್ತರ ಸೀಮೆಗಳಲ್ಲಿ ದೊರೆಯಲಾರದು. ಇಂಥ ನೈಸರ್ಗಿಕ ಅನುಕೂಲತೆಯನ್ನು ಉಪಯೋಗಿಸಿಕೊಳ್ಳಲು ನಮ್ಮಲ್ಲಿ ದೃಢವಿಶ್ವಾಸ, ದೀರ್ಘಪ್ರಯತ್ನ, ಅಚಲವಾದ ಮಾನಸಿಕ ಧೈರ್ಯ ಇವೇ ಮೊದಲಾದ ಸದ್ಗುಣಗಳು ಅವಶ್ಯವಾಗಿ ನಮ್ಮಲ್ಲಿ ಇರಲೇಬೇಕು. ಅಂದರೇನೇ ಜಗತ್ತಿನಲ್ಲಿ ಇದುವರೆಗೆ ಕಂಡುಕೊಂಡ ಜ್ಞಾನಕ್ಕೆ ಹೆಚ್ಚಿಗೆ ಸಂಗ್ರಹವನ್ನು ಮಾಡಿಕೊಟ್ಟಂತಾಗುವದು. ಈ ತರದ ಗುಣಗಳಿಂದ ಪ್ರೇರಿತರಾದ ಅನೇಕ

ತರುಣರು ನಮ್ಮಲ್ಲಿ ದೊರೆಯಲು ನಮಗೇನು ಕಷ್ಟವೆನಿಸುವದಿಲ್ಲ. ಆದರೆ ಈ ಎಲ್ಲ ತರದ ಅನುಕೂಲತೆಯನ್ನು ಒದಗಿಸಿಕೊಡುವ ಸಂಸ್ಥೆಯಾದರೂ ಎಲ್ಲಿ?

ಈ ತರದ ಕೊರತೆಯನ್ನು ಹೋಗಲಾಡಿಸಲು ಸರ್ ಜಗದೀಶ ಚಂದ್ರರು ೧೯೧೭ನೇ ಇಸ್ವಿಯ ನವ್ಹೆಂಬರ ೩೦ನೇ ತಾರೀಖಿನ ದಿವಸ (ತಮ್ಮ ೫೯ನೇ ಹುಟ್ಟಿದ ದಿವಸವೇ) ಕಲಕತ್ತೆಯಲ್ಲಿ ಒಂದು ಸಂಶೋಧನ ಶಾಲೆಯನ್ನು ಸ್ಥಾಪಿಸಿರುವರು. ಇದೊಂದು ಮೇಲ್ಕಾಣಿಸಿದ ಸರ್ವತತ್ವಗಳನ್ನು ಒಳಕೊಂಡ ವಿದ್ಯಾಮಂದಿರವೇ ಸರಿ. ತಮ್ಮ ಐಹಿಕ ಸುಖಸಂಪತ್ತಿಗೆ ತಿಲಾಂಜಲಿಯನ್ನಿತ್ತು, ಇವರು ಇಲ್ಲಿ ಹಗಲಿರುಳು ಮೈಮರೆದು ತತ್ವಾನ್ವೇಷಣೆಯ ಸಲುವಾಗಿ ಹವಣಿಸುತ್ತಿರುವರು. ತಮ್ಮ ಧ್ಯೇಯವನ್ನು ಮರೆಯದೆ ನಿರಂತರವಾಗಿ ಇವರು ಶ್ರಮಬಡುವದನ್ನು ನೋಡಿದರೆ ನಮ್ಮ ದೇಶದ ಭಾಗ್ಯೋದಯದ ಕಾಲವು ತೀರ ಸಮೀಪಿಸಿರುವದೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಇವರು ಸನ್ಯಾಸಿಯ ವೃತ್ತಿಯನ್ನು ತಮ್ಮ ಶಿಷ್ಯರಲ್ಲಿಯೂ ಕೂಡ ಪ್ರೇರಿಸಿರುವರು. “ಕೇವಲ ವಿಚಾರಮಾತ್ರದಿಂದಲೇ ಅಮರತ್ವವು ಪ್ರಾಪ್ತವಾಗುತ್ತದೆ. ಮಾನವಕೋಟಿಯ ಸಾಮ್ರಾಜ್ಯವು ಯಾವಾಗಲೂ ಸುಸ್ಥಿರವಾಗಿ ಇರಬೇಕಾದರೆ, ಉದಾರಾಂತಃಕರಣದಿಂದ ಸುವಿಚಾರಗಳ ವಿನಿಮಯವು ಆಗೇ ತೀರಬೇಕು. ಈದೃಶ ಸ್ಥಿರತೆಯು ಧನಧಾನ್ಯಾದಿ ಸಂಗ್ರಹದಿಂದ ಸಾಧ್ಯವಿಲ್ಲ,” ಎಂದು ಇವರು ಸ್ಪಷ್ಟವಾಗಿ ಅಭಿಪ್ರಾಯಪಟ್ಟಿರುವರು. ಸ್ವಾರ್ಥತ್ಯಾಗದಿಂದಲೇ ಮನುಷ್ಯನಿಗೆ ನಿಜವಾದ ಜ್ಞಾನದ ಫಲವು ದೊರೆಯುವದೆಂಬುದು ಇವರಿಗೆ ಗೊತ್ತಿದ್ದ ಮಾತಾಗಿದೆ. ಇಲ್ಲಿ ಇವರ ವಿದ್ಯಾರ್ಥಿಗಳು ಯಾವಾಗಲೂ ತಮ್ಮ ಸರ್ವಬಲವನ್ನು ಕೇಂದ್ರೀಕರಿಸಿ, ಒಳ್ಳೇ ಗುರುಭಕ್ತಿಯಿಂದ ಜ್ಞಾನಾರ್ಜನೆಯಲ್ಲಿ ತೊಡಗಿರುವರು. ಇಲ್ಲಿ ಜ್ಞಾನಪ್ರಸಾರದ ಕಾರ್ಯವು ಜಾತಿ, ಧರ್ಮ, ಲಿಂಗ ಮೊದಲಾದವುಗಳ ಕೊಂಚು ಕೂಡ ಭೇದವಿಲ್ಲದೆ ಜರುಗುತ್ತಿರುವದು. ಪ್ರತಿ ಹದಿನೈದು ದಿವಸಕ್ಕೊಮ್ಮೆ ತಾವು ತಮ್ಮ ಶಿಷ್ಯರೊಂದಿಗೆ ಕಂಡುಹಿಡಿದ ಸಂಗತಿಗಳನ್ನು ಇವರು ಹತ್ತು-ಹದಿನೈದು ಸಾವಿರ ಜನಸಮುದಾಯದ ಮುಂದೆ ಉಪನ್ಯಾಸರೂಪವಾಗಿ ಬಡಿಸುವರು. ಇವುಗಳನ್ನು ಅಚ್ಚು ಹಾಕಿಸಿ, ಭೂಮಂಡಲದಲ್ಲಿ ಪ್ರಚುರಗೊಳಿಸುವರು. ತಮ್ಮ ಸಂಶೋಧನಗಳಿಗೆ ಯಾವ ತರದ ಬಾಧ್ಯತೆಯನ್ನೂ ಇಟ್ಟುಕೊಳ್ಳುವದಿಲ್ಲ. ಇಂಥವುಗಳನ್ನು ಇವರು ಎಂದಿಗೂ ಸ್ವಾರ್ಥಸಾಧನೆಗಾಗಿ ಉಪಯೋಗಿಸುವದಿಲ್ಲ. ಈ ಸಂಸ್ಥೆಯಲ್ಲಿ ಕಲಿಯಲು

ಬಂದ ಪರರಾಷ್ಟ್ರೀಯ ವಿದ್ಯಾರ್ಥಿಗಳಿಗೆ ಹೆಚ್ಚು ಸೌಕರ್ಯವನ್ನು ಇವರು ಕಲ್ಪಿಸಿ ಕೊಡುವರು. ಇಪ್ಪತ್ತೈದು ಶತಮಾನಗಳ ಪೂರ್ವದಲ್ಲಿ ಯಾವ ಪ್ರಕಾರ ನಮ್ಮ ದೇಶಕ್ಕೆ ಪರದೇಶದಿಂದ ವಿದ್ಯಾರ್ಥಿಗಳು ಬರುತ್ತಿದ್ದರೋ ಅದರಂತೆಯೇ ಪೃಥ್ವಿಯ ಸರ್ವದಿಶೆಗಳಿಂದಲೂ ಇಲ್ಲಿಗೆ ಜನತೆಯು ಬರಲಾರಂಭಿಸಿದೆ.

" ಬಾಲ್ಯಾವಸ್ಥೆಯಲ್ಲಿ ನನ್ನ ಮನಸ್ಸಿನಲ್ಲಿದ್ದ ವಿಚಾರವು ಕಾರ್ಯತಃ ಈಗ್ಗೆ ಪರಿಣಮಿಸಿರುತ್ತದೆ. ಸಾಧ್ಯವಸ್ತುವು ಅನಂತವು. ಸಂಪೂರ್ಣ ಸಿದ್ಧಿಯು ಒಂದು ಜನ್ಮದಲ್ಲಿ ಕೇವಲ ಅಸಾಧ್ಯವು. ಆದರೆ ಇದನ್ನು ಹೊಂದಲು ಅನೇಕ ಜನ್ಮಗಳನ್ನು ನಾವು ಕಳೆಯಬೇಕಾಗುತ್ತದೆ. ಈ ಜನ್ಮದಲ್ಲಿ ಮಾತ್ರ ನಾನು ಇದರ ಅಸ್ತಿವಾರವನ್ನು ಕಟ್ಟಿರುವೆನು. ನಾನು ನನ್ನ ಜನನಿಯ ಉದರದಿಂದ ಈ ಜಗತ್ತಿನಲ್ಲಿ ಬರುವಾಗ್ಗೆ ನನ್ನ ಸಂಗಡ ಏನೂ ಕಟ್ಟಿಕೊಂಡು ಬಂದಿರಲಿಲ್ಲ; ಹೋಗುವದಾದರೂ ಹಾಗೆಯೇ ಸರಿ; ಈ ಮಧ್ಯದಲ್ಲಿ ಏನಾದರೂ ನಾನು ಸಾಧಿಸಿದರೆ ಅದು ನನ್ನ ಆತ್ಮಕ್ಕೆ ಲಾಭವು. ನನ್ನಲ್ಲಿ ಇದ್ದದ್ದನ್ನೆಲ್ಲ ಪರರಿಗೆ ಕೊಟ್ಟುಬಿಡುವೆನು. ಇದೇ ನಿಜವಾದ ನನ್ನ ಮನೋಭಾವನೆಯು, " ಎಂದು ಇವರು ಅನೇಕಶಃ ಉದ್ಗಾರಗಳನ್ನು ತೆಗೆದಿರುವರು.

ಈ ಮೇರೆಗೆ ಇವರು ಯಾವಾಗಲೂ ಆಧ್ಯಾತ್ಮವಿಚಾರಗಳನ್ನೇ ಜನರಿಗೆ ಬೋಧಿಸುವರು. ಇವುಗಳನ್ನು ಕೇಳಲು ಭೂಮಂಡಲದಿಂದ ಅನೇಕ ವಿದ್ವನ್ಮಣಿಗಳು ಬಹುದೂರದಿಂದ ಇಲ್ಲಿಗೆ ಬರುವರು. ಈ ಇವರ ಆತ್ಮೀಯ ಜ್ಞಾನದ ಪ್ರಭೆಯು ಜಗತ್ತಿಗೆಲ್ಲ ಬಹು ಬಲವಾದ ಪ್ರಕಾಶದಂತೆ ಹೊಳೆಯುತ್ತಿರುವದು. ಪೂರ್ವಕಾಲದಲ್ಲಿ ನಮ್ಮ ದೇಶದ ಅನೇಕ ಋಷಿಗಳು ಅಲ್ಲಲ್ಲಿಗೆ ಆಶ್ರಮಗಳನ್ನು ಏರ್ಪಡಿಸಿ ಈ ಶ್ರಮದಲ್ಲಿ ಬೇಸತ್ತು ಬಂದ ಸಂಸಾರಿಕರಿಗೆ ಯಾವ ಪ್ರಕಾರ ಸ್ವತಂತ್ರವಾಗಿ ವಿದ್ಯೆಯನ್ನು ಕರುಣಾದ್ರ್ರವದೃಷ್ಟಿಯಿಂದ ದಯಪಾಲಿಸುತ್ತಿದ್ದರೋ, ಅದೇ ಮೇರೆಗೆ ಪೂರ್ವದ ಅದ್ವಿತೀಯ ಆರ್ಯಸಂಸ್ಕೃತಿಯ ತೇಜದಿಂದುಕ್ಕುವ ನಮ್ಮ ಜಗದೀಶಚಂದ್ರರು ಜಗತ್ತಿಗೆಲ್ಲ ತಮ್ಮ ವಿಜ್ಞಾನವನ್ನು ಹರಡುತ್ತಿರುವದನ್ನು ನೋಡಿದರೆ, ಪೂರ್ವೀಯ ವೈಭವದ ಕಾಲವು ಸಮೀಪಿಸಿದಂತೆ ಭಾಸವಾಗುವದಿಲ್ಲವೇ!

ಇದುವರೆಗೆ ಈ ವಾಣೀವಿಲಾಸಮಂದಿರದ ಅಂತರ್ವಿಚಾರವಾಯಿತು. ಇನ್ನು ಇದರ ಬಾಹ್ಯಸ್ವರೂಪವನ್ನು ನಿರೀಕ್ಷಿಸುವಾ. ಇದು ಕಲಕತ್ತೆಯ ಒಂದು

ಮುಖ್ಯಾಂಶದಲ್ಲಿ ಕಟ್ಟಲ್ಪಟ್ಟಿದೆ. ಈ ಕಟ್ಟಡವನ್ನು ಪೂರ್ವೀ ಹಿಂದು-ಪದ್ಧತಿಯಂತೆಯೇ ಬಲು ಸುಂದರವಾಗಿ ಕಟ್ಟಿರುತ್ತಾರೆ. ಈ ಇಮಾರತಿಯ ಮುಂಬದಿಯಲ್ಲಿ ಒಂದು ಹೂದೋಟವು ಅದರ ನೈಸರ್ಗಿಕ ರಮ್ಯತೆಯನ್ನು ಚನ್ನಾಗಿ ವ್ಯಕ್ತಗೊಳಿಸುತ್ತದೆ. ಇಲ್ಲಿ ಅನೇಕತರದ ವನಸ್ಪತಿಗಳನ್ನು ಸಂಗ್ರಹಿಸಿರುತ್ತಾರೆ. ಮಧ್ಯದಲ್ಲಿ ಒಂದು ಸರೋವರವಿದ್ದು ಅಲ್ಲಿಯೇ ಒಂದು ಕಾರಂಜಿಯು ತುಷಾರಗಳನ್ನು ಸಿಂಚಿಸಿ, ಇಂದ್ರಧನುಷ್ಯವನ್ನು ಉಂಟುಮಾಡುತ್ತಲಿದೆ. ಅಲ್ಲಲ್ಲಿಗೆ ತರತರದ ಶಾಸ್ತ್ರೀಯ ಉಪಕರಣಗಳು ಪ್ರೇಕ್ಷಕರ ನೋಟಕ್ಕಾಗಿ ಇಡಲ್ಪಟ್ಟಿವೆ. ಮಧ್ಯದಲ್ಲಿ ಒಂದು ದೊಡ್ಡ ಸಭಾಸ್ಥಾನವಿದೆ. ಇದು ೧೫೦೦ಜನ ಸಮುದಾಯಕ್ಕೆ ಸಾಕಷ್ಟು ಇದೆ. ಇದರ ಕೆಲವು ಭಾಗಗಳಲ್ಲಿ ಕಾಜಿನ ವಿಭಾಗಗಳುಂಟು. ಇವುಗಳಲ್ಲಿ ತರತರದ ನವೀನ ಉಪಕರಣಗಳು ಸಂಗ್ರಹಿಸಲ್ಪಟ್ಟಿವೆ. ಕೆಲವೆಡೆಯಲ್ಲಿ ಸಂಶೋಧನ ಕಾರ್ಯವು ನಡೆಯುತ್ತಿರುತ್ತದೆ. ಇವೆಲ್ಲವನ್ನೂ ನೋಡಲಿಕ್ಕೆ ಪ್ರೇಕ್ಷಕರಿಗೆ ಪ್ರತಿಬಂಧವಿಲ್ಲ ಇಲ್ಲಿಯೇ ಜಗದೀಶಚಂದ್ರರ ಮನೆಯೂ ದರೂ ಉಂಟು ಇದರಲ್ಲಿಯೇ ಒಂದು ಗ್ರಂಥಸಂಗ್ರಹಾಲಯವೂ ಇರುವದು. ಇದರಲ್ಲಿ ಇನ್ನೂ ಸಾಕಷ್ಟು ಗ್ರಂಥಗಳು ದೊರೆಯುವದಿಲ್ಲ. ಈ ಸಂಸ್ಥೆಯಲ್ಲಿ ಕೆಲಸವನ್ನು ಮಾಡುವವರಿಗೆ ಒಂದು ಪ್ರತ್ಯೇಕ ವಸತಿಗೃಹವನ್ನೂ ಏರ್ಪಡಿಸಿರುವರು.

ಸರ್ ಜಗದೀಶಚಂದ್ರರು ಮೊನ್ನೆ ಮೊನ್ನೆ ಇಂಗ್ಲಂಡ, ಅಮೇರಿಕಾ ಮೊದಲಾದ ದೇಶಗಳಿಗೆ ಹೋಗಿ ಬಂದದ್ದರಿಂದಂತೂ ಈ ವಿದ್ಯಾಮಂದಿರದ ಮಹತಿಯು ದಿನೇದಿನೇ ಹೆಚ್ಚುತ್ತಲಿದೆ. ಇದಕ್ಕೆ ಅನೇಕ ಪರರಾಷ್ಟ್ರೀಯ ಸಭಾಸದರುಂಟು; ಅವರಲ್ಲಿ ಪ್ರೆಸಿಡೆಂಟ ಆಫ್ ರಾಯಲ್ ಸೊಸಾಯಿಟಿ ಆಫ್ ಲಂಡನ್, ಪ್ಯಾರಿಸದ ಪ್ರೆಸಿಡೆಂಟ ಆಫ್ ದಿ ಯ್ಯಾಕೇಡಮಿ ಆಫ್ ಸಾಯಿನ್ಸ, ಪ್ರಸಿದ್ಧ ಶಾಸ್ತ್ರೀಯ ಪಂಡಿತರಾದ ಸ್ವೀಡನ್ನದ ಆರ್ಹೆನಿಸ್, ಬರ್ಲಿನದ ಹಬರ್ಲಂಡ, ವ್ಹಿಯನ್ನಾದ ಮೊಲಿಚ್, ಅಮೇರಿಕೆಯ ಮಿಲಿಕಾನ್ ಮತ್ತು ಸ್ಟೈಶಿಲ್ಲಿ ಹಾಲ್ ಮೊದಲಾದವರೇ ಮುಖ್ಯರು.

ಜಗದೀಶಚಂದ್ರರ ಅನೇಕ ಗ್ರಂಥಗಳು ಪರಭಾಷೆಯಲ್ಲಿ ಮುದ್ರಿಸಲ್ಪಡಹತ್ತಿವೆ. ಸರ್ವದಿಶೆಗಳಲ್ಲಿಯೂ ಇವರ ವಿಚಾರಗಳನ್ನು ಓದಲು ಜನತೆಯು ಹಾತೊರೆಯ ಹತ್ತಿರುತ್ತದೆ.

ಈ ಮಂದಿರದಲ್ಲಿ ಸಂಶೋಧನಕಾರ್ಯವು ಬಲು ಜಾಗ್ರತೆಯಾಗಿ ನಡಿಯಬೇಕೆಂದು ತಿಳಿದು ಸರಕಾರದವರು ಇದಕ್ಕೆ ಜನತೆಯು ಕೊಟ್ಟಷ್ಟರ ಇಮ್ಮಡಿ ಹಣವನ್ನು ಕೊಡುತ್ತಲಿರುವರು. ಸ್ವತಃ ಜಗದೀಶರು ಈ ಮಂದಿರದ ಸಲುವಾಗಿ ಹತ್ತು ಲಕ್ಷ ರೂಪಾಯಿಗಳನ್ನು ವೆಚ್ಚಮಾಡಿರುವರು.

ಈ ಸಂಸ್ಥೆಗೆ ಪ್ರತಿರಾಷ್ಟ್ರಗಳಿಂದ ತಮ್ಮ ತಮ್ಮ ಸುಶಿಕ್ಷಿತ ವಿದ್ಯಾರ್ಥಿಗಳನ್ನು ಕಳುಹಿಸಲು ಅನೇಕ ಅರ್ಜಿಗಳು ಬರಹತ್ತಿವೆ. ಕೆಲವರು ಈ ಸಂಸ್ಥೆಯಲ್ಲಿ ವಿದ್ಯಾರ್ಜನೆಯನ್ನು ಆರಂಭಿಸಿರುವರು.

ಇಲ್ಲಿ ಬಹಳ ಕಾರ್ಯವು ಜರುಗುತ್ತಲಿದೆ. ಇದರ ಕ್ಷೇತ್ರವಾದರೂ ಬಲು ವಿಸ್ತೃತವಾಗತೊಡಗಿದೆ. ಆದ್ದರಿಂದ ಗಂಗಾನದೀತೀರದಲ್ಲಿರುವ ಸೈಜ್ಞೀರಿಯಾ ಎಂಬಲ್ಲಿ ಇದರದೊಂದು ಉಪಶಾಖೆಯು ಉಗಮವಾಗಿದ್ದು, ಅದರಲ್ಲಿ ಬೇಸಾಯದ ಸಂಬಂಧಿಕ ಎಲ್ಲ ಸಂಶೋಧನ ಕ್ರಿಯೆಯು ಒಳ್ಳೇ ಜೋರಾಗಿ ಸಾಗಿದೆ. ಈ ವಿಷಯದಲ್ಲಿ ಬಂಗಾಲ ಇಲಾಖೆಯ ಸರಕಾರದವರದು ಬಲು ಅಭಿರುಚಿಯು.

ಯುರೋಪದ ವಾತಾವರಣದಲ್ಲಿ ಬೆಳೆಯುವ ಪದಾರ್ಥಗಳ ಸಂಶೋಧನ ಕ್ರಿಯೆಯು ನಡೆಯಬೇಕೆಂದು ಅನೇಕರು ಆಗ್ರಹತೊಟ್ಟಿರುವರು. ಆದ್ದರಿಂದ ದಾರ್ಜಲಿಂಗದಲ್ಲಿ ಈ ಕಾರ್ಯವು ಆರಂಭಿಸಲ್ಪಟ್ಟಿದ್ದೆ, ಮಾಯಾಪುರದ ರಸಾಯನ ಶಾಲೆಯಲ್ಲಿಯಾದರೂ ಈ ಪ್ರಗತಿಯೇ ಆಗತಕ್ಕದ್ದದೆ. ಈ ಶಾಲೆಗಳು ಪರ್ವತದ ಬಹು ಉನ್ನತವಾದ ಪ್ರದೇಶದಲ್ಲಿ ನಿಂತಿದ್ದು, ಬಹು ಶೋಭಾಯಮಾನವಾಗಿರುವವು. ಅಲ್ಲಲ್ಲಿಗೆ ಅನೇಕ ಕೃತ್ರಿಮ ತೋಟಿಗಳೂ ಕಲ್ಪಿಸಲ್ಪಟ್ಟವೆ. ಇಲ್ಲಿ ಸೇಕೀಮ, ತಿಬೇಟ ಮೊದಲಾದ ಪ್ರದೇಶಗಳಲ್ಲಿ ಬೆಳೆಯುವ ವನಸ್ಪತಿಗಳ ಸಂಗ್ರಹವೂ ಮಾಡಲ್ಪಟ್ಟದೆ ತರತರದ ಕಾಡು ಪುಷ್ಪಗಳನ್ನಾದರೂ ಬಲು ಪ್ರೀತಿಯಿಂದ ಇಲ್ಲಿ ಬೆಳಸುತ್ತಾರೆ. ದಾರ್ಜಲಿಂಗವಾದರೂ ಅಲ್ಪಾವಧಿಯಲ್ಲಿ ಬಲು ಪ್ರಸಿದ್ಧಿಯನ್ನು ಹೊಂದುವದೆನ್ನುವದರಲ್ಲಿ ತಿಲಾಂಶವಾದರೂ ಸಂದೇಹವಿರುವದಿಲ್ಲ. ಇಲ್ಲಿಯ ವನಸಿರಿಯನ್ನು ಎಷ್ಟೆಂದು ಬಣ್ಣಿಸಲು ಸಾಧ್ಯವು ? 'ಇದು ನಿಸರ್ಗದೇವಿಯ ವಿಹಾರಮಂದಿರವೋ, ಇಂದ್ರನ ನಂದನವನವೋ, ಆವದೋ' ನಮಗೆ ಭಾಸವಾಗದು.

# ಷಷ್ಠವು ದಲವು.

೬

## ಜೀವಿತ ರಹಸ್ಯವು.

ಜಗದೀಶಚಂದ್ರರು ಕೇವಲ ಮಹಾಶಾಸ್ತ್ರಜ್ಞರೆಂದು ಯಾರೂ ಊಹಿಸಲವಶ್ಯವಿಲ್ಲ. ಇವರು ಅನೇಕ ವಿಷಯುಗಳಲ್ಲಿ ಮನಸ್ಸು ಹಾಕಿ ವಿವಿಧಜ್ಞಾನವನ್ನು ಸಂಪಾದಿಸಿರುವರು. ಇವರು ಯಾವಾಗಲೂ ಸ್ಪಷ್ಟರೀತಿಯಿಂದ ಮಾತನಾಡುವರು. ವಾಕ್ಸರಣೆಯಾದರೂ ಜನತೆಯಲ್ಲಿ ನವಚೈತನ್ಯವನ್ನು ಹರಡಲು ಸಮರ್ಥವಾದಂಥದು. ಅರ್ಥಗರ್ಭಿತವಾದ ಇವರ ವಿಚಾರಗಳು ಜನರ ಸಕಲ ಸಂದೇಹಗಳನ್ನು ಹೋಗಲಾಡಿಸಿ, ನಿಜವಾದ ಜ್ಞಾನವನ್ನು ಮಾಡಿಕೊಡಬಲ್ಲವು. ನಿಜತ್ವವನ್ನು ಅರಿತದ್ದರಿಂದಲೇ ಇವರು ತಮ್ಮ ಹೃದಯುವನ್ನು ಬಿಚ್ಚಿ ಜನರಿಗೆ ಪ್ರತ್ಯಯವನ್ನು ಮಾಡಿಕೊಡಬಲ್ಲರು. ಇವರು ಯಾವಾಗಲೂ ಸದಯಾಂತಃಕರುಣೆಗಳೂ, ಕರ್ಣನಂತೆ ದಾನಶೂರರೂ ಇರುವರು. ಗುರುಶಿಷ್ಯರ ಭಾವನೆಯುಲ್ಲಿ ಇವರು ಚನ್ನಾಗಿ ನುರಿತಿರುವರು. ಗುರುಶಿಷ್ಯರ ಸಂಬಂಧವು ನಿರಂತರವಾದದ್ದು, ಎಂಬದೇ ಇವರ ಸಂಪೂರ್ಣವಾದ ತಿಳುವಳಿಕೆಯು "ಶಿಷ್ಯರು ಸರ್ವಸ್ವವನ್ನು ಗುರುವಿಗೆ ಅರ್ಪಿಸಿ ಶರಣುಹೋದರೆ, ಗುರುವು ತನ್ನಲ್ಲಿದ್ದ ಉಚ್ಚತಮವಾದ ವಿದ್ಯೆಯನ್ನು ಅವರಿಗೆ ಅರ್ಪಿಸಬೇಕು. ಇಲ್ಲವಾದರೆ ಕರ್ತವ್ಯಪರಾಂಙ್ಮುಖನೇ ಸರಿ," ಎಂಬದು ಇವರ ದೃಢವಾದ ಮತವಾಗಿದೆ. ಇವರು ವಿದ್ಯಾರ್ಥಿಗಳ ದೋಷಗಳನ್ನು ಪರರಿಗೆ ಹೇಳದೆ, ಅವರಲ್ಲಿದ್ದ ಗುಣಗಳನ್ನು ಬಯಲಿಗೆ ತಂದು, ಅವರನ್ನು ಹೆಚ್ಚು ಮುಂದಕ್ಕೆ ತರಲು ಹವಣಿಸುವರು. ಸುಲಭವಾದ ವಸ್ತುವನ್ನು ಶಿಷ್ಯರ ಮುಂದಿರಿಸದೆ, ದುರ್ಲಭವಾದವುಗಳನ್ನೇ ಅವರಿಗೆ ತಿಳಿಹೇಳಿ, ಅವುಗಳನ್ನೇ ಸುಗಮವಾಗಿ ಮಾಡುವರು. ಇವರ ವಿದ್ಯಾರ್ಥಿಗಳಲ್ಲನೇಕರು ಒಳ್ಳೇ ಘನತೆಗೆ ಏರಿದ್ದು, ಮಹತ್ವವಾದ ಕಾರ್ಯಗಳನ್ನು ಅನಾಯಾಸವಾಗಿ ಜರುಗಿಸುತ್ತಿರುವರು. ಇವರಲ್ಲಿ ಕೆಲವರು ಬಡವರನ್ನು ಕಷ್ಟದಿಂದ ಮುಕ್ತಮಾಡಿ, ಅವರ ಯೋಗಕ್ಷೇಮದಲ್ಲಿಯೇ ಯಾವಾಗಲೂ ಕಾಲ ಕಳೆಯುತ್ತಿರುವರು. ಇವರು ವಿದ್ಯಾರ್ಜನೆಯ ಕಾಲವಲ್ಲಿ ತಮ್ಮ ಗುರುಗಳಾದ ಜಗ

ದೀಶಚಂದ್ರರ ವಿಷಯಕ್ಕೆ ಒಳ್ಳೇ ಪೂಜ್ಯಭಾವನೆಯನ್ನು ತಳೆಯುತ್ತಿದ್ದರು. ನಿತ್ಯಶಃ ಗುರುಪಾದಸೇವೆಯು ಹೊರ್ತು ಇವರ ನಿತ್ಯನೈಮಿತ್ತಿಕ ಕರ್ಮಗಳು ಪೂರ್ತಿಗೊಳ್ಳುತ್ತಿರಲಿಲ್ಲ. ತಂದೆಯಂತೆ ಪರಿಪಾಲನ ಮಾಡುವ ಗುರುವನ್ನು ಇವರೆಲ್ಲರು ಸತ್ಕರಿಸುವದರಲ್ಲಿ ಏನಾಶ್ಚರ್ಯವು? ಇವರು ಮೂವತ್ತೈದು ವರ್ಷಗಳ ವರೆಗೆ ಪ್ರೆಸಿಡೆನ್ಸಿ ಕಾಲೇಜದಲ್ಲಿ ಪ್ರೊಫೇಸರರಾಗಿದ್ದರೂ, ಗುರುಶಿಷ್ಯರ ಪ್ರೇಮುಳ ಸ್ವಭಾವಕ್ಕೆ ಎಳ್ಳಷ್ಟಾದರೂ ಕುಂದುಕೊರತೆಯುಂಟಾಗಲಿಲ್ಲ. ವಿದ್ಯಾರ್ಥಿಗಳ ಕೂಡ ವಿದ್ಯಾರ್ಥಿಗಳಂತೆಯೇ ಆಚರಿಸಿದರೆ ಆ ತರದ ಪೂಜ್ಯಭಾವನೆಗೆ ವ್ಯತ್ಯಾಸವು ಬರುವದಾದರೂ ಎಂತು ?

ಇವರು ನಿಸ್ಪೃಹಿಗಳೂ ನಿರಹಂಕಾರಿಗಳೂ ಇದ್ದು ನಿಜವಾದ ಸಂಗತಿಯನ್ನು ಬಯಲಿಗಿಡಲು ಎಂದಿಗೂ ಅಂಜರು. ಸರಕಾರದವರು ಇವರಿಗೆ ಎಷ್ಟೋ ಸಹಾಯವನ್ನು ಮಾಡಿದ್ದರೂ ಕೂಡ ಅವರ ದೋಷವನ್ನು ಅವರಿಗೇನೇ ಹೇಳಲು ಇವರು ಹಿಂಜರಿಯಲಿಲ್ಲ. ಇವರು ಒಂದು ಸಂದರ್ಭದಲ್ಲಿ ಅಂದದ್ದೇನಂದರೆ:— "ದೊಡ್ಡ ದೊಡ್ಡ ಸರಕಾರಿಯ ನೌಕರಿಯಲ್ಲಿ ನಮ್ಮ ಹಿಂದೂ ಜನರಿಗೆ ಆಸ್ಪದವೇ ದೊರೆಯುವದಿಲ್ಲ ಇವರು ಎಷ್ಟೇ ದೊಡ್ಡ ದೊಡ್ಡ ಪರೀಕ್ಷೆಗಳನ್ನು ಕೊಟ್ಟರಲಿ, ಇವರಿಗೆ ಉಚ್ಚತರಗತಿಯ ನೌಕರಿಯು ದೊರೆಯದಿರುವದು ಕೇವಲ ಅನ್ಯಾಯವೇ ಸರಿ. ನಮ್ಮ ಹಿಂದುಗಳು ಕೆಲಸದಲ್ಲಿ ಬಹು ಚುರುಕುಬುದ್ಧಿಯವರೂ, ಪ್ರಾಮಾಣಿಕರೂ ಇರುವರು. ಇಂಥವರಿಗೂ ಕೂಡ ಉಚ್ಚತರದ ಹುದ್ದೆಗಳು ದೊರೆಯದಿದ್ದರೆ, ಜನತೆಯಲ್ಲಿ ಸರಕಾರದವರ ಒಗ್ಗೆ ಅಸಂತುಷ್ಟತೆಯು ಉತ್ಪನ್ನವಾಗುವವು. ಇದರ ಬಗ್ಗೆ ಯಾರೂ ಸಂದೇಹಪಡರು. "

ಇವರ ಸ್ವದೇಶಾಭಿಮಾನವಾದರೂ ಅಪ್ರತಿಮವಾಗಿರುವದು. ಇವರು ಭೂಮಂಡಲದಲ್ಲಿ ಅನೇಕ ಸಾರೆ ಪ್ರವಾಸಮಾಡಿದ್ದು, ಪ್ರತಿಯೊಂದು ಪ್ರಸಂಗದಲ್ಲಿಯೂ ಮಾತೃಭೂಮಿಯ ಹೆಸರನ್ನು ಸ್ಮರಿಸದೆ ಕಾರ್ಯಪ್ರವೃತ್ತರಾಗಲಿಲ್ಲ ನಮ್ಮ ಪೂರ್ವದ ವೈಭವವನ್ನು ನೋಡಿಕೊಂಡು ಆನಂದಪಡಲು ಇವರ ಇಷ್ಟವಿಲ್ಲ. ನಮ್ಮ ಪೂರ್ವಜರಂತೆ ಸ್ವಕರ್ತವ್ಯತತ್ಪರರಾಗಿ ಬುದ್ಧಿಬಲದಿಂದಾಗಲಿ, ಆಧ್ಯಾತ್ಮತೇಜದಿಂದಲಾಗಲಿ, ಅವರ ನಿಜವಾದ ಮಕ್ಕಳಂತೆ ಇರಲು ಇವರಿಗೆ ಬಲು ಆಸ್ಥೆಯು. ಮುತ್ತಾತರು ಗಳಿಸಿಟ್ಟ ಜ್ಞಾನದ್ರವ್ಯದಿಂದ ಸಂತುಷ್ಟರಾಗಿ ಕುಳಿತುಕೊಳ್ಳದೆ, ಅದನ್ನು ಯಾವಾಗಲೂ ವೃದ್ಧಿಗೊಳಸುತ್ತಿರಬೇಕು. ಈ ಜ್ಞಾನಾಗ್ನಿಗೆ ದಹ್ಯ ಪದಾರ್ಥ

ಗಳನ್ನು ಮೇಲಿಂದ ಮೇಲೆ ಹಾಕದಿದ್ದರೆ ಅದರ ಜ್ವಲನಶಕ್ತಿಯು ಕುಗ್ಗಲಾರದೇ? "ಸಾಂಪ್ರತಕಾಲದಲ್ಲಿ ವಿದ್ಯೆಯೇ ಪ್ರಾಧಾನ್ಯ ಶಕ್ತಿಯು. ಇದರ ಆರಾಧನೆಯು ಹೊರ್ತು ನಮಗೆ ಗತ್ಯಂತರವಿಲ್ಲ. ಇದನ್ನು ಕಾಯುವದರಿಂದಲೇ ನಮ್ಮ ಸ್ವಾಭಿಮಾನವು; ಅತಃ ದೇಶದ ಗೌರವವು; ಇದೇ ನಿಜವಾದ ಸ್ವದೇಶಾಭಿಮಾನವು," ಎಂದು ಇವರು ಬಹಳ ಸಾರೆ ಉದ್ಗಾರಗಳನ್ನು ತೆಗೆದಿರುವರು.

---

## ಸಪ್ತಮ ದಲವು

## ೭.

## ಭಾಷಣಗಳ ಅವತರಣಿಕೆಗಳು.

---

"They live who give."

"ಸೃಷ್ಟಿಯಲ್ಲಿ ಒಂದು ವಸ್ತುವು ಬೆಳೆಯಬೇಕಾದರೆ ಅದು ತನ್ನಲ್ಲಿದ್ದ ಗುಣಗಳ ಉಪಯೋಗವನ್ನು ಪರರಿಗೆ ಮಾಡಿಟ್ಟು ಇತರ ವಸ್ತುಗಳ ಗುಣಗಳ ಉಪಯೋಗವನ್ನು ತಾನು ಮಾಡಿಕೊಳ್ಳಬೇಕಾಗುವದು. ತನ್ನಲ್ಲಿದ್ದ ಫಲವನ್ನು ಪರರಿಗೆ ಕೊಟ್ಟು ಅವರ ಫಲವನ್ನು ತಾನು ಹೊಂದಲೇಬೇಕು. ಉದಾಹರಣಾರ್ಥವಾಗಿ, ನಾವು ಒಂದು ಗಿಡವನ್ನು ನಿರೀಕ್ಷಿಸುವಾ. ಇದನ್ನು ಪರರು ನೀರು—ಗೊಬ್ಬರ ಮೊದಲಾದವುಗಳನ್ನು ಹಾಕಿ ಸಂರಕ್ಷಿಸಿದರೆ ಮಾತ್ರ ಫಲಪುಷ್ಪಾದಿಗಳನ್ನು ಕೊಡುವದು. ಮನುಷ್ಯನು ಹಾಗೆ ಮಾಡದಿದ್ದ ಪಕ್ಷದಲ್ಲಿ ಸುಫಲತೆಯು ಅದಕ್ಕೆ ಪ್ರಾಪ್ತವಾಗುತ್ತಿರಲಿಲ್ಲ. ಮನುಷ್ಯರು ಇದಕ್ಕೆ ನೀರು ಹಾಕಿದರೂ ಗಿಡವು ಹಣ್ಣು ಬಿಡದಿದ್ದರೆ ಮನುಷ್ಯನು ಅದಕ್ಕೆ ಎಂದಾದರೂ ನೀರು ಎರೆಯುವನೇ? ಆಕಳವು ಹಾಲು ಕೊಡದಿದ್ದರೆ ಮನುಷ್ಯನು ಅದಕ್ಕೆ ಎಂದಾದರೂ ಹುಲ್ಲು—ಮೇವು ಹಾಕುವನೋ? ಸಂಕ್ಷೇಪತಃ ಮನುಷ್ಯನು ತನ್ನಲ್ಲಿದ್ದ ವಸ್ತುಗಳನ್ನು ಪರರಿಗೆ ಕೊಡದೆ ತನ್ನಲ್ಲಿಯೇ ಹೂಳಿಟ್ಟು

ಕೊಂಡರೆ, ಅವನು ಬಹಳ ದಿವಸ ಬಾಳುವೆಯನ್ನು ಮಾಡಲಾರನು. ಯಾರು ಪರರಿಗೆ ಯಾವಾಗಲೂ ಸಹಾಯವನ್ನು ಮಾಡುತ್ತಾರೆಯೋ ಅವರೇ ಈ ಜಗತ್ತಿನಲ್ಲಿ ಜೀವಿಸತಕ್ಕವರು. ಇದೇ ಸೃಷ್ಟಿಯ ನಿಯಮವನ್ನದರೂ ರಾಷ್ಟ್ರೀಯ ಪ್ರಗತಿಯು ಅವಲಂಬಿಸಿರುತ್ತದೆ. ಪರರಾಷ್ಟ್ರಗಳ ಕೂಡ ಸಖ್ಯವನ್ನು ಬೆಳಿಸಿ, ಅವುಗಳಲ್ಲಿದ್ದ ಗುಣಗಳ ಉಪಯೋಗವನ್ನು ತಾನು ಮಾಡಿಕೊಂಡು ತನ್ನಲ್ಲಿದ್ದವುಗಳನ್ನು ಅವುಗಳಿಗೆ ಮುಕ್ತಹಸ್ತದಿಂದ ದಾನಮಾಡಲೇಬೇಕು. ಅಥವಾ ವೈಸೊಕ್ಕಿನಿಂದ ಅವುಗಳ ಕೂಡಾ ಬಳಿಕೆಯನ್ನು ಮಾಡದಲೇ ದೂರವಾಗಿ ಇದ್ದುಕೊಂಡರೆ ಅದರ ನಾಶವಾಗವದರೆಂಬಲ್ಲಿ ತಿಲಮಾತ್ರವಾದರೂ ಸಂದೇಹವಿಲ್ಲ. ಯಾಕಂದರೆ ಇದರಿಂದ ಮೇಲ್ಕಾಣಿಸಿದ ಸೃಷ್ಟಿಯ ನಿಯಮಕ್ಕೆ ವಿರೋಧವುಂಟಾಗುತ್ತದೆ. ಅದರಂತೆಯೇ ಒಂದು ವಿಶ್ವವಿದ್ಯಾಲಯವು ಪರರಾಷ್ಟ್ರೀಯ ತತ್ಸದೃಶ ಸಂಸ್ಥೆಗಳಿಂದ ಜರುಗಿದ ಅನೇಕ ಸುಧಾರಣೆಗಳನ್ನು ತನ್ನಲ್ಲಿ ಸೇರ್ಪಡಿಸಿಕೊಂಡು, ಪ್ರತಿಯಾಗಿ ಅವುಗಳಿಗೆ ಏನನ್ನೂ ಕೊಡದೆ ಇದ್ದ ಪಕ್ಷದಲ್ಲಿ ಇದರ ನಾಶವಾದರೂ ಸಮೀಪಿಸಿತೆಂದು ತಿಳಿಯತಕ್ಕದ್ದು.

ಸಾಂಪ್ರತಕ್ಕೆ ನಮ್ಮ ದೇಶದ ಸ್ಥಿತಿಯಾದರೂ ದಿನೇ ದಿನೇ ಬಹು ಹೀನವಾಗತೊಡಗಿದೆ. ಇದಕ್ಕೆ ಕಾರಣವಾದರೂ ಆವದು ? ನಮ್ಮ ಭೂಮಿಯು ಕಳೆದ ಕೆಲವು ಶತಮಾನಗಳಿಂದ ಕೇವಲ ಪರರ ಪೋಷಣೆಯಿಂದ ಬದುಕಿರುವದು. ವಿಶಿಷ್ಟವಾದ ತನ್ನ ಗುಣಗಳನ್ನೆಲ್ಲ ಮರೆತುಕೊಟ್ಟು, ಪರರಾಷ್ಟ್ರಗಳಿಗೆ ಪ್ರತಿಯಾಗಿ ಏನನ್ನೂ ಕೊಡದೆ ಇದ್ದದ್ದರ ಕಟುಫಲವೇ ನಮ್ಮ ಸದ್ಯದ ದುಃಸ್ಥಿತಿಯು ನಿಜವಾದ ಕಾರಣವು. ಇದರ ಪ್ರಾಬಲ್ಯವೇ ದೇಶದ ಪ್ರತಿಯೊಂದು ಅಂಗಾಂಗದಲ್ಲಿಯೂ ಸೇರಿಕೊಂಡಿದೆ. ನಮ್ಮ ವಿಶ್ವವಿದ್ಯಾಲಯಗಳು ಪರರಾಷ್ಟ್ರೀಯ ಶಿಕ್ಷಣ ಪದ್ಧತಿಯನ್ನು ಅನುಕ್ರಮಿಸುತ್ತಿದ್ದು, ಹೊಸ ಹೊಸ ಶೋಧಗಳನ್ನು ಕಂಡುಹಿಡಿದು ಜಗತ್ತಿನ ವಿದ್ಯೆಯ ಭಾಂಡಾರಕ್ಕೆ ಇದುವರೆಗೆ ಕೊಂಚು ಕೂಡಾ ಭರತಿಯನ್ನು ಹಾಕಲಿಲ್ಲ. ಇದರಿಂದಲೇ ಇವುಗಳ ಲಾಘವವು ನಿತ್ಯಶಃ ಜಗತ್ತಿನ ದೃಷ್ಟಿಯಿಂದ ಹೆಚ್ಚುತ್ತಲಿದೆ. ಇದನ್ನು ಹೋಗಲಾಡಿಸುವ ಬಗೆಯಾದರೂ ಎಂತು ?

ನಮ್ಮ ಪೂರ್ವದ ದಿವ್ಯ ಗೌರವವನ್ನು ದೊರಕಿಸಲು ನಾವು ನಮ್ಮಲ್ಲಿ ಅನೇಕ ಹೊಸ ಹೊಸ ಸಂಗತಿಗಳನ್ನು ಗೊತ್ತುಹಚ್ಚಬೇಕು. ಇವುಗಳನ್ನು ಸಾಧಿಸಲು ಒಳ್ಳೇ ವಿಚಾರಶಕ್ತಿಯು ಅವಶ್ಯವುಂಟು. ಇದಲ್ಲದೆ ದೀರ್ಘ ಸಾಹಸವೂ, ನಿಸ್ವಾರ್ಥಬುದ್ಧಿಯೂ ಬೇಕಲೇಬೇಕು. ಈ ಕಾರ್ಯವನ್ನು ಕೈಕೊ

ಫಲಿಚ್ಛಿಸುವ ಪ್ರತಿಯೊಬ್ಬ ಮನುಷ್ಯನು ತನ್ನ ಸೌಖ್ಯಕ್ಕೆ ತಿಲಾಂಜಲಿಯನ್ನಿತ್ತು ಆತ್ಮಾರ್ಪಣೆಯನ್ನಾದರೂ ಒಂದು ವೇಳೆ ಮಾಡಬೇಕಾಗುವದು. ಇದರಲ್ಲಿ ಅವನು ನಿರಂತರವಾಗಿ ಕಷ್ಟವನ್ನು ಅನುಭವಿಸಬೇಕಾಗುವದು. ಇಷ್ಟಾದರೂ ಜಯವು ದೊರೆಯುವದೆಂದರೆ ಕೊಂಚು ದುರ್ಲಭವೇ ಸರಿ. ಕೆಲವು ಶಾಸ್ತ್ರೀಯ ಮಹಾ ಶೋಧಕರು ತಮ್ಮ ಈ ಮರ್ತ್ಯ ದೇಹಗಳನ್ನು ಬಿಟ್ಟುಕೊಟ್ಟು, ಕೀರ್ತಿಶೇಷರಾಗಿ ತಾವು ಕಂಡುಹಿಡಿದ ಶೋಧಗಳ ಅಪೂರ್ವಲಾಭವನ್ನು ಎಷ್ಟೋ ದಿನಗಳ ಮೇಲೆ ಆಸ್ವಾದಿಸುತ್ತಿದ್ದನ್ನು ನಾವು ಹೇರಳವಾಗಿ ನೋಡಬಹುದು. ಇಂಥ ದೀರ್ಘ ಪ್ರಯತ್ನವನ್ನು ಮಾಡುವ ಮಹನೀಯರಾದರೂ ಎಷ್ಟು ದೊರೆಯಬಹುದು? ಇವರ ಮನಸ್ಸು ಏಕಾಗ್ರವಾಗಿ ಒಂದೇ ವಸ್ತುವಿನ ಮೇಲೆ ತಲ್ಲೀನವಾಗಬೇಕು. ಇಲ್ಲವಾದರೆ ಬಾಹ್ಯ ಉಪಕರಣ ಸಂಗ್ರಹವು, ಎಷ್ಟೇ ದೊಡ್ಡದಿರದೊಲ್ಲದೇಕೆ, ಅದೆಲ್ಲವು ನಿಷ್ಫಲವೇ ಸರಿ. ಮನವನ್ನು ಅತ್ತಿತ್ತ ಹರಿಬಿಟ್ಟು, ಕೀರ್ತಿಗಾಗಿ ಕೆಲಸ ಮಾಡುವವರ ಕೈಯಿಂದ ಏನೂ ಸಾಧ್ಯವಾಗದು. ಅನಂತವಾದ ವಿದ್ಯಾಸಾಗರದಲ್ಲಿ ಮುಳುಗಿ ಅದರೊಳಗಿನ ಮುತ್ತುಗಳನ್ನು ಆರಿಸುವ ಗಟ್ಟಿಗನಾದ ಬಂಟನಿಗೆ ಕೀರ್ತಿ ಮೊದಲಾದ ಐಹಿಕ ದುರ್ಲಕ್ಷ್ಯ ವಸ್ತುಗಳು ಎಂದಾದರೂ ಮೋಹಕರವಾಗಿ ಕಂಗೊಳಿಸುವವೋ? ಇರಿವೆಯು ಸಕ್ಕರಿಯ ಗುಡ್ಡವನ್ನು ಗೊತ್ತುಹಚ್ಚಿದ ಮೇಲೆ ಅಲ್ಲಿಯೇ ಅದರ ಸಮಾಧಿಯಾಗುವದು. ಅದು ಎಂದಾದರೂ ಬಾಹ್ಯ ವಸ್ತುಗಳಿಗೆ ಮರಳುಗೊಂಡು ಮನಸೋತುಕೊಳ್ಳಲು ಸಂಭವವೇ?"
(ಮಾರ್ಚ ೧೯೧೬)

## ವಿದ್ಯಾರ್ಥಿಗಳಿಗೆ ಉಪದೇಶ.

[ಜಗದೀಶ ಚಂದ್ರರವರಿಗೆ ಸರದಾರ ಪದವಿಯನ್ನು ಕೊಟ್ಟಿದ್ದರಷ್ಟೇ? ಕಾಲೇಜದ ವಿದ್ಯಾರ್ಥಿಗಳು ಇವರನ್ನು ಆ ಸಮಯದಲ್ಲಿ ಗೌರವಿಸಿದ ಕಾಲಕ್ಕೆ ಇವರು ಮಾಡಿದ ಭಾಷಣದ ಸಾರವು ೨೫ನೇ ಫೆಬ್ರುವರಿ ೧೯೧೭]

"ಪ್ರಿಯ ವಿದ್ಯಾರ್ಥಿ ಬಂಧುಗಳೇ, ಈ ಗೌರವಕ್ಕೋಸ್ಕರ ನನ್ನನ್ನು ಅಭಿನಂದಿಸುವ ಕಾಲಕ್ಕೆ ಹೋದ ವರ್ಷ ನನಗೆ ದೊರೆತ ಬಹು ದೊಡ್ಡ ಸನ್ಮಾನವನ್ನು

ತಾವುಗಳು ಮರೆತಂತೆ ತೋರುತ್ತದೆ. ಹೋದ ವರ್ಷ ತಮ್ಮಗಳಿಗೆಲ್ಲ ತಿಳಿದು ಬಂದಂತೆ ನನ್ನನ್ನು ಸರಕಾರದವರು ತಮ್ಮಗಳ ನಿರಂತರನಾದ ಅಧ್ಯಾಪಕನನ್ನಾಗಿ ಮಾಡಿದರಲ್ಲವೇ? ಇದರಿಂದ ನಮ್ಮ ಪ್ರೇಮಶೃಂಖಲೆಗಳು ಮತ್ತಿಷ್ಟು ಗಟ್ಟಿಯಾಗ ಲಿಲ್ಲವೇ? ಕಳೆದ ಮೂವತ್ತು ವರ್ಷಗಳಿಂದ ನಾನು ತಮ್ಮಗಳ ಗುರುವಾಗಿ ಪರಿಣ ಮಿಸಬೇಕೆಂದು ಹವಣಿಸಿದ್ದೆನು. ಅದರಂತೆಯೇ ಸಂಭವಿಸಿ ತಾವುಗಳು ತಮ್ಮ ಸರ್ವಸ್ವವನ್ನೇ ನನಗೆ ಅರ್ಪಿಸಿದ ಮೇಲೆ, ನನ್ನಲ್ಲಿದ್ದ ಹೃದಯಾಂತರ್ಗತ ವಿದ್ಯೆ ಯನ್ನು ತಮ್ಮಗಳಿಗೆ ದಯಪಾಲಿಸಬೇಕಾಯಿತು. ಯಾವಾಗಲೂ ನಿಮ್ಮಲ್ಲಿ ನೆಲೆ ಗೊಂಡ ಶಕ್ತಿಗೆನೇ ನಾನು ಪುಟ ಕೊಡುತ್ತಿದ್ದೆನೇ ಹೊರ್ತು ನಿಮ್ಮಲ್ಲಿಯ ಕೊಂಕು ಗಳನ್ನು ಲಕ್ಷ್ಯಕ್ಕೆ ತರಲೇ ಇಲ್ಲ. ಸುಲಭವಾದ ವಸ್ತುವನ್ನು ತಮ್ಮ ಮುಂದೆ ಇಡದೆ ದುರ್ಲಭವಾದದ್ದನ್ನೇ ತಮ್ಮ ಮುಂದಕ್ಕಿರಿಸುತ್ತಿದ್ದೆನು. ಈ ಅವಿಶ್ರಾಂತ ಶ್ರಮದ ಫಲಕ್ಕೆ ಒಳ್ಳೇ ಘನತೆಗೇರಿದ ನನ್ನ ವಿದ್ಯಾರ್ಥಿಗಳೇ ಸಾಕ್ಷಿಗಳು.

ನೀವು ಈ ಜಗತ್ತಿನಲ್ಲಿ ಮೂರು ತರದ ಕರ್ತವ್ಯಕರ್ಮಗಳನ್ನು ನೆರವೇರಿಸ ಬೇಕಾಗುತ್ತದೆ. ಅವುಗಳಲ್ಲಿ ಮೊದಲನೇದು, ತನ್ನ ಸ್ವಂತ ಆತ್ಮದ ಸಲುವಾಗಿ; ಎರ ಡನೇದು, ರಾಜನ ಸಲುವಾಗಿ; ಮೂರನೇದು ಸ್ವರಾಷ್ಟ್ರಕ್ಶ್ರೇಯಸ್ಕರ. ಇವುಗಳಲ್ಲಿ ಒಂದೊಂದು ವಿಚಾರಿಸುವಾ – ಸ್ವಾತ್ಮದ ಸಲುವಾಗಿ ನೀವುಗಳು ಯಾವಾಗಲೂ ಪ್ರಾಮಾಣಿಕರಿದ್ದು ಧರ್ಮನಿರತರಾಗಿರಬೇಕು. ಆಡಿದಂತೆ ನಡೆಯುಳ್ಳವರಾಗಿರ ಬೇಕು. ಒಳಗೊಂದು, ಹೊರಗೊಂದು ಹೀಗೆ ದ್ವಿವಿಧವಾಗಿ ಆಚರಿಸ ಬೇಡಿರಿ. ನಿಮ್ಮ ಸದಸದ್ವಿವೇಕಬುದ್ಧಿಗೆ ನಿಜವಾಗಿ ತೋರಿದ್ದನ್ನು ನಿರ್ಭಯದಿಂದ ಸಾರಿರಿ. ಒಣ ಮಾತಿನಲ್ಲಿ ದೇವರು ದಯಪಾಲಿಸಿದ ಶಕ್ತಿಯನ್ನು ಹಾಳು ಮಾಡಿದರೆ, ಕಾರ್ಯ ವನ್ನು ಮಾಡಲು ನಿಮ್ಮಲ್ಲಿ ಶಕ್ತಿಯೇ ಉಳಿಯಲಾರದು. ಆದ್ದರಿಂದ ನಿತ್ಯದಲ್ಲಿಯೂ ಕಾರ್ಯಪ್ರವೃತ್ತರಾಗಿರಿ. ಎರಡನೇದಂದರೆ, ನಮ್ಮ ರಾಜನ ಬಗ್ಗೆ ವೇದಕಾಲದಿಂದ ಲೂ ರಾಜನ ಬಗ್ಗೆ ನಮ್ಮ ಪೂರ್ವಜರದು ಬಲು ಪೂಜ್ಯಬುದ್ಧಿಯು. ಅವರಾಗಿಯೇ ಅವನನ್ನು ಅನೇಕರೊಳಗಿಂದ ಆರಿಸುತ್ತಿದ್ದರಿಂದ ಅವನೇ 'ಅರಸು' ಆಗುತ್ತಿದ್ದ ನು. ಎಲ್ಲರೂ ಅವನ ಹಿತಚಿಂತನಗೈಯುತ್ತಿದ್ದರು. 'ಪರ್ವತದಂತೆ ಅಚಲವಾದ ಧರ್ಮಶೀಲತೆಯೂ, ನ್ಯಾಯಬುದ್ಧಿಯೂ ಉಂಟಾಗಲೆಂದು' ಅವನನ್ನು ಅವರೂ ಯಾವಾಗಲೂ ಹರಿಸುತ್ತಿದ್ದರು. ಈ ವೇಳೆಗೆ ಜನತೆಯ ಬಲವಾದ ಹೃನ್ಮಂದಿರ ದಲ್ಲಿ ಒಮ್ಮೆ ರಾಜರು ಪ್ರವೇಶಿಸಿದರೆಂದರೆ, ಅವರು ಅಜಯ್ಯರೇ ಸರಿ. ಇಂಥವರಿಗೆ

ಅವರು ತಮ್ಮ ಸಾಂಪತ್ತಿಕ ಉತ್ಪನ್ನದ ಕೆಲವು ಭಾಗವನ್ನು ಸ್ವಸಂತೋಷದಿಂದ ಕೊಡತ್ತಿದ್ದರಲ್ಲದೆ ತಾವು ಸಂಚಿಸಿದ ತಪೋನಿಧಿಯ ಅಷ್ಟಮಾಂಶವನ್ನೂ ಕೂಡ ಸಲ್ಲಿಸುತ್ತಿರಲಿಲ್ಲವೇ? ಇವುಗಳಲ್ಲಿ ಪ್ರಜೆಗಳು ಕೊಟ್ಟ ಹಣದಿಂದ ರಾಜರುಗಳು ಅಜಯ್ಯರಾಗುತ್ತಿದ್ದರೋ, ಅಥವಾ ಅವರು ದಯಪಾಲಿಸಿದ ತಪಃಪ್ರಭಾವದಿಂದ ದುರ್ಜಯರಾಗುತ್ತಿದ್ದರೋ ಎಂಬದನ್ನು ಇನ್ನು ವಿಚಾರಿಸುವಾ— ಧನವು ನಶ್ವರವಾದ ಪದಾರ್ಥವು. ಈ ಜಗತ್ತಿನಲ್ಲಿಯೇ ಅದರ ಅಂತವು. ಆದರೆ ಆಧ್ಯಾತ್ಮಿಕ ತೇಜವು ಬೇರೆ. ಅದು ಇಹಪರಗಳಲ್ಲಿಯೂ ಅಚ್ಯುತವು. ಆದ್ದರಿಂದ ಸಾಂಪ್ರತಕಾಲದ ರಾಜರುಗಳನ್ನು ನಾವುಗಳು ನಮ್ಮ ಆಧ್ಯಾತ್ಮಿಕ ತೇಜದಿಂದ ಬೆಳಗಬೇಕೇ ಹೊರ್ತು ಕನಕ ಪ್ರಭೆಯಿಂದ ಎಂದೂ ಹಾಗೆ ಮಾಡಕೂಡದು. ರಾಷ್ಟ್ರಕ್ಕೋಸ್ಕರ ನಾವು ಮಾಡತಕ್ಕದ್ದೇನೆಂದರೆ, ಸ್ವಭೂಮಿಯ ಗೌರವವನ್ನೂ ಸುಖಶಾಂತಿಯನ್ನೂ ಎಲ್ಲ ತರದಿಂದಲೂ ಕಾಯತಕ್ಕದ್ದು. ಪೂರ್ವಕಾಲದಿಂದ ನಮ್ಮ ರಾಷ್ಟ್ರವು ಅತಿಥಿ ಸತ್ಕ್ರಿಯೆಯಲ್ಲಿ ಅದ್ವಿತೀಯವಿದ್ದಾಗ್ಯಾದರೂ ಕೂಡ, ಈಗ ಮಾತ್ರ ಅವಳಿಗೆ ಪರರಾಷ್ಟ್ರಗಳಲ್ಲಿ ಈಗಿನ ರಾಜನಾಥಳಿತದಲ್ಲಿ ಲವಲೇಶವಾದರೂ ಮಾನಮರ್ಯಾದೆಯು ಇಲ್ಲವೇ ಇಲ್ಲ. ಈ ವೃಶ ಲಾಘವವನ್ನು ಹೋಗಲಾಡಿಸುವದೇ ನಮ್ಮ ಮಾತೆಯ ಗತಮಾನವನ್ನು ಕಾಯ್ದುಕೊಂಡಂತಾಗುವದು. ಇದಕ್ಕೋಸ್ಕರವೇ ಮಹಾತ್ಮಾ ಗಾಂಧಿಯವರು ಪುತ್ರ ಮಿತ್ರ ಕಲತ್ರರಿಂದ ಒಡಗೂಡಿ ದಕ್ಷಿಣ ಆಫ್ರಿಕೆಯಲ್ಲಿ ಅನಂತಯಾತನೆಗಳನ್ನು ಸಹಿಸಿ, ಮಾತೆಯ ಉದ್ಧಾರವನ್ನು ಮಾಡಲು ಹೆಣಗಲಿಲ್ಲವೇ? ಈ ಕಾರ್ಯಕ್ಕೆ ಪರಪಂಗಡದವರಾದ ಪೋಲಕ, ಆಂಡ್ರೂಜ ಮೊದಲಾದವರುಗಳು ಮಹಾತ್ಮರಿಗೆ ನೆರವಾಗಲಿಲ್ಲವೇ? ಇನ್ನು, ಸುಖಶಾಂತಿಗಳನ್ನು ವಿಚಾರಿಸುವಾ.—ಇದು ವರೆಗೆ ನಾವು ಪರರ ಮೇಲೆ ಅವಲಂಬಿಸಿ ನಮ್ಮ ಸುಖವನ್ನು ಹೆಚ್ಚಿಸಿಕೊಂಡೆವು. ಇನ್ನು ಮೇಲಾದರೂ ನಾವು ನಮ್ಮ ಸ್ವಂತ ಶೌರ್ಯದ ಮೇಲೆ ಅವಲಂಬಿಸಿ ಕೂಡ್ರಬೇಕಾಗುವದು. ಸಾಂಪ್ರತಕ್ಕೆ ಈ ಅಖಿಲ ಭೂಮಂಡಲದಲ್ಲಿ ಅಶಾಂತತೆಯ ದವಾಗ್ನಿಯ ಜ್ವಾಲೆಗಳು ಏಳತೊಡಗಿವೆ. ಅದಕ್ಕೆ ನಮ್ಮ ರಾಷ್ಟ್ರವಾದರೂ ಆಹುತಿಯಾಗತಕ್ಕದ್ದದೆ. " प्रोद्दीप्ते भवने तु कूपखनन प्रत्युद्यमः कीदृशः । ? " " ಗಡ್ಡಕ್ಕೆ ಬೆಂಕಿ ಹತ್ತಿದಾಗ ಬಾವೀ ತೋಡಿದಂತೆ " ನಮ್ಮ ಅವಸ್ಥೆಯಾಗಬಾರದು. ಆದ್ದರಿಂದ ತೀವ್ರವೇ ನಾವೆಲ್ಲರು ಚೇತರಿಸಿಕೊಂಡು, ನಮ್ಮ ರಾಷ್ಟ್ರಬಂಧುಗಳನ್ನಾದರೂ ಗಾಢನಿದ್ರೆಯಿಂದ ಹೊಡೆದೆಬ್ಬಿಸಿ ಸಜ್ಜುಗೊಳಿಸಬೇಕು. ಅವರು ಎಂದಾದರೂ ತಮ್ಮ

ಕೈಲಾದಮಟ್ಟಿಗೆ ನೆರವಾಗಲಾರರೆಂಬ ಭ್ರಾಮಕ ಕಲ್ಪನೆಯನ್ನು ನೀವು ನಿಮ್ಮ ತಲೆಯೊಳಗಿಂದ ಹೊರದೂಡಿಸಬೇಕು. ಈ ಮಾತಿನ ಸತ್ಯತೆಯು ಬಗ್ಗೆ ನಮ್ಮಿತಿಹಾಸದಲ್ಲಿ ಧಾರಾಳವಾಗಿ ಉದಾಹರಣೆಗಳು ದೊರೆಯುವವೆಂದರೆ ಪ್ರತ್ಯವಾಯವಿಲ್ಲ."

## ಪಿತೃಭಕ್ತಿಯು

"ನನ್ನ ತಂದೆಯಾದ ಭಗವಾನ್‌ಚಂದ್ರ ಬೋಸರು ಮೊದಲಿನಿಂದಲೂ ಉದ್ಯೋಗಪ್ರಿಯರೂ, ಸ್ವದೇಶಾಭಿಮಾನಿಗಳೂ ಆಗಿ ಪರಿಶೋಭಿಸುವರು. ಇವರು ಜನರ ಹಿತದ ಸಲುವಾಗಿ ಯಾವಾಗಲೂ ಚಿಂತಿಸುತ್ತಿದ್ದರು. ಅಲ್ಲಲ್ಲಿಗೆ ಚಿಕ್ಕಮಕ್ಕಳಿಗೋಸ್ಕರ ಔದ್ಯೋಗಿಕ ಶಾಲೆಗಳನ್ನು ಸ್ಥಾಪಿಸಿದರು. ಸ್ತ್ರೀಪುರುಷರೀರ್ವರಲ್ಲಿಯೂ ವಿದ್ಯೆಯನ್ನು ಪ್ರಚುರಗೊಳಿಸಲಿಕ್ಕೆ ಇವರು ಸದಾ ಟೊಂಕ ಕಟ್ಟಿರುತ್ತಿದ್ದರು. ಸಮಾಜಸೇವೆಯೇ ಇವರ ನೈಸರ್ಗಿಕವಾದ ಧರ್ಮವಾಗಿದ್ದಿತು. ಅಲ್ಲಲ್ಲಿಗೆ ಬ್ಯಾಂಕುಗಳನ್ನು ಸ್ಥಾಪಿಸಿ, ಬಡ ರೈತರಿಗೆ ಹಣ ದೊರೆಯುವಂತೆ ಮಾಡಿ, ಬೇಸಾಯಕ್ಕೆ ಒಳ್ಳೇ ಉತ್ತೇಜನವನ್ನು ಕೊಡುತ್ತಿದ್ದರು. ಈಗ ಆಸಾಮವು ಚಹಾದ ತವರಮನೆಯಂತೆ ಮೆರೆಯುತ್ತಿರುತ್ತದಷ್ಟೇ ? ಈ ಪ್ರದೇಶದಲ್ಲಿ ಮೊಟ್ಟಮೊದಲು ಚಹಾದ ಗಿಡವನ್ನು ಬಿತ್ತಿ ಬೆಳೆದ ಶ್ರೇಯವು ನನ್ನ ತಂದೆಗೇನೇ ಸಲ್ಲುತ್ತದೆ. ಇವರು ನೇಯುವ ಅನೇಕ ಗಿರಣಿಗಳಿಗೆ ಹಣದ ಸಹಾಯವನ್ನು ಒದಗಿಸಿ ಕೊಟ್ಟು ಅವುಗಳನ್ನು ಊರ್ಜಿತಾವಸ್ಥೆಗೆ ತರುವರು. ಈ ಎಲ್ಲ ಸದ್ಧರ್ಮದ ಫಲವನ್ನು ಉಣ್ಣಲು ಇವರು ಈ ಜಗತ್ತಿನಲ್ಲಿ ಚಿರವಾಗಿ ಬಾಳಲಿಲ್ಲ. ತೋರಿಕೆಯಲ್ಲಿ ಮೊದಮೊದಲು ಈ ಎಲ್ಲ ಕಾರ್ಯಗಳು ನಿಷ್ಫಲವಾದಂತೆ ತೋರಿದವು. ಯಾಕಂದರೆ ಆಗಿನ ಕಾಲದ ಜನತೆಯಕ್ಕಿಂತಲೂ ಇವರು ಎಷ್ಟೋಪಟ್ಟು ಮುಂದಾಗಿದ್ದದ್ದೇ ಇದರ ಮುಖ್ಯ ಕಾರಣವು.

ಈ ತರದ ಅಪಜಯವನ್ನೇ ಜಯವಾಗಿ ಇಟ್ಟುಕೊಂಡು ಜಯಾಪಜಯದ ದ್ವಂದ್ವದ ಬಾಧೆಯಿಂದ ನಾನು ಮುಕ್ತನಾಗಿರುವೆನು. ಇದರಿಂದಲೇ ನನ್ನ ಕಾರ್ಯದ ಸುಫಲತೆಯು. ನನ್ನ ಪೂಜ್ಯಪಿತನ ಜೀವಿತವೆಂದರೆ ನನಗೆ ಒಂದು ದೊಡ್ಡ ಆಶೀರ್ವಾದವೇ ಸರಿ. ಅವರು ತಮ್ಮ ಜೀವಿತದಲ್ಲಿ ಮಣ್ಣುಗಲಿಸಿದರೆಂದು ಅನೇಕ ಜನರ

ಮತವು ಇಂಥ ಅನೇಕ ಜನರ ದೇಹದ ಅಸ್ಥಿಪಂಜರದ ಮೇಲೆಯೇ ಪೃಥ್ವಿಯು ಆಧಾರವು. ಭಾವೀ ಹಿಂದು ಸಾಮ್ರಾಜ್ಯದ ತಳಹದಿಯೆಂದರೆ ಇಂಥ ಅನೇಕ ಸದ್ಮಣಿಗಳ ದೇಹತ್ಯಾಗವೇ ಅಲ್ಲವೆ? ಮಾತೆಯು ನಮ್ಮೆಲ್ಲರ ಸತ್ವಸಿದ್ಧಿಗೋಸ್ಕರ ಇಂಥ ಅನೇಕ ಜನರ ಆಹುತಿಯನ್ನು ಬೇಡುತ್ತಿರುವಳು ನಮ್ಮೆಲ್ಲರಿಗೆ ಅತ್ಯಂತ ಪ್ರೇಮದಾಯಕ ವಸ್ತುಗಳನ್ನು ಅವಳ ಚರಣಾರವಿಂದಗಳಿಗೆ ಅರ್ಪಿಸಿ, ಅವಳ ಸುಪ್ರಸನ್ನತೆಯನ್ನು ನಾವು ಪಡೆಯಬೇಕಲ್ಲವೆ? ಇದರಿಂದಲೇ ತಾಯಿಮಕ್ಕಳ ಧವಲಿತವಾದ ಕೀರ್ತಿಪರಿಮಳಕ್ಕೆ ಪರರಾಷ್ಟ್ರಗಳೆಂಬ ತುಂಬಿಗಳು ಮೋಹಿಸಿ ಸುಸ್ವರದಿಂದ ಅವಳ ಗುಣಗಾನವನ್ನು ಮಾಡದೆ ಇರವೋ ? ”

## ದೀರ್ಘಸಾಹಸವು.

“ ಇದ್ದ ಪರಿಸ್ಥಿತಿಗೆ ಬೆದರಿ ಬೆಂಡಾಗಿ ಕುಳಿತುಕೊಳ್ಳುವದು ನನ್ನ ಮನಸ್ಸಿಗೆ ಚಿಕ್ಕ ವಯಸ್ಸಿನಿಂದಲೂ ಬರುತ್ತಿರಲಿಲ್ಲ. ಇದ್ದ ಪರಿಸ್ಥಿತಿಯಲ್ಲಿಯೇ ಇದ್ದುಕೊಂಡು ಈಶನಲ್ಲಿ ಸಂಪೂರ್ಣ ವಿಶ್ವಾಸವನ್ನಿಟ್ಟುಕೊಂಡು ಕಾರ್ಯವನ್ನು ಜರುಗಿಸುತ್ತ ಹೋದರೆ ಅದೇ ಪರಿಸ್ಥಿತಿಗೆ ಹೊಸ ಸ್ವರೂಪವು ಬಂದು ಕಾರ್ಯಸಿದ್ಧಿಯಾಗುವದು. ಮುಂದೆ ಸಿಗತಕ್ಕ ಫಲದ ಕೋಂಚು ಪ್ರಕಾಶವು ಒಮ್ಮೆ ನಮ್ಮ ದೃಷ್ಟಿಗೆ ಹೊಳೆಯಿತೆಂದರೆ ಅದನ್ನು ಪದೇ ಪದೇ ಧ್ಯಾನಿಸಿ ಕೈವಶಮಾಡಿಕೊಳ್ಳುವುದಕ್ಕೆ ತನು—ಮನ—ಧನಗಳನ್ನು ಅರ್ಪಿಸಬೇಕು. ಅಂದರೇನೇ ಪೂರ್ವದಲ್ಲಿ ಅಸಾಧ್ಯವಾಗಿ ತೋರಿದ ವಸ್ತುವು ಅಂತ್ಯದಲ್ಲಿ ಸುಸಾಧ್ಯವಾಗಿ ಪರಿಣಮಿಸುವದೆಂಬದಲ್ಲಿ ಸಂಶಯಪಡಕೂಡದು. ನನ್ನ ಕಾರ್ಯಸಿದ್ಧಿಯೇ ಈ ತರದ ನಿಯಮದ ಸತ್ಯತೆಯ ಬಗ್ಗೆ ನಿಜವಾದ ದ್ಯೋತಕವು. ಯಾಕಂದರೆ ನನ್ನ ಸಂಶೋಧನ ಮಂಡಲವು ಸ್ಥಾಪಿತವಾಗಿದ್ದು ಇದೇ ತಾನೇ ಮೂರು ವರ್ಷಗಳು ಗತಿಸಿಹೋಗಿರುವವು. ಇಷ್ಟು ಅಲ್ಪಾವಧಿಯಲ್ಲಿಯೇ ಪೃಥ್ವಿಯೊಳಗಿನ ಮಹತ್ವವಾದ ಸಂಶೋಧನ ಮಂಡಳಗಳಲ್ಲಿ ಇದು ಒಂದಾಗಿ ಹೆಸರು ಪಡೆದಿರುವದನ್ನು ನೋಡಿದರೆ ನನ್ನ ಮನವು ಉಲ್ಹಾಸದಿಂದ ಉಕ್ಕಿ ಬರುತ್ತದೆ ಪರರಾಷ್ಟ್ರಗಳಲ್ಲಿ ಬಹು ಪ್ರಖ್ಯಾತಗೊಂಡ ವಿದ್ವ

ನ್ಮಣಿಗಳೂ ಕೂಡ ಇಲ್ಲಿ ಶಿಕ್ಷಣವನ್ನು ಪಡೆಯಲು ಹಾತೊರೆಯುತ್ತಿರುವರು. ಈದೃಶ ವಿಜಯವು ಪೂರ್ವದ ವೈಭವವನ್ನು ಪುನಃ ಶೀಘ್ರದಲ್ಲಿಯೇ ತಂದುಕೊಡುವದರೆಂಬಲ್ಲಿ ನನ್ನ ಮನವು ಸಾಶಂಕವೃತ್ತಿಯನ್ನು ತಳೆಯಲಾರದು. ನನ್ನ ಕೈಲಾದ ಮಟ್ಟಿಗೆ ನಾನು ಇದಕ್ಕೆ ನೆರವಾಗಿ ಇದನ್ನು ರಾಷ್ಟ್ರದೇವತೆಗೆ ಅರ್ಪಿಸುತ್ತೇನೆ. ಇದನ್ನು ಹೆಚ್ಚಾಗಿ ವೃದ್ಧಿಗೊಳಿಸಿ ಪರರಾಷ್ಟ್ರಗಳಿಂದ ವಿದ್ವದ್ರತ್ನಗಳನ್ನು ಆಕರ್ಷಿಸುವಂತೆ ಮಾಡುವದು ತಮ್ಮನ್ನು ಕೂಡಿರುತ್ತದೆ.

ಅಪಾರವಾದ ವಿದ್ಯೆಯೆಂಬ ಸಾಗರದಲ್ಲಿ ಮುಳುಗಿ ಅನೇಕ ರತ್ನಗಳನ್ನು ಹೊರಪಡಿಸುವದು ಪ್ರತಿಯೊಬ್ಬ ಮಾನವನು ತನ್ನ ಕರ್ತವ್ಯಕರ್ಮವೆಂದು ಭಾವಿಸಬೇಕು. ಎರಡು ವರ್ಷಗಳಲ್ಲಿ ಬೆಳೆಯುತಕ್ಕ ಪೈರನ್ನು ಒಂದೇ ವರ್ಷದಲ್ಲಿ ಬೆಳೆಯಲು ಎಲ್ಲರೂ ಪ್ರಯತ್ನಿಸಬೇಕು. ಇದೇ ಸೃಷ್ಟಿಯ ವರಪ್ರದಾನವು. ೨೦ ಶತಮಾನಗಳ ಹಿಂದೆ ಅಶೋಕರಾಜನು ಇದನ್ನೇ ಶಿಲಾಲಿಪಿಯಾಗಿ ಬರೆದಿಡಲಿಲ್ಲವೇ ?

"ಭೂಮಂಡಲದ ಎಲ್ಲ ದಿಶೆಗಳಲ್ಲಿಯೂ ತಿರುಗಾಡಿ ವಿದ್ಯೆಯ ನಿಧಿಯನ್ನು ವೃದ್ಧಿಗೊಳಿಸಿರಿ. ಭಯಾನಕರ ಕೂಡ ಸಹ ಬಂಧುತ್ವ-ಪ್ರೇಮಭಾವವನ್ನು ಬೆಳಿಸಿ, ಅವರಲ್ಲಿದ್ದ ವಿದ್ಯಾಹರಣವನ್ನೇ ಮಾಡಬೇಕು." ಅಹಹಾ! ಇದೆಂಥ ರಾಜಧರ್ಮವು !!

---

## ಕರ್ತವ್ಯ ಜಾಗ್ರತೆಯು.

[ ೧೯೩೧ನೇ ಇಸ್ವಿಯ ಜಾನೆವರಿಯಲ್ಲಿ ಮುಂಬಯಿಯ ಸೇಂಟ ಝೇವಿಯರ್ಸ ಕಾಲೇಜದಲ್ಲಿ ಪ್ರೊಫೇಸರ ಜೇಡ್ಸ ಇವರ ಅಧ್ಯಕ್ಷತೆಯ ಕೆಳಗೆ ಸರ್ ಜಗದೀಶಚಂದ್ರರು ವಿದ್ಯಾರ್ಥಿಗಳನ್ನು ಕುರಿತು ವ್ಯಾಖ್ಯಾನವನ್ನು ಕೊಟ್ಟದ್ದು. ]

" ನನಗೆ ಈ ಪಟ್ಟಣದಲ್ಲಿ ನಿಲ್ಲಲು ಬಹಳ ಅವಕಾಶವು ಇಲ್ಲದಿದ್ದರೂ ನನ್ನ ಪ್ರಿಯ ವಿದ್ಯಾರ್ಥಿವರ್ಗವನ್ನು ನಾನು ಮರೆಯಲಾರೆನು. ಪದೇ ಪದೇ ನನ್ನ ವಿಚಾರಗಳನ್ನು ತಮ್ಮಗಳ ಮುಂದಿರಿಸುವದು ನನ್ನ ಕರ್ತವ್ಯವೆಂದೇ ನಾನು ತಿಳಿಯುತ್ತೇನೆ. ಯಾಕಂದರೆ ನಮ್ಮ ದೇಶದ ಭಾವೀ ಏಳ್ಗೆಗೆ ತಾವುಗಳೇ ಆಧಾರಸ್ಥಂಭಗಳು. ಈ ಕಂಬಗಳು ಗಟ್ಟಿಯಾದವೆಂದರೆ ಸುಖಸಾಮ್ರಾಜ್ಯದ ಕಟ್ಟಡಕ್ಕೆ ಯಾವತರದ

ಭಯವೂ ಇರಲಾರದು. ಇದೇ ತಾನೇ ವಿದ್ಯಾರ್ಥಿವರ್ಗಕ್ಕೆ ಮುಂದರಿದು ಕಾರ್ಯವನ್ನು ಮಾಡಲು ಅವಕಾಶವು. ಯಾಕಂದರೆ ವೃದ್ಧಪುರುಷರೆಲ್ಲರು ಕಾರ್ಯವನ್ನು ಮಾಡಿ ಮಾಡಿ ಬಹು ಆಯಾಸವನ್ನು ಹೊಂದಿರುವರು. ಇವರಿಗೆ ವಿಶ್ರಾಂತಿಯನ್ನು ಕೊಟ್ಟು ತಾವುಗಳು ಕಾರ್ಯಪ್ರವೃತ್ತರಾಗಬೇಕು. ನೀವು ಚಿರಂಜೀವಿಗಳು. ನಿಮ್ಮ ವಿಚಾರ, ಆಚಾರ, ಕಾರ್ಯದಕ್ಷತೆ ಮೊದಲಾದವುಗಳು ಭಾವೀ ತರುಣರಿಗೆ ಉನ್ನತಿಯ ನಿಜವಾದ ಸೋಪಾನಪಜ್ಕ್ತಿಯು. ತಮ್ಮಗಳಿಗೆ ದೇವರು ದಯಪಾಲಿಸಿದ ದೈವಿಕಶಕ್ತಿಯನ್ನು ಕಂಡಕಂಡಹಾಗೆ ವೆಚ್ಚಮಾಡಿ ಆಯುಷ್ಯವನ್ನು ಹಾಳುಮಾಡಬಾರದು. ಎಲ್ಲ ವ್ಯವಸಾಯಗಳನ್ನು ಬದಿಗಿಟ್ಟು, ರಾಷ್ಟ್ರಸೇವೆಯೊಂದನ್ನೇ ತಮ್ಮ ಏಕಾಗ್ರವೃಷ್ಟಿಯ ಮುಂದಿರಿಸಿಕೊಂಡು, ಕಾರ್ಯಕ್ಕೆ ಉದ್ಯುಕ್ತರಾಗಬೇಕು ಇದರಿಂದಲೇ ಗತವೈಭವವು ಮಾತ್ರೆಗೆ ಆಗತವಾಗುವದು. ಮಹಾಭಾರತದ ಕಥೆಯಲ್ಲಿ ರಾಜಕುಮಾರರಿಗೆ ಒಂದು ಪಕ್ಷಿಗೆ ಗುರಿಯಿಟ್ಟು ಹೊಡಿಯಿರಿ, ಎಂದು ಹಿರಿಯರು ಆಜ್ಞಾಪಿಸಿದರು. ಆಮೇಲೆ 'ತಮ್ಮಗಳಿರಾ, ಅದಕ್ಕೆ ಗುರಿಯಿಡುವ ಸಮಯದಲ್ಲಿ ಏನು ಈಕ್ಷಿಸಿದಿರಿ ?' ಎಂದು ಪ್ರಶ್ನೆಮಾಡಲು, ಅವರು ತಮಗೆ ಮನಬಂದಂತೆ ಉತ್ತರವನ್ನು ಕೊಟ್ಟರು. ಆದರೆ ಅರ್ಜುನನು ಮಾತ್ರ "ಕಣ್ಣುಗಳನ್ನು ನೋಡಿದೆನು" ಎಂದು ಉತ್ತರವನ್ನು ಕೊಟ್ಟನು. ಯಾವ ಪ್ರಕಾರ ಜಾಣನಾದ ಅರ್ಜುನನು ಆ ಪಕ್ಷಿಯ ಕಣ್ಣುಗಳಿಗೆನೇ ನಿರಿಯಿಟ್ಟನೋ ಅದೇ ಪ್ರಕಾರ ತಾವುಗಳಾದರೂ ತಮ್ಮ ಎಲ್ಲ ದಿವ್ಯಶಕ್ತಿಯನ್ನು ರಾಷ್ಟ್ರಸೇವೆಯೆಂಬ ನೇತ್ರಕ್ಕೇನೇ ಗುರಿಯಿಟ್ಟರೆ ತಮ್ಮಗಳಿಗೆ ಯಶವು ದೊರೆಯುವದು. ಈ ಬಗೆಯ ದೇಶಸೇವೆಯಂದರೆ, ತಾವುಗಳು ತಮ್ಮ ಬುದ್ಧಿಯ ಬಲವನ್ನು ವೃದ್ಧಿಗೊಳಿಸಿ, ಅದರಲ್ಲಿಯೇ ಧ್ಯಾನಸ್ಥರಾಗಿ ಮುಕ್ತರಾಗಬೇಕು. ತಾವುಗಳು ಸೃಷ್ಟಿಯ ಹೊಸಹೊಸ ಅದ್ಭುತ ಶಕ್ತಿಗಳನ್ನು ಕಣ್ಮುಟ್ಟಿ ಕಂಡುಹಿಡಿಯದೆ ಪುಸ್ತಕಗಳಲ್ಲಿ ಓದಿ ಮುಗ್ಧರಾಗುತ್ತಿರುವಿರಿ. ಇದರಿಂದ ನಿಮ್ಮ ಉನ್ನತಿಯೇ ಆಗಲಾರದು. ಆದ್ದರಿಂದ ತಾವುಗಳು ತಮ್ಮ ಜೀವನಪಾವಿತ್ರ್ಯದಿಂದಲೂ, ಕಾರ್ಯೈಕಾಗ್ರತೆಯಿಂದಲೂ ತಮ್ಮಗಳ ಉನ್ನತಿಯ ಸಲುವಾಗಿ ಹಗಲಿರುಳು ಹೆಣಗಬೇಕು. ತಾವುಗಳು ಹಣದ ಸಂಚನೆಯಲ್ಲಿ ಮಗ್ನರಾದರೆ, ಸರ್ವಸ್ವವನ್ನೂ ನಾಶಗೊಳಿಸುವಿರಿ ಆದ್ದರಿಂದ ಈ ಹಾಳು ದುಡ್ಡಿಗೆ ಮರುಳಾಗದೆ, ಕಾರ್ಯಜಾಗೃತಿಯಿಂದ ಪೃಥ್ವಿಯನ್ನು ಕೂಡ ಜಯಿಸಿ, ಇವನ್ನಾದರೂ ತ್ಯಾಗಮಾಡಬೇಕು. ಇದೇ ನಿಷ್ಕಾಮಕರ್ಮಫಲದ

ಸನ್ಯಾಸವು. ಈದೃಶ ಕಾರ್ಯಕ್ಕೆ ನಿಮ್ಮಲ್ಲಿ ಗಟ್ಟಿಗರಿದ್ದವರು ಮುಂದರಿಯಿರಿ. ಹೇಡಿಗಳು ಹಿಂಜರಿಯಲಿ. ಎಷ್ಟು ಭಯಂಕರ ವಿಪತ್ತುಗಳು ಬಂದಾಗ್ಯಾದರೂ ಅವುಗಳನ್ನು ನೀವು ಎದುರಿಸಿ, ಚದುರಿಸಬೇಕು. ಇದರಲ್ಲಿಯೇ ನಿಮಗೆ ನಿಜವಾದ ಗೌರವವು. विघ्नैः पुनः पुनरपि प्रतिहन्यमाना आरब्धमुत्तमजना न परित्यजन्ति । ನನ್ನಂತೆಯೇ ತಮ್ಮಗಳಿಗೆ ತಾಳ್ಮೆಯು ಬೇಕು. ಪೂರ್ವದಲ್ಲಿ ಉಪಹಾಸಕ್ಕೆ ಗುರಿಯಾದರೂ, ಅಂಗೀಕೃತಕಾರ್ಯವನ್ನು ಬಿಡಬೇಡಿರಿ. ಸತ್ಯಕ್ಕೆ ಯಾವ ತರದ ಪ್ರತಿಬಂಧವೂ ಇರಲಾರದು. ಜಗತ್ತಿನಲ್ಲಿ ಧರ್ಮವು ಉಂಟು. ಇದು ಮಾತ್ರ ಬಲು ಸಾವಧಾನತೆಯಿಂದ ಲಭಿಸತಕ್ಕದ್ದು. ನಾನು ಕೈಕೊಂಡ ಇಪ್ಪತ್ತುವರ್ಷಗಳ ನಂತರ ನನ್ನ ಕಾರ್ಯವು ದೃಶ್ಯರೂಪವನ್ನು ಧಾರಣಮಾಡಿಕೊಂಡು, ಜನತೆಯ ಆದರಣೀಯ ನಿದರ್ಶನಕ್ಕೆ ಬಂದಿತು. ನೀವು ನೈರಾಶ್ಯವನ್ನು ತಳೆಯಬೇಡಿರಿ. ಅಹಹಾ ! ನಿಮ್ಮಲ್ಲಿ ಎಷ್ಟು ಅಪ್ರಕಟವಾದ ಗುಪ್ತಶಕ್ತಿಯು ಇರುತ್ತದಲ್ಲಾ ! ನಿಮ್ಮ ತಾರುಣ್ಯವಾದರೂ ತರತರಿತವಾದದ್ದು !! ಇವೆಲ್ಲ ಸದ್ಗುಣಗಳ ಸದುಪಯೋಗವನ್ನು ಮಾಡಿಕೊಂಡು, ದೇಶಸೇವೆಗೆ ಬದ್ಧಪರಿಕರರಾಗಿರಿ. ಇದರಿಂದ ನಿಮ್ಮ ಮಾತೆಯ ಉದ್ಧಾರವಾಗುವದಲ್ಲದೆ ಸರ್ವ ವಿಶ್ವದ ಹಿತವನ್ನೂ ಸಾಧಿಸಿದ ಶ್ರೇಯವು ನಿಮ್ಮ ಪದರಿನಲ್ಲಿಯೇ ಬೀಳತಕ್ಕದ್ದು. ಈದೃಶ ಕಾರ್ಯವು ಒಂದು ಬದಿಯಲ್ಲಿ ಆಯುರ್ವೇದದ ಪುನರುತ್ಥಾನವೂ, ಮತ್ತೊಂದೆಡೆಗೆ ಬೇಸಾಯದ ಸುಧಾರಣೆಯೂ, ಈ ಮೇರೆಗೆ ವಿಶ್ವವ್ಯಾಪಕವಿರಬೇಕು. ಇದರಂತೆ ಸರ್ವ ರಾಷ್ಟ್ರಗಳು ತಮ್ಮ ತಮ್ಮ ನೈಸರ್ಗಿಕ ಪ್ರವೃತ್ತಿಗನುರೂಪವಾಗಿ ಕಾರ್ಯವಿಭಾಗಗಳನ್ನು ಹಂಚಿಕೊಂಡು ಕಾರ್ಯಕ್ಕೆ ಉದ್ಯುಕ್ತರಾಗಬೇಕು. ಅಂದರೇನೇ ತಮ್ಮ ತಮ್ಮ ಕಾರ್ಯವಿಭಾಗದ ಹಿತಾಂಶವನ್ನು ಜನತೆಯ ಮುಂದಿರಿಸಲು ಸಾಧ್ಯವಾಗುವದು. ಇದನ್ನು ಎಲ್ಲ ಜನಾಂಗದವರು ಅನುಕರಣಮಾಡಿ, ಸುಖಶಾಂತಿಗಳನ್ನು ಹೊಂದುವರು. ಈ ಪ್ರಕಾರ ಸರ್ವತ್ರದಲ್ಲಿಯೂ ಧನಧಾನ್ಯಾದಿಗಳು ಹೆಚ್ಚಾದವೆಂದರೆ ಉದರನಿರ್ವಾಹದ ಚಿಂತೆಯು ಕಡಿದುಹೋಗುವದು. ಆ ಮೇಲೆ ಜನತೆಯ ದೃಷ್ಟಿಯು ಈಶಭಕ್ತಿ,-ಧರ್ಮ ಮೊದಲಾದವುಗಳ ಕಡೆಗೆ ಒಲೆಯುತ್ತದೆ. ಇದೇ ಇವರಿಗೆ ಮೋಕ್ಷಸಾಧನವು. ಅಹಹಾ ! ನೀವುಗಳು ನಿಮ್ಮ ನಿಮ್ಮ ಕರ್ತವ್ಯಕರ್ಮಗಳಲ್ಲಿ ನಿರತರಾದಿರಿ ಎಂದರೆ ಎಷ್ಟು ಅಖಂಡವಾದ ಕಲ್ಯಾಣವನ್ನು ನೀವು

ಜನತೆಗೆ ಮಾಡಿಕೊಟ್ಟಂತಾಗುವದು ಕಂಡಿರಾ ? ಇದೆಲ್ಲವು ನಿಮ್ಮೆಲ್ಲರ ಪುಣ್ಯದ ಬಲವತ್ತರವೇ ಅಹುದು ”

---

### संहतिः कार्यसाधिका ।

“ ಸಾಂಪ್ರತ ಕಾಲಕ್ಕೆ ಪ್ರತಿಯೊಂದು ಜನಾಂಗವು ತನ್ನ ಕಾರ್ಯದ ಗಲಾಟೆಯಲ್ಲಿ ಸತ್ಯವನ್ನು ಮರೆತುಕೊಳ್ಳಹತ್ತಿದೆ. ಆದರೆ ಈದೃಶ ಸ್ಥಿತಿಯು ಪರಸ್ಪರರಲ್ಲಿ ಆದರಾತಿಥ್ಯವು ಹೆಚ್ಚಿತೆಂದರೆ ಹೊರಟು ಹೋಗುವದು. ಅಂದರೆ ಪರಸ್ಪರರ ವಿಚಾರಸರಣಿಯು ಗೊತ್ತಾಗಿ ನಾವು ಮನುಷ್ಯರು, ಈ ವಿಶ್ವದಲ್ಲಿ ನೆರೆಹೊರೆಯವರು, ಎಂಬ ಭಾವನೆಯು ಪ್ರಾದುರ್ಭಾವವಾಗುತ್ತದೆ. ನೀವು ಆಂಗ್ಲರ , ನಾವು ಹಿಂದುಗಳು ಎಂಬ ಭಾವನೆಯು ತನ್ನಷ್ಟಕ್ಕೆ ತಾನೇ ಲಯುವನ್ನು ಹೊಂದುತ್ತದೆ. ತಾವುಗಳು ಆಸ್ಟ್ರೇಲಿಯಾ ಅಮೇರಿಕಾ ಮೊದಲಾದ ದೇಶಗಳಿಗೆ ಹೋಗಿ ಒಕ್ಕಲಾಗಿ ನಿಂತಿರುವಿರಿ. ಅಲ್ಲಿದ್ದ ಜನತೆಯು ಕೂಡ ನೀವು ಬಳಿಕೆಯನ್ನು ಮಾಡಿ ಅವರಲ್ಲಿ ಐಕ್ಯ ಹೊಂದಿದಿರೇನೋ ತಿಳಿಯದು. ಯಾಕಂದರೆ ಒಳ್ಳೇ ಗೌರವದಿಂದ ನಿಮ್ಮ ಆಂಗ್ಲ ನಾಮವನ್ನು ತೊರೆದು ‘ಆಸ್ಟ್ರೇಲಿಯನ್ನರು’ ‘ಅಮೇರಿಕನ್ನರು’ ಎಂದು ಹೆಸರಾಗಿರುವಿರಿ. ಇದೊಂದು ನಿಮ್ಮ ಆಂಗ್ಲರ ಹುಟ್ಟುಗುಣವೇ ಇರಬಹುದು. ಆದರೆ ನಮ್ಮ ದೇಶದಲ್ಲಿಯ ನಿಮ್ಮ ವರ್ತನವು ನಿಮ್ಮ ನೈಸರ್ಗಿಕ ಗುಣಕ್ಕೆ ಅಪವಾದವಾಗಿ ಪರಿಣಮಿಸಿರುವದು ಯಾಕಂದರೆ ನೀವು ಹಿಂದುಗಳೆಂದು ಹೇಳದಲೆ ‘ ಆಂಗ್ಲಹಿಂದುಗಳೆಂದು ’ ಯಾಕೆ ಕರೆಯಿಸಿಕೊಳ್ಳುವಿರೋ ನನ್ನ ಬುದ್ಧಿಗೆ ತೋಚದು. ಇತರ ರಾಷ್ಟ್ರಗಳಲ್ಲಿರುವ ನಿಮ್ಮ ಬಂಧುಗಳಂತೆ ಈ ರಾಷ್ಟ್ರದ ನಿವಾಸಿಗಳೆಂದು ಭಾವಿಸಿ, ಈ ದೇಶದ ಉನ್ನತಿಗಾಗಿ ಯತ್ನಿಸಿರಿ. ಯಾಕಂದರೆ ಇತಿಹಾಸವನ್ನು ಕೊಂಚ ನಿರೀಕ್ಷಿಸಿದರೆ ಪೂರ್ವದಿಂದಲೂ ನಮ್ಮ ಭೂಮಿಗೆ ಅನೇಕ ಜನಾಂಗದವರು ಬಂದಿದ್ದು ಕಾಲಕ್ರಮೇಣ ಇದೇ ಸ್ವಭೂಮಿಯೆಂದು ಭಾವಿಸತೊಡಗಿದರು. ಈ ಎಲ್ಲ ಜನಾಂಗದವರು ಒಟ್ಟಾಗಿ ರಾಷ್ಟ್ರದ ಏಳಿಗೆಗಾಗಿ ಯತ್ನಿಸಿದರೆ ಪುನಃ ಹಿಂದುಮಾತೆಯು ತನ್ನ ಪೂರ್ವದ ಅತ್ಯುಚ್ಚ ವೈಭವದ ಶಿಖರವನ್ನು ಆರೋಹಿಸುವಳು.

### Is the World a Cosmos or a Chaos.?

I would now make the briefest reference to some of my scientific conclusions. In stead of special creation and specific

characteristic I find that all life is one. The world is not a chaos. From the unity of life there follows as a postulate the the unity of all human efforts. It is a misreading of the law of nature to regard conflict as the only factor in evolution. For more potent than competition is mutual aid and renunciation in the scheme of life. It is true that the weakling who has refused the conflict, having required nothing, has nothing to renounce. He alone who has striven and won, can enrich the world with fruits of his victorious experience It is only out of struggle that sane inner power is born through which we come to realise the essential kinship of all humanity. It is through the eternal interaction of the outer and the inner that the world evolves. And the most living man is he, who having acquired through years of patience gives out in spontaneous out-flow. Thus in modern times we have a Rockfiller or a Carnegie. Is this an exception? Some twelve centuries ago the merchant princes of India adventured forth across unknown seas and shared their ancient heritage with the people among whom they lived. The ruins of Java and Cambodia still testify the creative impulse of that epoch. And Bengal too was not behind. Her scholar-adventurers with plain leaf manuscript as their sole merchadise crossed the Himalayan barriers and extended the great Indian culture to the farthest east.

ಈ ಸೃಷ್ಟಿಯೊಳಗೆ ಬಹಳ ಶಕ್ತಿಯು ಒಂದೇ ಸ್ಥಳದಲ್ಲಿ ಕಲೆಯುಲಾರದು. ಈ ನಿಯಮಕ್ಕೆ ಬಾಧೆಯು ಉಂಟಾದರೆ ಅದರ ಸ್ಫೋಟವು ಸಂಭವಿಸುವದು. ಇದಕ್ಕೆ ಕೆಲವರು ಉತ್ಕ್ರಾಂತಿಯೆನ್ನುವರು. ಈ ಮೇರೆಗೆ ಈ ತತ್ವವನ್ನು ಅಬಾಧಿತವಾಗಿ ಪಾಲಿಸುವ ರಾಜ್ಯವೇ ಸುರಾಜ್ಯವು. ಇದರ ಸಹಕಾರವೇ ಸುಸ್ಥಿರವಾದದ್ದು. ಸಾಂಪ್ರತಕಾಲಕ್ಕೆ ಈ ಸೃಷ್ಟಿಯ ನಿಯಮಕ್ಕೆ ವ್ಯತ್ಯಯವುಂಟಾಗಿರುವದು. ಆದ್ದರಿಂದಲೇ ಸಾರ್ವತ್ರಿಕ ಅಶಾಂತತೆಯು ಇಡೀ ಭೂಮಂಡಲದಲ್ಲಿ ತಲೆದೋರುತ್ತಲಾ

ರಂಭಿಸಿದೆ. ಸರ್ವರಾಷ್ಟ್ರಗಳಲ್ಲಿ ಧನಪ್ರಾಪ್ತಿಯು ಸಮನಾಗಿ ಆಗಿರುವದಿಲ್ಲ. ಕೆಲವು ಗಳಲ್ಲಿ ವಿಶೇಷ ಧನಸಂಚಯವಾಗಿದೆ. ಇದೇ ಮೂಲಕಾರಣವು. ಧನಪ್ರಾಪ್ತಿಯಾ ದರೂ ಸಾಕಷ್ಟು ಇಲ್ಲವೆಂದು ಕೆಲವರು ಊಹಿಸುತ್ತಾರೆ. ಈ ತರದ ಅಶಾಂತತೆಯು ಲಂಡನ, ಪ್ಯಾರಿಸ, ಬರ್ಲಿನ ಮೊದಲಾದ ಪಟ್ಟಣಗಳಲ್ಲಿ ಪ್ರಕೋಪಕ್ಕೆ ಬಂದಿರುವ ದು ನಾರ್ವೆ-ಸ್ವೀಡನ್ನಗಳಲ್ಲಿ ಮಾತ್ರ ಈ ತರದ ಮೇಲಾಟವು ಅಷ್ಟೊಂದು ಪ್ರಖರ ವಾಗಿಲ್ಲ. ಇವೆರಡು ದೇಶಗಳು ಚಿಕ್ಕವಿದ್ದು, ಜನಸಂಖ್ಯೆಯಾದರೂ ತಕ್ಕಮಟ್ಟಿ ಗಿದೆ. ಇಷ್ಟಾದಾಗ್ಯಾದರೂ, ಈ ಜನಾಂಗದವರು ಸ್ವತಂತ್ರವಾದ ಹಡಗಪಡೆಯ ನ್ನೂ, ಅತ್ಯುತ್ತಮವಾದ ವಿಶ್ವವಿದ್ಯಾಲಯವನ್ನೂ ಇಟ್ಟುಕೊಂಡಿರುವರು. ಇಲ್ಲಿಯ ಜನರಿಗೆ ಬಡತನವು ಅಪರಿಚಿತವು ನೋಡಿದರೆ, ಈ ರಾಷ್ಟ್ರಕ್ಕೆ ಅಷ್ಟೊಂದು ನೈಸ ರ್ಗಿಕ ಅನುಕೂಲತೆಗಳಿಲ್ಲ. ಹೀಗಾದರೆ ಈ ತರದ ಸುಸ್ಥಿತಿಯು ಅವರಿಗೆ ಹ್ಯಾಗೆ ಬಂದಿದೆ? ಇನ್ನದ್ದರಲ್ಲಿಯೋ ಅನೇಕ ಶಾಸ್ತ್ರೀಯ ಶೋಧಗಳನ್ನು ಕಂಡು ಹಿಡಿದು, ಪ್ರತಿಯೊಂದು ವಸ್ತುವಿನ ಸದುಪಯೋಗವನ್ನು ಮಾಡಿಕೊಂಡಿರುವರು. ಇದರಿಂದ ಲೇ ಅವರಿಗೆ ಧನಧಾನ್ಯಾದಿ ವಿಪುಲತೆಯು. ನಮ್ಮ ದೇಶದಲ್ಲಿ ನೈಸರ್ಗಿಕ ಅನುಕೂಲ ತೆಯು ಬಲು ಚನ್ನಾಗಿದೆ. ಆದರೆ ಇದನ್ನು ಉಪಯೋಗಿಸುವವರಾರು? ನಾವು ಚನ್ನಾಗಿ ಗೊಬ್ಬರವನ್ನು ಹಾಕಿ ಧಾನ್ಯವನ್ನು ಬೆಳೆದರೆ, ಒಂದು ತೆನೆಯು ಬದಲಾಗಿ ನಾಲ್ಕು ತೆನೆಗಳು ಬೆಳೆಯುತ್ತವೆ. ಆದುದರಿಂದಲೇ ಶಾಸ್ತ್ರೀಯ ಚಮತ್ಕೃತಿಗಳ ಶೋಧವೆಂದರೆ ದೇವರ ವರಪ್ರದಾನವೇ ಸರಿ. ನಮ್ಮಲ್ಲಿ ಈ ಕಾರ್ಯವನ್ನು ಜರು ಗಿಸಲು ಬಂಡವಾಳವೂ, ಅನೇಕ ಶಾಸ್ತ್ರಜ್ಞರೂ ದೊರೆಯುವರು. ಜನತೆಯಲ್ಲಿ ಸ್ವದೇಶಾಭಿಮಾನವೂ, ನೈಸರ್ಗಿಕ ಅನುಕೂಲತೆಗಳನ್ನು ಹೆಚ್ಚಿಸಬೇಕೆಂದು ಉತ್ಕಟೇ ಚ್ಛೆಯೂ ಉಂಟಾಗತೊಡಗಿರುವವು. ಆದರೆ ಇವರಲ್ಲಿ ವೈಶ್ಯವೃತ್ತಿಯು ಅಭಾವವೇ ಅಭಾವವು. ಆದರೆ ಆಂಗ್ಲರಾದ ನಿಮ್ಮಲ್ಲಿ ಈ ವೃತ್ತಿಗೆ ಏನೂ ಕೊರತೆಯುಂಟಾಗ ಲಾರದು. ಪರಸ್ಪರರಲ್ಲಿದ್ದ ಗುಣಗಳನ್ನು ಏಕೀಕರಿಸಿ ಕಾರ್ಯಕ್ಕೆ ಪ್ರವೃತ್ತರಾದರೆ ಯಾವದೂ ತಾನೇ ಅಸಾಧ್ಯವಾಗಲಾರದು. ಆದರೆ ದೈವದುರ್ವಿಪಾಕದಿಂದ ಪರಸ್ಪರ ರಲ್ಲಿ ವೈಷಮ್ಯವು ನೆಲೆಗೊಂಡಿದೆ. ಈ ದುಸ್ಥಿತಿಯನ್ನು ನೋಡಿದರೆ ನನಗೆ ಒಂದು ಕಥೆಯು ಜ್ಞಾಪಕಕ್ಕೆ ಬರುವದು. ಇಬ್ಬರು ದಾಯಾದಿಗಳು ಒಂದು ಆಕಳದ ಸಲು ವಾಗಿ ತಮ್ಮ ತಮ್ಮೊಳಗೆ ಬಡೆದಾಡುತ್ತಿದ್ದರು. ಒಬ್ಬನು ಅದರ ಕೋಡುಗಳನ್ನೂ, ಮತ್ತೊಬ್ಬನು ಅದರ ಬಾಲವನ್ನೂ ಹಿಡಿದು ಎಳೆದಾಡುತ್ತಿದ್ದರು ಅಷ್ಟರಲ್ಲಿಯೇ

ಒಬ್ಬ ಠಕ್ಕನು ಬಂದು ಆದರ ಹಾಲನ್ನು ಕರೆದುಕೊಂಡು ತನ್ನ ಕಾಲಿಗೆ ಬುದ್ಧೀ ಹೇಳಿದನು. "ಇಬ್ಬರ ಜಗಳ ಮೂರನೇದವನಿಗೆ ಆಯು" ಎಂಬ ನ್ಯಾಯದಂತೆ ನಿಮ್ಮಿಬ್ಬರ ಹಾಳಾಗುವದು. ಇದನ್ನು ಮಾತ್ರ ತಾವು ಎಂದಿಗೂ ಮರೆಯಬಾರದು. ಆದ್ದರಿಂದ ಹೀಗೆ ನಾಶವನ್ನು ಹೊಂದುವದಕ್ಕಿಂತ ನೀವರೆಲ್ಲರೂ ಒಕ್ಕಟ್ಟಾಗಿ, ಸ್ವಾರ್ಥವೆಂಬ ನೀಚವೃತ್ತಿಯನ್ನು ತೊರೆದು, ಕಾರ್ಯಸಿದ್ಧಿಗೆ ಹೆಣಗಬೇಕು. ಪುನಃ ನಮ್ಮ ಪೂಜ್ಯ ಭರತಮಾತೆಯು ಪೂರ್ವದಂತೆಯೇ ಅದ್ವಿತೀಯಳಾಗಿ ಮೆರೆಯುವಂತೆ ಮಾಡುವಂಥ ಶ್ರೇಷ್ಠ ಧರ್ಮವು ನಮ್ಮೆಲ್ಲರ ಆದ್ಯ ಪವಿತ್ರ ಕರ್ತವ್ಯವಲ್ಲವೇ?"

## ಅಷ್ಟಮದಲವು.

೧

### Researches and Discoveries.

(*From Modern Review of 1912.*)

1 The polarisation of electric ray by crystals.

2. On a New Electro-polariscope.

3. On the Double Refraction of the Electric Ray by a a Strained Di-electric.

4. On the Determination of the Indices of Electric Refraction.

5. On a simple and Accurate Method of determining the Index of Refraction of light.

6. Determination of the Wave-length of Electric Radiation.

7. On a complete apparatus for investigating the properties of Electric waves.

8. On the Selective conductivity exhibited by Polarising Substances.

9. On Electro-magnatic Radiation.

10. On the Determination of the Index of Refraction of Glass for the Elcectric Ray.

11. On the Influence of Thicknes of Air-space on Total Reflection of Electric Radiation.

12. On the Rotation of Plane of Polarisation of Electric Waves by a Twisted Structure.

13. On the Production of a "Dark Cross" in the Field of Electro-magnatic Radiation.

14. A Self recovering Coherer and study of Cohering Action of different Metals.

15. On the Electric Touch and the Molecular changes produced in Matter by the Action of Electric Waves.

16. On the Similarity of Effects of Electric Stimulus on Inorganic and Living Substances.

17. On the Artificial Retina.

18. On Binocular Alternation of Vision.

19. On the Continuity of effect of Light and Electric Radiation on Matter.

20. On the Similarities between Mechanical and Radiation Strain.

21. On the Strain Theory of Photographic action.

22. On the Change of Conductivity of Metallic particles under Cyclic Electromotive Variation.

23. The Conductivity Crescograph.

24. On the Response of Inorganic Matter to Stimulus.

25. On the Electric Response in Ordinary Plants under Mechanical Stimulus.

26. On the Electromotive Wave accompanying Mechanical Disturbance in Metals.

27. The Latent Image and Molucular Strain Theory of Photographic action

28 On the Electric Pulsation accompanying Automatic movements in "Dismodium" gyrans.

29. Response in the Living and Non-Living

30. The Mechanical Response of Ordinary Plants.

31. Effects of Drugs on Response of Plants.

32. Death-spasm in Plants.

33. The Morograph.

34. Polar Effect of current in Excitation of Plants.

35. Electro-Tones in Plants.

36. Electro-tractile Response.

37. Multiple Response in Plants.

38. Inquiry into Causes of Automatic Pulsation.

39. Influence of Temperature on Automatic response.

40. Effects of Various Drugs on the Rhythmic Pulsation of Plants.

41. The Different Effects of Drugs on Plants of Different Constitutions

42. The Shoshungraph for Researches on tho Ascent of Sap.

43. The Growth Recorder.

44. The Balanced Crescograph.

45. Researches on Thermo-crescent Curve.

46. Researches on Positive and Negative Geotropism.

47. Determination of the Laws of Growth.

48. Fundamental Responsive Action of Plant to the Stimulus of Light.

49. Researches on Positive and Negative Heliotropism.

50. Researches on Diurnal Sleep.

51. Torsional response under Stimulus of Light and Gravity.

52. Plant Response as a means of Physiological Investigation.

53. The Electro-Motive Response of plant.

54. The Relation between Stimulus of Light and Gravity.

55. Rheotomic Observation of Electric Response of Plant,

56. Demonstration of Dual Character of Response.

57. Detection of Physiological Anisotrophy by Electrical Response

58 Natural Current in a Plant and its Variation.

59. Electrical Investigation on the Action of Drugs on Plant-tissue.

60. Determination of Variation of Excitability of Plant tissue by Method of Interference

61. The Current of Injurny and Negative Variation in Plant.

62. Current of Death.

63. Effect of Temperature on Electrical Response.

64. The Electrical Spasm of Death.

65. Multiple and Autonomous Electrical Response.

66. The Electrical Response of Leaves.

67. The Leaf considered as an Electrical Organ.

68. The Theory of Electrical Organ.

69. Researches on the Electrical Response of Skin Apithelium Gland and Digestive Organs in Plant and Animal.

70. Electrical Response of Plants to the Stimulus of Light.

71. Geo-Electric Response.

72. The Conductivity Balance.

73. Response by Variation of Electric Resistivity.

74. The Molucular Theory of Excitation and its Transmission.

75. Inorganic and Organic Memory.

ಸಮಾಪ್ತ



# APPENDIX.

# ಹೆಚ್ಚೋಲೆ.

## ೧. ಗ್ರಂಥಪರಿಚಯ.

ಮಹಾತ್ಮಾ ಗಾಂಧೀ ಕೃತ "ಆರೋಗ್ಯ ದಿಗ್ದರ್ಶನ." ( ಭಾಷಾಂತರಕಾರ ಯು. ನಾ. ಕೋಪರ್ಡೆ ಹುಬ್ಬಳ್ಳಿ. ಕ್ರಯ. ೧೨ ಆಣೆ. )

"ಆರೋಗ್ಯದ ನಿಯಮಗಳ ಬಗ್ಗೆ ಸಂಪೂರ್ಣವಾಗಿ ವಿಶಿಷ್ಟಜ್ಞಾನವನ್ನು ಜನತೆಗೆ ಮಾಡಿಕೊಡಲು ಈ ಪುಸ್ತಕವು ಧ್ಯೇಯವಾಗಿ ಇಟ್ಟುಕೊಂಡಿರುವದು. ಬೇನೆಬಿದ್ದು ಔಷಧವನ್ನು ಸೇವಿಸುವದಕ್ಕಿಂತ ಬೇನೆಯೇ ಬಾರದಂತೆ ಎಚ್ಚರಾಗಿರತಕ್ಕದ್ದು, ಎಂಬ ತತ್ವವನ್ನೇ ಮುಖ್ಯವಾಗಿ ಇವರು ಇಟ್ಟುಕೊಂಡಿರುವರು. ಔಷಧವನ್ನು ಸೇವಿಸುವದರಿಂದ ರೋಗಿಯು ತೋರಿಕೆಯಲ್ಲಿ ವಾಸಿಯಾದರೂ, ಅವನ ರೋಗಕ್ಕೆ ನಿರ್ಮೂಲವಾದ ಉಚ್ಚಾಟನವೇ ಬಂದಂತೆ ತೋರುವದಿಲ್ಲ ಇದಲ್ಲದೆ ಈ ಔಷಧಸೇವನೆಯಿಂದಲೇ ಹೊಸ ಹೊಸ ರೋಗಗಳು ನಮ್ಮ ಶರೀರದಲ್ಲಿ ಉದ್ಭವಿಸುವವೆಂದು ಅನೇಕ ತಜ್ಞ ವೈದ್ಯರ ಬಲವಾದ ಅಭಿಪ್ರಾಯವು. ಆದ್ದರಿಂದ ನೈಸರ್ಗಿಕೋಪಚಾರದಿಂದಲೇ ಶರೀರವ್ಯಾಧಿಗಳನ್ನು ದೂರಮಾಡಿಕೊಳ್ಳಬೇಕೇ ಹೊರ್ತು ಈ ತಕ್ಕ ಜಾಹೀರಾತುಗಳಿಂದ ಮರಳುಗೊಳಿಸುವ ವೈದ್ಯರ ಕಡಿಗೆ ಎಂದಿಗೂ ಧಾವಿಸಕೂಡದು. ಶುದ್ಧವಾದ ಶರೀರವು ಶುದ್ಧವಾದ ಮನಸ್ಸಿನಿಂದ ಯುಕ್ತವಾಗಿರುವದೇ ನಿಜವಾದ ಆರೋಗ್ಯದ ಮುಖ್ಯ ಲಕ್ಷಣವು. ನಮ್ಮ ದೇಹವೆಂದರೆ ಅಂತರಾತ್ಮನ ಮನೆಯು. ಅಂತರಾತ್ಮನು ಒಳಿತಾಗಿದ್ದರೆ ಮನುಷ್ಯನು ಸಜ್ಜನನಾಗಿ ಎಲ್ಲರ ಪ್ರೀತಿಗೆ ಪಾತ್ರನಾಗುತ್ತಾನೆ. ಶರೀರದೊಳಗಿನ ಆತ್ಮದಂತಿರುವ ಗುಲಾಬೀಹೂವಿನ ಮಕರಂದವನ್ನು ಸೇವಿಸಲು ಮಾತ್ರ ತುಂಬಿಗಳು ಕಷ್ಟಬಡುತ್ತವಲ್ಲವೇ ? ಆದರಿಂದ ಗುಲಾಬೀಹೂವಿಗೆ ಅಷ್ಟೊಂದು ಮಹತಿಯುಂಟಾಗಿದೆಯಲ್ಲವೇ? ಆದರೆ ಕಾಗದದ ಗುಲಾಬೀಹೂವಿಗೆ ಎಂದಾದರೂ ಮಧುಕರಗಳು ಮುಗಿಬೀಳುವವೇ ? ಆದ್ದರಿಂದ ಮನುಷ್ಯನು ತನ್ನ ಆತ್ಮವನ್ನು ಶುದ್ಧವಾಗಿ ಇಟ್ಟುಕೊಂಡರೆ ಸ್ವಹಿತ ಪರಾರ್ಥಗಳೆರಡೂ ಅವನಿಗೆ ಸಾಧಿಸು

ವವು. ಈ ನಮ್ಮ ದೇಹವು ಪಂಚಭೂತಾತ್ಮಗಳಿಂದ ನಿರ್ಮಿತವಾದ್ದರಿಂದ, ಇವುಗಳಲ್ಲಿ ಹೆಚ್ಚುಕಡಿಮೆಯಾಗದಂತೆ ಮನುಷ್ಯನು ಜಾಗರೂಕನಾಗಿರತಕ್ಕದ್ದು. ಸ್ವಚ್ಛವಾದ ಹವೆಯನ್ನು ಪ್ರತಿಯೊಬ್ಬ ಮನುಷ್ಯನು ಉಪಯೋಗಿಸಬೇಕು. ಅಶುದ್ಧವಾದ ಹವೆಯೇ ಅನೇಕ ಬೇನೆಗಳಿಗೆ ತವರಮನೆಯಾಗಿರುವದು. ಅದರಂತೆಯೇ ನೀರನ್ನು ಕಾಸಿ ಆರಿಸಿ, ಕುಡಿಯುವದು ಲೇಸು. ಮನುಷ್ಯನಿಗೆ ಮಿತವಾದ ಫಲಾಹಾರವೇ ಶ್ರೇಷ್ಠವಾದುದು. ಶಾಕಾಹಾರವು ಮಧ್ಯಮ ತರಗತಿಯದು. ಎಲ್ಲ ತರದ ವ್ಯಂಜನಪದಾರ್ಥಗಳನ್ನು ಬಿಡಬೇಕು. ಮಾಂಸಾಹಾರವಂತೂ ತ್ಯಾಜ್ಯವೇ ಸರಿ. ತನುಮನಗಳೆರಡನ್ನೂ ನಿರಂತರವಾಗಿ ವಿಕಾಸಗೊಳಿಸುವ ವ್ಯಾಯಾಮವೇ ಮನುಷ್ಯನಿಗೆ ಅತ್ಯವಶ್ಯಕವು. ಮನುಷ್ಯನ ಉಡಪು ಸಾದಾ ಇರತಕ್ಕದ್ದು; ಅಂದರೆ ಸ್ವಚ್ಛವಾದ ಹವೆಯು ರೋಮರಂಧ್ರಗಳಿಗೆ ತಗಲುವದು. ಅಖಂಡ ಬ್ರಹ್ಮಚರ್ಯೆಯನ್ನು ಪಾಲಿಸುವವರು ಶಾರೀರಿಕ, ಮಾನಸಿಕ, ಮತ್ತು ನೈತಿಕ ಪ್ರಗತಿಯಲ್ಲಿ ಅದ್ವಿತೀಯರು. ಈ ಎಲ್ಲ ವಿಷಯವು ಈ ಪ್ರಬಂಧದ ಮೊದಲಿನ ಭಾಗದಲ್ಲಿ ಅಡಕವಾಗಿರುವದು. ದ್ವಿತೀಯ ಭಾಗದಲ್ಲಿ ವಾಯು-ಜಲ-ಮೃತ್ತಿಕಾ ಮೊದಲಾದ ಚಿಕಿತ್ಸೆಗಳ ಕ್ರಮವನ್ನೂ, ಸಂಗ್ರಹಣೀ-ಸಂಕರರೋಗಾದಿಗಳ ನಿವಾರಣ ಕ್ರಿಯೆಯನ್ನೂ, ಇವರು ಚನ್ನಾಗಿ ಸಂಗ್ರಹಿಸಿರುವರು. ಭಾಷೆಯು ಬಲು ಸರಳ. ಮುದ್ರಣ-ಕಟ್ಟು-ಕಾಗದಾದಿಗಳೂ ಬಲು ನಯವುಳ್ಳವು. ಇದೊಂದು ಪ್ರತಿಯೊಬ್ಬನು ಸಂಗ್ರಹಿಸತಕ್ಕ ಪುಸ್ತಕವು."

---

## "ಆರೋಗ್ಯ ಜೀವನ."

(ಲೇಖಕಃ— ಎಂ. ಮಂಜಪ್ಪಾ ಹರ್ಡೇಕರ, ಸತ್ಯಾಗ್ರಹಾಶ್ರಮ, ಹರಿಹರ. ಬೆಲೆ. ೮- ಆಣೆ.)

"ಮೇಲ್ಕಾಣಿಸಿದ ಎಲ್ಲ ವಿಷಯಗಳನ್ನು ಇವರಾದರೂ ಒಳ್ಳೇ ಮಾರ್ಮಿಕ ರೀತಿಯಿಂದಲೂ, ಸುರಿತ ಲೇಖಣಿಯಿಂದಲೂ ಸಂಗ್ರಹಿಸಿರುವರು. ಇವರು ಈ ಪುಸ್ತಕವನ್ನು ಅನೇಕ ಆಧಾರಗಳಿಂದ ರಚಿಸಿರುವರು. ಇದರಲ್ಲಿ ನಿದ್ರೆ, ಲಂಘನ ಚಿಕಿತ್ಸೆ ಎಂಬೀ ವಿಷಯಗಳನ್ನು ಪ್ರತ್ಯೇಕವಾಗಿ ಇವರು ಬರೆದಿರುವರು. ಕೊನೆಯ ಪ್ರಕರಣದಲ್ಲಿ ಡಾ. W. W. ಹಾಲ್ ಎಂಬ ಪ್ರಸಿದ್ಧ ಪಂಡಿತರಿಂದ ರಚಿಸಲ್ಪಟ್ಟ ಕೆಲವು

ಆರೋಗ್ಯಸೂತ್ರಗಳು ಕೊಡಲ್ಪಟ್ಟಿವೆ. ಒಟ್ಟಿನ ಮೇಲೆ ಇದನ್ನು ಮೇಲ್ಕಾಣಿಸಿದ ಪುಸ್ತಕದ ಜೊತೆಗೆ ಸಂಗ್ರಹಿಸಿದರೆ, ಆರೋಗ್ಯವಿವಿಧವಿಜ್ಞಾನವನ್ನು ಸಂಗ್ರಹಿಸಿದಂತಾಗುವದು. ಇದರ ಮುದ್ರಣವಾದರೂ ಮುದ್ದಾಗಿದೆ. ”

---

## “ಹಿಂದೀ ಭಾಷಾಸಾರ.”

( ದೇಶೋನ್ನತಿ ಗ್ರಂಥಮಾಲಾ, ಸಂ. ೩. ಲೇಖಕ-- ಡೀ. ಕೇ. ಭಾರದ್ವಾಜ, ವಿದ್ಯಾಭೂಷಣ, ಮಂಗಳೂರ. ಬೆಲೆ ೦-೫-೦. )

“ ಈ ಚಿಕ್ಕ ಪುಸ್ತಕದ ಸಹಾಯದಿಂದ ಹಿಂದೀ ಭಾಷೆಯನ್ನು ಕನ್ನಡಿಗರು ಒಳ್ಳೇ ಸುಲಭವಾಗಿ ಕಲಿಯಲು ಸಾಧ್ಯವು. ಸರ್ವವ್ಯಾಕರಣ ನಿಯಮಗಳನ್ನು ಕನ್ನಡದಲ್ಲಿಯೇ ರಚಿಸಿರುವರು. ಅಲ್ಲಲ್ಲಿಗೆ ಕ್ರಿಯಾವಿಶೇಷಣ, ಗುಣವಾಚಕ, ಕ್ರಿಯಾಪದ, ನಾಮಪದ, ಪ್ರಾಣಿಗಳ ಹೆಸರು, ಶರೀರದಲ್ಲಿಯ ಅವಯವಗಳ ಹೆಸರು, ಆಹಾರದ ಬಗ್ಗೆ ಶಬ್ದ, ಬಂಧಗಳ ಹೆಸರು ಮೊದಲಾದ ವ್ಯವಹಾರೋಪಯುಕ್ತ ಶಬ್ದಗಳನ್ನು ಕೊಟ್ಟಿರುವರು. ಕೊನೆಗೆ ಕೆಲವು ಪಾಠಗಳನ್ನು ಮಾದರಿಯಾಗಿ ಕೊಟ್ಟಿರುವರು. ಇವೆಲ್ಲವುಗಳು ದೊಡ್ಡ ಪುಸ್ತಕಗಳಿಂದ ಉದ್ಧೃತವಾಗಿದ್ದು, ಒಳ್ಳೇ ಬೋಧಪ್ರದವಾಗಿವೆ. ಹೆಚ್ಚೋಲೆಯಲ್ಲಿ ಸುಪ್ರಸಿದ್ಧ ಹಿಂದೀ ಪತ್ರಿಕೆಗಳ ಪಟ್ಟಿಯನ್ನು ಕೊಟ್ಟು, ಹಿಂದೀಭಾಷೆಯನ್ನು ಬೆಳಿಸಿಕೊಳ್ಳಲು ಬಹಳ ಸಹಾಯವನ್ನು ಮಾಡಿರುವರು. ಮುದ್ರಣವಾದರೂ ಬಲು ಸೊಗಸಾಗಿದೆ. ”

---

## ಹೆಚ್ಚೋಲೆ.

---

### ೨. ಒಪ್ಪಿಗೆ.

ಶ್ರೀ. ಮಂಜಪ್ಪಾ ಹರ್ಡೇಕರ ಕೃತ:—

(೧) ಭಾರತೀಯರ ದೇಶಭಕ್ತಿ (೨) ಸ್ವಕರ್ತವ್ಯಸಿದ್ಧಾಂತ (೩) ಶ್ರೀಸ್ವಾಮಿ ರಾಮತೀರ್ಥರ ಉಪನ್ಯಾಸಸಂಗ್ರಹ ಭಾಗ ೩-೪-೫. (೪) ಆರೋಗ್ಯ ಜೀವನ. (೫) ವೀರಶೈವ ಸುಧಾರಣೆ. (೬) ರಾ| ಬ| ಮಲ್ಲಪ್ಪ ಬಸವಪ್ಪ ವಾರದ ಇವರ ಸಚಿತ್ರ ಚರಿತೆ (೭) ಆಧುನಿಕ ಜರ್ಮನಿ.

ಶ್ರೀ. ದತ್ತಾತ್ರೇಯ ಕೃಷ್ಣ ಭಾರದ್ವಾಜ, ವಿದ್ಯಾಭೂಷಣ ಕೃತಃ—

(೮) ಶ್ರೀಕೃಷ್ಣಜನ್ಮಾಷ್ಟಮಿ (೯) ಹಿಂದೀ ಭಾಷಾಸಾರ (೧೦) ದೀನಬಂಧು ಆಂಡ್ರೂಸರ ಅಸಹಕಾರ ಪತ್ರಗಳು (೧೧) ನೀತಿಧರ್ಮ ಅಥವಾ ಧರ್ಮನೀತಿ (೧೨) ಗಾಂಧೀ ಸಂದೇಶ (೧೩) ಅಮೃತಸರ ಪಟ್ಟಣವು. (೧೪) "ಶ್ರೀಕೃಷ್ಣ ಸಂದೇಶ," ಸಂಪಾದಕ, ಶ್ರೀ ಶ್ರೀನಿವಾಸಾಚಾರ್ಯ ಬುರ್ಲಿ, ಬಾಗಲಕೋಟಿ (೧೫) "ಕಾವ್ಯಗುಚ್ಛ," ಸಂಪಾದಕ ಶ್ರೀ ಹ. ಬ. ಕೊಣ್ಣೂರ, ಬಿಜಾಪುರ (೧೬) "ಭರತಖಂಡದ ಜೀವಜ್ಯೋತಿಗಳು" ಲೇಖಕ ಶ್ರೀ. ಎಚ್. ಚಿದಂಬರಯ್ಯನವರು, ಧಾರವಾಡ (೧೭) "ಆರೋಗ್ಯದಿಗ್ದರ್ಶನ" ಯು. ನಾ. ಕೋಪರ್ಡೇ, ಹುಬ್ಬಳ್ಳಿ, (೧೮) "ಕರ್ಮವೀರ" ಧಾರವಾಡ (೧೯) "ನೂತನ ಹಿತೋಪದೇಶ" ಲೇಖಕ ಎ. ಎನ್. ಸುಬ್ರಾವ ಬೆಂಗಳೂರ. [೨೦] "ಖಾದೀ ಸಂವಾದ" ಲೇಖಕ ಗುಂಡೂರಾವ ಖಾದ್ರಿ ಬೆಂಗಳೂರ. (೨೧) ಶ್ರೀ. ಅಮೃತರಾವ ಅಗಡಿ ಇವರ "ಬ್ರಾಹ್ಮೀ ತೈಲ," "ಊದಿನಕಡ್ಡಿ" ಮೊದಲಾದವುಗಳು. (೨೨) ಡಾ. ಶಾಂತವೀರರ "ಸ್ಟ್ಯಾಂಪ್ ಇಂಕ," ಇತ್ಯಾದಿ.



Printed by M. K. Joshi at the Karnatak Printi[ng Press,] Dharwar.

# ಯಲ್ಲಪ್ಪಾ ಬೆನಕಪ್ಪಾ ಸಾಂಬ್ರಾಣಿ ಧಾರವಾಡ.

ನಮ್ಮಲ್ಲಿ ನಿಪ್ಪಾಣಿ, ಕೊಲ್ಹಾಪೂರ ನಮೂನೆ, ಅಜರೆ, ವೆಂಗುರ್ಲೆ, ರತ್ನಾಗಿರಿ, ಧಾರವಾಡ ಮುಂತಾದ ಕೆರಗಳೂ; ( ವಂಟಮುರಿ ಚಿಕ್ಕೋಡಿ ), [ ವಿಜಾಪೂರ ಬಾಗಲಕೋಟ ] ಸವದತ್ತಿ ಮುಚ್ಚಿಗಳೂ; ಕ್ರೋಮಚರ್ಮದ ಕರಿ ಮತ್ತು ಬ್ರೌನ ಬಣ್ಣದ ಫುಲ್‌ಬೂಟ್ಸ್, ಲೇಸಿಂಗ ಮತ್ತು ಕ್ಲಿಪ್‌ಶೂಜೂ; ಸ್ಲಿಪರುಗಳೂ ಮಾರಲಿಕ್ಕೆ ಸಿಗುವವು. ಹೊಸದಾಗಿಯೂ ತಯಾರಾಗುತ್ತವೆ. ಜೋಡುಗಳನ್ನು ವ್ಹಿ. ಪಿ. ಪಾರ್ಸಲದಿಂದಲೂ ಕಳಿಸುವೆವು. ವಿಶೇಷಮಾಹಿತಿಯನ್ನು ಪತ್ರದಿಂದ ತಿಳುಕೊಳ್ಳಬಹುದು. ಸಣ್ಣ ದೊಡ್ಡ ಸಾಯಿಜಿನಂತೆ ಕಿಮ್ಮತ್ತಾದರೂ ಹೆಚ್ಚು ಕಡಿಮೆಯುಂಟು. ೫ರೂಪಾಯಿಯಿಂದ ಹೆಚ್ಚಿನ ರಕಮಿನ ವ್ಹಿ. ಪಿ. ತರಿಸುವದಿದ್ದಲ್ಲಿ ನಮಗೆ ೧। ರೂಪಾಯಿ ಅಗಾವು ಕಳುಹಿಸತಕ್ಕದ್ದು. ವ್ಹಿ ಪಿ. ಪರತ ಮಾಡಿದಲ್ಲಿ ವ್ಹಿ. ಪಿ. ಖರ್ಚು ವಸೂಲಮಾಡಲಾದೀತು. ಜೋಡುಗಳನ್ನು ಉಪಯೋಗಿಸದೆ ಇದ್ದಲ್ಲಿ ಗಿರಾಕಿಕಡಿಂದ ಜೋಡುಗಳನ್ನು ಪರತ ತೆಗೆದುಕೊಳ್ಳುವೆವು. ಜೋಡುಗಳನ್ನು ಕೊಂಡುಕೊಂಡು ನೋಡಿರಿ ! ಖಾತ್ರಿಯಾಗಲಿ.

ಬೆನಕಪ್ಪಾ ಭರಮಪ್ಪಾ ಸಾಮ್ರಾಣಿ ಆ್ಯಂಡ ಸನ್ಸ ಧಾರವಾಡ.

# ನಾಯಿಕರ ಆ್ಯಂಡ ಕಂಪನಿ, ಲಿಮಿಟೆಡ, ಬ್ಯಾಂಕರ್ಸ ಹುಬ್ಬಳ್ಳಿ.

ಇಂಡಿಯನ್ ಕಂಪನಿಗಳ ೧೯೧೩ನೇ ಇಸ್ವಿಯ ೭ನೇ ಆಕ್ಟದನ್ವಯ ಪ್ರಕಾರ ರಜಿಸ್ಟರ ಆಗಿರುತ್ತದೆ. ಈ ಬ್ಯಾಂಕಿನಲ್ಲಿ ಇತರ ಬ್ಯಾಂಕುಗಳಂತೆ ಗವರ್ನಮೆಂಟ ಬಾಂಡ, ಚಕ್, ಮತ್ತು ಹುಂಡಿ ವಗೈರೆ ತಕ್ಕೊಳ್ಳುವದಲ್ಲದೆ ಯೋಗ್ಯ ಸವಲತ್ತಿನಿಂದ ಡಿಪೋಜಿಟ ಹಣವನ್ನು ಇಟ್ಟುಕೊಳ್ಳಲಾಗುವದು. ಮತ್ತು ಪ್ರಾಮಿಸರಿ ನೋಟು, ಯೋಗ್ಯ ಜಾಮೀನು ಅಥವಾ ದಾಗೀನೆಗಳ ಮೇಲಿಂದ ಸಾಲ ಸಹಾ ಕೊಡುವದಲ್ಲದೆ ವ್ಯಾಪಾರಸ್ಥರಿಗೂ ಮತ್ತೂ ವಿಶೇಷ ವ್ಯವಹಾರ ಮಾಡುವವರಿಗೂ ಯೋಗ್ಯ ಸವಲತ್ತು ಕೊಡಲಾಗುವದು. ವಿಶೇಷ ಮಾಹಿತಿ ರೂಲ್ಸ ಪುಸ್ತಕದಿಂದ ಅಥವಾ ಬ್ಯಾಂಕ ಸೆಕ್ರೆಟರಿಗಳ ಕಡಿಂದಾ ತಿಳಕೊಳ್ಳಬೇಕು. ಮೇಲಿನ ವಿಳಾಸಕ್ಕೆ ಪತ್ರಬರೆಯಿರಿ.

## ಕಾಂಗ್ರೇಸ ಕಮಿಟಿಯ

# ಖಾದೀಮಂಡಲವು.

ನಮ್ಮಲ್ಲಿ ಎಲ್ಲತರದ ಖಾದೀ ವಸ್ತ್ರಗಳು ದೊರೆಯುವವು. ಟೊಪ್ಪಿಗೆ, ಪೇಟಾ, ಸೀರೆ, ಪತ್ತಲ, ಖಣ, ಉಡುವ ಮತ್ತು ಹೊರುವ ಧೋತರ, ಕೋಟಿನ ಗಿಂಟು, ಪೈರಣಿನ ಖಾದಿ, ಕಂಬಳಿ, ಖಾದೀ ಚೀಲ, ನವಾರು-ಲಾಡಿ ಮೊದಲಾದ ಸರ್ವತರದ ಶುದ್ಧ ಸ್ವದೇಶೀ ವಸ್ತ್ರಗಳು ದೊರೆಯುವವು ವಸ್ತ್ರಗಳು ಬಲು ನಯವುಳ್ಳವುಗಳು; ಯೋಗ್ಯ ದರದವು; ಬಹಳ ದಿವಸಗಳವರೆಗೆ ತಾಳಿಕೆ.

ಇದಲ್ಲದೆ ನಮ್ಮ ಅಂಗಡಿಯಲ್ಲಿ ಎಲ್ಲತರದ ಶಾಲೆ-ಕಾಲೇಜಗಳ ಪುಸ್ತಕಗಳೂ ಎಲ್ಲತರದ ಸ್ಟೇಶನರೀ ಸಾಮಾನಗಳೂ ಯೋಗ್ಯದರದಿಂದ ಮಾರಲ್ಪಡುವವು. ಬೊಂಬೇ ಕ್ರಾನಿಕಲ್, ಲೋಕಮಾನ್ಯ, ಮೌಜ, ಕರ್ಮವೀರ, ಮೊದಲಾದ ಎಲ್ಲ ತರದ ವೃತ್ತಪತ್ರಿಕೆಗಳು ದೊರೆಯುವವು.

ಇದಲ್ಲದೆ ನಮ್ಮ ಕಿರಾಣೀ ಸ್ಟೋರ್ಸನಲ್ಲಿ ಎಲ್ಲತರದ ಕಿರಾಣೀ ಸಾಮಾನುಗಳು ಯೋಗ್ಯಕ್ರಯದಿಂದ ಮಾರಲ್ಪಡುವವು. ಬೇಕಾದರೆ ಇವುಗಳನ್ನು ನಾವು ಮನೆಮನೆಗೆ ಕಳಿಸುವೆವು.

ತ್ವರೆ ಮಾಡಿರಿ ! ಅಲಭ್ಯ ಲಾಭವು !! ಸರ್ವಪದಾರ್ಥ ಸಂಗ್ರಹವು !!

ನಮ್ಮ ವಿಳಾಸ:—ರಾಮಚಂದ್ರ ಗೋವಿಂದ ಹುಕ್ಕೇರಿ
ಮೋತೀತಲಾವ ಚೌಕ, ಧಾರವಾಡ.

---

## ಕರ್ನಾಟಕ ರಾಷ್ಟ್ರೀಯ ಪಕ್ಷದ ವಾರಪತ್ರಿಕೆ

# ಕರ್ಮವೀರ

ಸಂಪಾದಕರು:— ರಂಗನಾಥ ರಾಮಚಂದ್ರ ದಿವಾಕರ

ಇದರೊಳಗಿನ ಲೇಖಗಳು ಎಷ್ಟು ನಿದಾರ್ಕ್ಷಿಣ್ಯದಿಂದಲೂ, ಲೋಕಹಿತ ಬುದ್ಧಿಯಿಂದಲೂ ಬರೆಯಲ್ಪಡುವವೆಂಬುದಕ್ಕೆ ಸರಕಾರದ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ಸರಕಾರದ ಆತಿಥ್ಯವನ್ನು ಸ್ವೀಕರಿಸಲು ಕಾರಾಗೃಹಕ್ಕೆ ಈ ಪತ್ರದ ಮೂವರು ಚಾಲಕರು ಹೋಗಿರುವರೆಂಬೋ ಮಾತು ಸಾಕು. ಶ್ರೀ ದಿವಾಕರರು ಇದೇ ಜನವರಿಯಲ್ಲಿ ಸೆರೆಮನೆಯಿಂದ ಬಂದಿದ್ದು ಸಂಪಾದಕತ್ವವನ್ನು ವಹಿಸಿ ದೇಶಸೇವೆಗೆ ಆರಂಭಿಸಿದ್ದಾರೆ. ಓದುಬರಹ ಬಲ್ಲ ಪತಿಯೊಬ್ಬ ಕನ್ನಡಿಗನೂ ಓದಲರ್ಹವಾದ ಪತ್ರಿಕೆ. ವಾರ್ಷಿಕ ಚಂದಾ ೩-೮-೦ ಮನಿಯಾರ್ಡರ ಮಾಡಿದರೆ ೪ ಆಣೆ ಹೆಚ್ಚು ವೆಚ್ಚ ಬೀಳಲಿಕ್ಕಿಲ್ಲ.

ವ್ಯವಸ್ಥಾಪಕ, ಕ[illegible]ರ ಧಾರವಾಡ.

# ಮ್ಯಾಜಿಕ್ ಪಿಲ್ಸ

ರಾತ್ರಿಯಲ್ಲಿ ವ ಇತರ ವೇಳೆಯಲ್ಲಿ ಸದಾ ಅನೇಕ ಕಾರಣಗಳಿಂದ ತಿಳಿಯದೆ ವೀರ್ಯ ನಷ್ಟವಾಗಿ ಜನನೇಂದ್ರಿಯವು ಕ್ಷುಬ್ಧವಾಗಿ ಅಶಕ್ತವಾಗುತ್ತದೆ. ಇದಕ್ಕೆ ಧಾತುಕ್ಷಯವೆನ್ನುವರು. ಯೋಗ್ಯವಯಸ್ಸಿನ ಪೂರ್ವದಲ್ಲಿ ಸ್ತ್ರೀಸಂಗ ಮಾಡುವದರಿಂದಲೂ, ಅತಿಮೈಥುನದಿಂದಲೂ, ತಮಗಿಂತ ಹೆಚ್ಚಿಗೆ ವಯಸ್ಸಾದ ಸ್ತ್ರೀಸಂಗ ಮಾಡುವವರಿಂದಲೂ ಈಗಿನ ತರುಣವರ್ಗಕ್ಕೆ ಯಾರೂ ಹೇಳದೆ ವ ಕಲಿಸದೆ ಕೆಟ್ಟ ಸಹವಾಸದಿಂದ ಮಾಡುವ ಹಸ್ತಕ್ರಿಯೆ ಮುಂತಾದವುಗಳಿಂದ ಆದ ಅಶಕ್ತತೆ, ಇಂದ್ರಿಯ ಶಿಥಿಲತೆ, ನಪುಂಸಕತ್ವ, ಸ್ವಪ್ನಾವಸ್ಥೆ, ಅಜೀರ್ಣವಿಕಾರ, ಹೃದಯಕಂಪ, ನಿಸ್ತೇಜ, ಕ್ಷೀಣತೆ ಮುಂತಾದವುಗಳು ಖಾತ್ರಿಯಿಂದ ಈ ಪಿಲ್ಸಗಳಿಂದ ಗುಣವಾಗಿ ಆಹಾರವು ಪಚನವಾಗಿ ರಕ್ತ ಮತ್ತು ವೀರ್ಯಗಳ ವೃದ್ಧಿಯಾಗಿ ಒಳ್ಳೇ ಉಮೇದುಬಂದು ಸ್ತ್ರೀಸಂಗಯಿಚ್ಛೆಯುಂಟಾಗಲಿಕ್ಕೆ ರಾಮಬಾಣ ಔಷಧವಿರುತ್ತದೆ. ಬಾಟಲಿ ೧ ಕ್ಕೆ ೨ ರೂ, ಟ. ಹಾ. ಬೇರೆ.

# ಪ್ರಾಣಮಿತ್ರ ಪಿಲ್ಸ

ಕಫರೋಗಕ್ಕೆ ರಾಮಬಾಣ ಔಷಧವು. ಹುಡುಗರ ಹೊಟ್ಟೆಯೊಳಗಿನ ಬೇನೆ ( ಮೂಗು ಹೊಚ್ಚಿ ಪುಟಿಯುವದು ಗಂಟಲಲ್ಲಿ ಆವಾಜ ಬರುವದು, ಪಕ್ಕಡಿ ಬಡಕೊಳ್ಳುವದು. ) ಇದಕ್ಕೂ ವ ಇತರ ಬೇರೆ ರೋಗಗಳಲ್ಲಿ ಕೂಡಿದ ಕಫದ [ ಶ್ಲೇಷ್ಮ ] ದೋಷಕ್ಕೂ ರಾಮಬಾಣ ಔಷಧವಿದ್ದು ಕೆಮ್ಮು, ದಮ್ಮು, ಗೂರು ಉಬ್ಬಸ, ಪ್ಲೇಗ, ಇನ್‍ಫ್ಲ್ಯುಯೆಂಝಾ, ಸನ್ನಿಪಾತ, ಅಸ್ಥಿಜ್ವರ, ಕಫಜ್ವರ, ಸತತ ಜ್ವರ, ಮುಂತಾದಕ್ಕೆ ಒಳ್ಳೇ ಅನುಭವಿಕ ಔಷಧವಿರುತ್ತದೆ. ವಿಶೇಷ ಮಾಹಿತಿ ಕ್ಯಾಟಲಾಗಿನಲ್ಲಿ ನೋಡಬೇಕು ಬಾಟಲಿ ಒಂದಕ್ಕೆ ೨ ರೂಪಾಯಿ ಟ. ಹಾ. ಬೇರೆ. ಅನುಪಾನವು ಬಾಟ್ಲಿ ಸಂಗಡ ಇರುತ್ತದೆ. ಇದರ ಹೊರ್ತು ಪ್ಲೇಗ ಟಿಂಕಚರ, ಇನ್‍ಫ್ಲ್ಯುಯೆಂಝಾ ಮಿಕ್ಶ್ಚರ, ಗನೋರಿಯಾಕ್ಯೂಅರ ( ಪರಮಾ ಉರಿಮೂತ್ರ ಧೋತರಕ್ಕೆ ಡಾಗು ಕೂಡ್ರುವದು, ಚೇತನಾ ಆದ ಕೂಡಲೆ ಶರೀರ ಸೋಯುವದು. ) ಜ್ವರದ ಗುಳಿಗೆ, ಡಾಯಮಂಡ ಆಯಿಲ್, ಹೆಲ್ಥೋರಿಯಾ ಮುಂತಾದ ಖಾತ್ರಿಯ ಔಷಧಗಳು ಸಿಗುತ್ತವೆ. ವಿಶೇಷ ಮಾಹಿತಿ ಬಗ್ಗೆ ಕ್ಯಾಟಲಾಗ ತರಿಸಿ ನೋಡಬೇಕು.

ನಮ್ಮ ವಿಳಾಸ:—ದಿ ಡೆಕ್ಕನ್ ಮೆಡಿಕಲ್ ವರ್ಕ್ಸ

ಹುಬ್ಬಳ್ಳಿ, ಜಿ॥ ಧಾರವಾಡ.

ಕನ್ನಡಿಗರ ಕಂಠೀಸರಕ್ಕೆ ಒಪ್ಪುವ

ಗ್ರಂಥರೂಪವಾದ **ನವರತ್ನಗಳು.** ಬೆಲೆ ಸುಲಭ!

ಲೇಖಕ:—ಹೊಸಕೆರೆ ಚಿದಂಬರಯ್ಯಾ.

| | | | |
|---|---|---|---|
| ಭರತನ ಬಂಧುಪ್ರೇಮ | ೦-೧೦-೦ | ನವೀನಕಲ್ಪ | ೦-೮-೦ |
| ಸುಧರ್ಮ ಪ್ರಭಾವ | ೦-೮-೦ | ರಾಸಕ್ರೀಡೆ | ೦-೬-೦ |
| ರಾಮನಾಮ ಮಹಿಮೆ | ೦-೫-೦ | ಗಣಪತಿ ಸ್ವಯಂವರ | ೦-೪-೦ |
| ಧ್ರುವಾಖ್ಯಾನ | ೦-೪-೦ | ಅನಸೂಯಾಖ್ಯಾನ | ೦-೪-೦ |

ಭರತಖಂಡದ ಜೀವಜ್ಯೋತಿಗಳು ೧-೪-೦

ಕೆ, ನಾರಾಯಣಪ್ಪ, ಅಧ್ಯಾತ್ಮಪುಸ್ತಕಾಲಯ, ಅರಸೀಕೆರೆ (ಮೈಸೂರದೇಶ)

---

## ಪಂ. ತಾರಾನಾಥರ ವನಸ್ಪತೀ ಸಂಗ್ರಹಾಲಯ.

ನಮ್ಮಲ್ಲಿ ದೊರೆಯುತಕ್ಕ ವನಸ್ಪತಿಗಳು:—

(೧) ಸರ್ವಶರಣ ಕೇಶ ತೈಲಗಳು.
(೨) ಬಲಭೀಮ ಆಹಾರ.
(೩) ಅಮೃತ.
(೪) ರಾಮಕೃಷ್ಣ ಸುಧಾ.
(೫) ಮಸೂರಿಕಾ ನಿವಾರಕೋಪಾಯ.
(೬) ಮಾರ್ತಾಂಡ ಭೈರವ.
(೭) ದಂತಮಂಜನ.
(೮) ಗಾಂಧೀ ಕೋಕೋ.

ತ್ವರೆ ಮಾಡಿರಿ! ತೀರಸ್ವಲ್ಪ ಸಂಗ್ರಹವು!! ಅತ್ಯಂತ ಗುಣಕಾರಕಗಳು.

ನಮ್ಮ ವಿಳಾಸ:—(೧) ಸುಬ್ಬಣ್ಣಾಚಾರ್ಯ ಅಧ್ವರ್ಯು,
ಮೋತೀತಲಾವ, ಧಾರವಾಡ

(೨) ರಾಮಚಂದ್ರ ಜೋಸಿ, ಕಿಲ್ಲೆ, ಹುಬ್ಬ

---

## "ವಿಜಯ"

ಧಾರವಾಡದ ದೈನಿಕವು ಮತ್ತು ವಾರಪತ್ರಿಕೆಯು. ಜಾಹೀರಾತಿಗೆ ಬಹು ಸೌಕರ್ಯ; ತ್ವರೆಮಾಡಿರಿ.

ಮ್ಯಾನೇಜರ, "ವಿಜಯ,"
ಧಾರವಾಡ-
ರ ೭

# ಇದುವರೆಗೆ ಪ್ರಸಿದ್ಧವಾದ ನಮ್ಮ ಮಾಲೆಯ

# ಕುಸುಮ ಗುಚ್ಛಗಳು.

ಪ್ರಥಮ, ದ್ವಿತೀಯ, ತೃತಿಯ ಷಣ್ಮಾಸದಲ್ಲಿ ಪ್ರಸಿದ್ಧವಾದವುಗಳು-

(೧) ಲೋಕಮಾನ್ಯವಿಜಯ (೨) ಸರೋಜಿನಿ ದೇವಿ (೩) ಮಹಾತ್ಮಾ ಗಾಂಧಿ (೪) ಲಾಲಾಲಜಪತರಾಯ (೫) ದೇಶಬಂಧು ಚಿತ್ತರಂಜನದಾಸ (೬) ರವೀಂದ್ರನಾಥ ಠಾಕೂರ. (೭) ಅರವಿಂದಘೋಷ. (೮) ಪಂಡಿತ ಮದನ ಮೋಹನ ಮಾಲವೀಯ. (೯) ಪಂಡಿತ ಮೋತೀಲಾಲ ನೆಹರು. (೧೦) ವೀರ ಅಲ್ಲೀ ಬಂಧುಗಳು. (೧೧) ದಾದಾಭಾಯಿ ನವರೋಜಿ. (೧೨) ಕೈ॥ ಗೋಪಾಳ ಕೃಷ್ಣ ಗೋಖಲೆ. (೧೩) ಜಗದೀಶ ಚಂದ್ರ ಬೋಸ. (೧೪) ಸಾಧ್ವೀ ಅಹಲ್ಯಾದೇವಿ ಹೋಳಕರ. (೧೫) ಲಕ್ಷ್ಮೀಬಾಯಿ ಝಾಂಸಿ.

ಚತುರ್ಥ ಷಣ್ಮಾಸದಲ್ಲಿ ಅರಳುವ ಸುಮನಗಳು:—

(೧೬) ಮ್ಯಾಝಿನಿ. (೧೭) ನೆಪೋಲಿಯನ್. (೧೮) ಕೌಂಟ ಲಿಓ ಟಾಲ್‌ಸ್ಟಾಯ್. (೧೯) ಲೆನಿನ್. (೨೦) ಮ್ಯಾಕ್ಸಿಸ್ವಿನಿ.

ಇವುಗಳಲ್ಲಿ ಪ್ರಸಂಗಾನುಸಾರವಾಗಿ ಹೆಚ್ಚುಕಡಿಮೆಯಾಗಬಹುದು.

## ಜಾಹೀರಾತಿನ ದರವು.

| | | ರೂ. ಆ. ಪೈ | | | ರೂ. ಆ. ಪೈ. |
|---|---|---|---|---|---|
| ಒಂದು ಪುಟವು | | ೬೦-೦-೦ | ವರ್ಷಕ್ಕೆ | ಮೇಲ್ಪುಟದ ಹಿಂಬದಿಯಲ್ಲಿ | ೯೦-೦-೦ |
| ೧/೨ | ,, | ೩೨-೦-೦ | ,, | ಕೊನೆಯ ಮೇಲ್ಪದಿಯಲ್ಲಿ | [illegible]-೦-೦ |
| ೧/೪ | ,, | ೧೮-೦-೦ | ,, | ,, ಹಿಂಬದಿಯಲ್ಲಿ | ೮೦-೦-೦ |
| ,, ೧/೮ | | ೧೧-೦-೦ | | ಗ್ರಂಥದ ಸಮಾಪ್ತಿಯ ಬದಿಯಲ್ಲಿ | ೭೨-೦-೦ |

ಕೃಷ್ಣ ಗುರು ಸಂಗಮ,

ಸಂಪಾದಕ, ಸ. ಛಾ. ಭ. ಗ್ರ. ಹುಬ್ಬಳ್ಳಿ

## ನಿಮಗೆ ಸ್ವಾಭಾವಿಕ ಹುರುಕಿನ ಔಷಧದ ಅವಶ್ಯಕತೆಯುಂಟೋ ?

ಹಾಗಾದರೆ

### ಸುಪ್ರಸಿದ್ಧ “ಪಶುಸಂಜೀವಿನೀ” ಶೋಧಕರಾದ

## ಡಾ॥ ಎಸ್. ಆರ್. ಕಿತ್ತೂರ

ಇವರ ಜಗತ್ಪ್ರಸಿದ್ಧ ಸ್ವಾಭಾವಿಕ ಹುರುಕಿನ ಔಷಧವನ್ನೇ ಉಪಯೋಗಿಸಿರಿ. ಯಾಕಂದರೆ, ಇವರು ಇತ್ತೀಚೆಗೆ ಒಂದೇ ಸಮನೇ ೨೦ ವರ್ಷ ಅದೇ ವಿಷಯದಲ್ಲಿ ಬಹುಪರಿಶ್ರಮವನ್ನು ತೆಗೆದುಕೊಂಡಿದ್ದು, ಯಾವ ತರದ ಸ್ಪರ್ಧೆಯನ್ನೂ ಲೆಕ್ಕಿಸದೆ, ಈಗಿನ ಕಾಲದ ಚರ್ಮರೋಗಗಳನ್ನು ಗುಣಮಾಡುವ ಧುರೀಣತ್ವವು ಇವರು ಶೋಧಿಸಿದ ಔಷಧಕ್ಕೇನೇ ಸಲ್ಲುತ್ತದೆ. ಸರ್ವ ಪ್ರಕಾರದ ಚರ್ಮರೋಗಗಳಾದ ಹಸೀಖಜ್ಜಿ, ಹುರುಕು, ಇಸಬು, ಗಜಕರ್ಣ ಮೊದಲಾದವುಗಳನ್ನು ನಿರ್ಮೂಲನಾಗಿ ನಾಶಮಾಡುವ ವಿಷಯಕ್ಕೆ ಇದರ ಕೀರ್ತಿಯು ಪತ್ರಿಕೆಗಳಲ್ಲಿಯೂ ಹರಡಿದೆ.

ಕಿಮ್ಮತ್ತು ಚೀಟು ೧ಕ್ಕೆ ೧ಆಣೆ, ೨೫ಕ್ಕೆ ೧ರೂ. ೫ಆ. ಟ. ಖ. ಬೇರೆ
ಗೇನು-ಶೀರು ನಾಶಕ ಚೂರ್ಣ ಕಿ. ಚೀಟು ೧ಕ್ಕೆ ೬ ಪೈ
ಕಣ್ಣುಬೇನೆಯ ಔಷಧ ,, ,, ,,
ಸೀಲಿ ಕಪ್ಪು ಮಸೀ ಪುಡಿ ,, ,, ,, ೩ ಪೈ
,, ,, ಬಾಟ್ಲಿ ,, ಬಾಟ್ಲಿ ,, ೧೨ ಆಣೆ

‘ಪಶುಸಂಜೀವಿನಿ’ (ಜನಗಳ ಎಲ್ಲ ಬೇನೆಗಳಿಗೆ ಅನುಪಾನಪರತ್ವದಿಂದ ಅದ್ವಿತೀಯ ಔಷಧವು)

೧೦ ತೊಲಿ ಡಬ್ಬಿ ಒಂದಕ್ಕೆ ೧ರೂಪಾಯಿ, ಟ. ಖ. ಬೇರೆ

ಹೆಚ್ಚಿನ ಮಾಹಿತಿಯು ಸಲುವಾಗಿ ಒಂದಾಣೆ ಸ್ಟಾಂಪು ಇಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ತಂತೀ ವಿಳಾಸ.
“ಶಾಂತವೀರ”
ಧಾರವಾಡ

ಡಾ॥ ಎಸ್. ಆರ್. ಕಿತ್ತೂರ (S. B. B. G.)
“ಪಶುಸಂಜೀವಿನಿ ಶೋಧಕ”